ಜನಶಕ್ತಿ

ಕನ್ನಡ ವಾರಪತ್ರಿಕೆ

Blog janashakthi.wordpress.com e-mail js_weekly@yahoo.com

ಸಂಪುಟ 7 ಸಂಚಿಕೆ 40

ಅಕ್ಟೋಬರ್ 6, 2013

ಪುಟ 16 ರೂ. 10/-





'ಎಸ್ಮಾ' ಮರು ಜಾರಿ ಪ್ರಸ್ತಾಪ ಕೈಬಿಡಿ



'ಮಹಿಳೆಯರ ಅಭಿವೃದ್ಧಿ ಆಗದೇ ದೇಶದ ಅಭಿವೃದ್ಧಿ ಸಾಧ್ಯವಿಲ್ಲ"

ಬೃಂದಾ ಕಾರಟ್



ಸಿದ್ದು ಕೊರಳಿಗೊಂದು ಗುದಿಗೆ

ಜೆಡಿ(ಎಸ್) ಪಾಠ ಕಲಿಯುವುದೆ?



ಹುಬ್ಬಳ್ಳಿಯಲ್ಲಿ ಇನ್ನೊಂದು ಮೈದಾನ ವಿವಾದ

ಅತಿಥಿ ಉಪನ್ಯಾಸಕರನ್ನು ಗೌರವಿಸಿ... ವೇತನ ಹೆಚ್ಚಿಸಿ......-ಬಿ.ರಾಜಶೇಖರಮೂರ್ತಿ

ರಾಜ್ಯ ಸರ್ಕಾರದ 362 ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸುಮಾರು 15 ವರ್ಷಗಳಿಂದ ಅರೆಕಾಲಿಕ ಮತ್ತು ಅತಿಥಿ ಉಪನ್ಯಾಸಕರಾಗಿ, ತಿಂಗಳಿಗೆ ಕೇವಲ 2–3 ಸಾವಿರದಂತೆ ವರ್ಷಕ್ಕೊಂದು ಬಾರಿ ವೇತನ ಪಡೆಯುತ್ತಾ ದುಡಿಯುತ್ತಿದ್ದಾರೆ. ಲಕ್ಷಾಂತರ ಬಡ ವಿದ್ಯಾರ್ಥಿಗಳ ಭವಿಷ್ಯಕ್ಕೆ ಬುನಾದಿಯಾಗಿ ಬಂದಿರುವ ಈ ಅತಿಥಿ ಉಪನ್ಯಾಸಕರು ಇಂದು ಬೀದಿ ಪಾಲಾಗಿದ್ದಾರೆ. ಬಡ ಮತ್ತು ಕೆಳ ಮಧ್ಯಮ ವರ್ಗದವರಾದ ಈ ಅತಿಥಿ ಉಪನ್ಯಾಸಕರು ಉನ್ನತ ಅಧ್ಯಯನ ಮಾಡಲು ತಮ್ಮ ಜೀವಮಾನದಲ್ಲಿ 25–30 ವರ್ಷಗಳ ಧೀರ್ಘಕಾಲ ಕಷ್ಟಪಟ್ಟು ಓದಿ, ಉತ್ತಮ ಉದ್ಯೋಗಕ್ಕಾಗಿಯೇ ವಿದ್ಯಾಭ್ಯಾಸ ಮಾಡಿ ತಮ್ಮ ಜೀವನವನ್ನು ಸವೆಸಿದ್ದಾರೆ. ಇಂತಹ ಸ್ನಾತಕೋತ್ತರ ಹಾಗೂ ಪಿ.ಹೆಚ್.ಡಿ. ಪದವೀಧರರು ಸರ್ಕಾರಿ ಪದವಿ ಕಾಲೇಜುಗಳಿಗೆ ಸೇವೆ ಸಲ್ಲಿಸಲು ಪ್ರಾರಂಭಿಸಿದ ದಿನದಿಂದಲೂ ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಆಳುವ ಸರ್ಕಾರಗಳನ್ನು ಒತ್ತಾಯಿಸಿಕೊಂಡು ಬಂದಿದ್ದಾರೆ. ಆದರೆ ನಮ್ಮನ್ನಾಳುವ ಸರ್ಕಾರಗಳು ಎಲ್ಲಾ ಜನತೆಯ ಏಳ್ಗೆಗಾಗಿ ಉದ್ಯೋಗ ಆಧಾರಿತವಾದ ಜನಾಭಿವೃದ್ಧಿ ನೀತಿಗಳನ್ನು ಕೈಬಿಟ್ಟು, ಕೇವಲ ಕಾರ್ಪೋರೇಟ್ ಕಂಪನಿಗಳಿಗೆ ಲಾಭ ತರುವಂತಹ ಆರ್ಥಿಕ ನೀತಿಗಳನ್ನು ಜಾರಿಗೆ ತರುತ್ತಿವೆ. ಹೀಗಾಗಿಯೇ ಶಿಕ್ಷಣಕ್ಷೇತ್ರವೂ ಸೇರಿದಂತೆ ಇಡೀ ಸೇವಾ ಕ್ಷೇತ್ರಗಳನ್ನು ವಾಣಿಜ್ಯೀಕರಿಸಿ ಖಾಯಂ ಉದ್ಯೋಗದ ಪರಿಕಲ್ಪನೆಯನ್ನೇ ನಾಶಗೊಳಿಸಲಾಗಿದೆ. ಖಾಯಂ ಉದ್ಯೋಗ ಎಂಬುದು ಮರೀಚಿಕೆಯಾಗಿ ಗುತ್ತಿಗೆ, ಹೊರಗುತ್ತಿಗೆ, ಗೌರವ ಸಂಭಾವನೆ, ತರಬೇತಿ, ಅತಿಥಿ, ಕ್ಯಾಶ್ಯೂವಲ್ ಮುಂತಾದ ಹೆಸರಿನಲ್ಲಿ ದುಡಿಸಿಕೊಳ್ಳುವಂತಹ ಅರ್ಥಿಕ ನೀತಿಗಳನ್ನು ಜಾರಿಗೆ ತರಲಾಗಿದೆ.

ಹೀಗಾಗಿಯೇ ಸರ್ಕಾರಿ ಇಲಾಖೆಗಳಲ್ಲಿ 1.25 ಲಕ್ಷಕ್ಕೂ ಮೀರಿ ಖಾಲಿ ಹುದ್ದೆಗಳಿದ್ದು, ಆ ಜಾಗಕ್ಕೆಲ್ಲಾ ಹೊರ ಗುತ್ತಿಗೆ ಆಧಾರದಲ್ಲೇ ನೇಮಿಸಿಕೊಂಡು ಅತ್ಯಂತ ಕಡಿಮೆ ವೇತನಗಳಿಗೆ ದುಡಿಯುವಂತೆ ನಿರುದ್ಯೋಗಿಗಳನ್ನು ಪ್ರೇರೇಪಿಸಲಾಗುತ್ತಿದೆ. ಇದರ ಒಂದು ಭಾಗವಾಗಿಯೇ ಪ್ರಸಕ್ತ ವರ್ಷದಲ್ಲಿ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸುಮಾರು 10,600 ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಂಡು ಕೇವಲ 8–10 ಸಾವಿರ ವೇತನವನ್ನು ವರ್ಷಕ್ಕೊಂದು ಬಾರಿ ನೀಡುವ ಕಳೆದ ಬಿಜೆಪಿ ಸರ್ಕಾರದ ನೀತಿಯನ್ನೇ ಈ ಘನ ಸರ್ಕಾರವೂ ಅನುಸರಿಸುತ್ತಿದೆ. ಇದು ಅತ್ಯಂತ ಅಮಾನವೀಯವಾಗಿದ್ದು, ಎರಡು ತಿಂಗಳು ಕೆಲಸ ಮಾಡಿಕೊಂಡು ಬಂದಿರುವ ಅತಿಥಿ ಉಪನ್ಯಾಸಕರನ್ನು, ಖಾಯಂ ಉಪನ್ಯಾಸಕರು ವರ್ಗಾವಣೆಯಾಗಿ ಬಂದಿದ್ದಾರೆಂದು ಮನೆಗೆ ಕಳುಹಿಸಲಾಗುತ್ತಿದೆ. ಇನ್ನೊಂದೆಡೆ ಮಹಿಳಾ ಅತಿಥಿ ಉಪನ್ಯಾಸಕರು ಗರ್ಭಿಣಿಯಾದರೆ, ಹೆರಿಗೆಯಾದರೆ ಕೆಲಸ ಕಳೆದುಕೊಂಡು ಮನೆಗೆ ಹೋಗುವ ಪರಿಸ್ಥಿತಿ ಎದುರಾಗಿದೆ.

ಕಳೆದ ವರ್ಷದ ವೇತನ ಇನ್ನೂ ಸಮರ್ಪಕವಾಗಿ ಇವರಿಗೆ ತಲುಪಿಲ್ಲ. ಇನ್ನೂ ಈ ವರ್ಷದ ವೇತನ ಬಿಡುಗಡೆಯ



ಗೋಜಿಗೆ ರಾಜ್ಯ ಸರ್ಕಾರ ಮುಂದಾಗಿಲ್ಲ.

ಇದರಿಂದಾಗಿ ಸರ್ಕಾರಿ ಕಾಲೇಜುಗಳಲ್ಲಿ ಓದುತ್ತಿರುವ ಲಕ್ಷಾಂತರ ಪದವಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕುತ್ತು ಬಂದಿದೆ. ಇಂತಹ ಹುದ್ದೆಗಳನ್ನೇ ನಂಬಿ 10–15 ವರ್ಷಗಳ ಕಾಲ ಸೇವೆ ಸಲ್ಲಿಕೊಂಡು ಬಂದಿರುವ ಅತಿಥಿ ಉಪನ್ಯಾಸಕರಿಗೆ ವಯೋಮಿತಿ ಮೀರುತ್ತಿದ್ದು, ಬೇರೆ ಉದ್ಯೋಗಗಳಿಗೆ ಹೊರಳಿಕೊಳ್ಳುವುದೂ ಅಸಾಧ್ಯವಾಗಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಅತಿಥಿ ಉಪನ್ಯಾಸಕರಾಗಿ ಕೆಲಸಕ್ಕೆ ಸೇರಿರುವ ಇವರಿಗೆ ಅಭದ್ರತೆಯು ಉದ್ಯೋಗವನ್ನು ಮಾಡದಂತಹ ಪರಿಸ್ಥಿತಿ ನಿರ್ಮಿಸಿದೆ. ಈಗಾಗಲೇ



ಖಾಯಂ ಉಪನ್ಯಾಸಕರ ಜೊತೆಯಲ್ಲಿ ಅತಿಥಿ ಉಪನ್ಯಾಸಕರು ಗೌರವದಿಂದ ಕೆಲಸ ಮಾಡಲು ಆಗದೆ ಪರಿತಪಿಸುತ್ತಿದ್ದಾರೆ. ಕಾಲೇಜುಗಳಲ್ಲಿದ್ದಾಗ ಮೂಲ ಭೂತ ಸಮಸ್ಯೆಗಳ ಕೊರತೆಯಿಂದ ಕೂರಲು ಕೊಠಡಿಗಳಿಲ್ಲ. ಕೂರಲು ಕುರ್ಚಿಗಳೂ ಇಲ್ಲದೆ ಅವ್ಯವಸ್ಥೆಯ ಆಗರದಲ್ಲಿದ್ದಾರೆ. ಇವರ ಪರಿಸ್ಥಿತಿ ನೋಡಿ ವಿದ್ಯಾರ್ಥಿಗಳು ಅಣಕಿಸುವ ಪರಿಸ್ಥಿತಿ ಇದೆ. ಕಳೆದ ತಿಂಗಳು ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ ಅಯೋಜಿಸಿದ್ದ, ಅತಿಥಿ ಉಪನ್ಯಾಸಕರ ರಾಜ್ಯ ಮಟ್ಟದ ಸಮಾವೇಶದಲ್ಲಿ ಒಬ್ಬ ಮಹಿಳಾ ಅತಿಥಿ ಉಪನ್ಯಾಸಕರು "ನಮಗೆ ವಾರದಲ್ಲಿ ಮೂರು ದಿವಸ ಮಾತ್ರ ಕೆಲಸ, ಉಳಿದ ದಿವಸ ನಾವು ಮನೆಯಲ್ಲಿಯೇ ಇರಬೇಕು. ಇನ್ನುಳಿದ ಮೂರು ದಿವಸ ನಾವು ಮೊಬೈಲ್ ಅಫ್ ಮಾಡಿಕೊಂಡು ಎಲ್ಲೂ ಹೊರಗೆ ಹೋಗದೆ ಮನೆಯಲ್ಲಿಯೇ ಉಳಿದಿರುತ್ತೇವೆ. ಯಾಕೆಂದರೆ ಯಾರಾದರೂ ಫೋನ್ ಮಾಡಿ ಯಾಕೆ ಕಾಲೇಜಿಗೆ ಹೋಗಲಿಲ್ಲವೆಂದು ಕೇಳುತ್ತಾರೆ. ಆಗ ನಮಗೆ ಉತ್ತರ ಹೇಳಲು ಆಗದೆ ಈ ರೀತಿಯಲ್ಲಿ ಸುಳ್ಳು ಹೇಳಿಕೊಂಡು ಬದುಕುವ ಪರಿಸ್ಥಿತಿ ಬಂದಿದೆ" ಎಂದು ಕಣ್ಣೀರಿಟ್ಟರು.

ಗಂಭೀರವಾದ ಸಮಸ್ಯೆ ಇಂತಹ ಹಲವಾರು

ಅವಮಾನಗಳಿಂದ ಮನನೊಂದು ಈಗ
ನಾಲ್ವರು ಅತಿಥಿ ಉಪನ್ಯಾಸಕರು ಆ
ಮಾಡಿಕೊಂಡಿದ್ದಾರೆ. ಉನ್ನತ ಅಧ
ಮಾಡಿ ಅತ್ಯಂತ ಕಡಿಮೆ ವರ್ಷ
ಸಂಬಳ ಪಡೆಯುವಂತಹ ಸ್ಥಿತಿಯಲ್ಲಿರು
ಉಪನ್ಯಾಸಕರು ತಮ್ಮ ಬೇಡಿಕೆಗಳ ಈ
ಕೆಗಾಗಿ ಪ್ರಜಾಸತ್ತಾತ್ಮಕವಾಗಿ ಒಂದ
ಪಟ್ಟಭದ್ರ ಹಿತಾಸಕ್ತಿಗಳು ಬಿಡುತ್ತಿಲ್ಲ.
ಕೇತ್ರದ ಕೆಲ ವಿಧಾನ ಪರಿಷತ್ ಸ
ಕೆಲ ಹಿರಿಯ ಅತಿಥಿ ಉಪನ್ಯಾಸಕರನ್ನು
ಕೈವಶದಲ್ಲಿಟ್ಟುಕೊಂಡು ಅತಿಥಿ ಉಪನ್ಯಾ
ಒಗ್ಗಟ್ಟಾಗಲು ಬಿಡುತ್ತಿಲ್ಲ. ನಿರುದ್ಯೋ
ಕಾರಣವೇನು? ಸರ್ಕಾರಿ ಪದವಿ ಕಾಲೇ
ಬಡ ವಿದ್ಯಾರ್ಥಿಗಳ ಭವಿಷ್ಯ ರೂ
ನಮಗೆ ಕನಿಷ್ಟ ಕೂಲಿಯೂ ಇಲ್ಲದ
ಸ್ಥಿತಿಗೆ ನಮ್ಮನ್ನು ತಳ್ಳಿರುವ ನೀತಿ
ಏನು ಕಾರಣ. ನಮ್ಮನ್ನಾಳುವ ಸರ್ಕಾ
ಆರ್ಥಿಕ ನೀತಿಗಳಿಂದಾಗಿಯೇ ನ
ಇಂತಹ ಪರಿಸ್ಥಿತಿ ಎದುರಾಗಿದೆ. ಲಕ್ಷಾ
ವಿದ್ಯಾರ್ಥಿಗಳ ಭವಿಷ್ಯ ನಾಶಗೊಳ್ಳ
ವಿದ್ಯಾರ್ಥಿಗಳು ಮತ್ತು ಅತಿಥಿ ಉಪನ್ಯಾ
ಪ್ರಜಾಸತ್ತಾತ್ಮಕವಾಗಿ ಒಂದಾಗಿ ಸರ್ಕಾರ
ಒತ್ತಾಯಿಸುವಂತಾಗಬೇಕು.

ನಮ್ಮ ಕಾಂಗ್ರೆಸ್ ಸರ್ಕಾರ ನ
ಸಾಮಾಜಿಕ ನ್ಯಾಯಕ್ಕೆ ಬದ್ಧ. ಯಾ
ಅನ್ಯಾಯವಾಗದ ರೀತಿಯಲ್ಲಿ ಆ
ನಡೆಸುತ್ತೇವೆಂದು ಹೋದ ಕಡೆಯ
ಹೇಳಿಕೊಳ್ಳುವ ಮುಖ್ಯಮಂತ್ರಿಯವರು
ಉಪನ್ಯಾಸಕರ ಸಮಸ್ಯೆಗಳ ಬಗ್ಗೆ ಅ
ಇಲ್ಲದಂತೆ ವರ್ತಿಸುವುದು ಸರಿ
ತಕ್ಷಣವೇ ಅತಿಥಿ ಉಪನ್ಯಾಸಕರ
ಬೇಡಿಕೆಗಳನ್ನು ಈಡೇರಿಸಲು ಮುಂದಾ
ಲಕ್ಷಾಂತರ ವಿಧ್ಯಾರ್ಥಿಗಳ ಭವಿ
ಅನುಕೂಲವಾಗುತ್ತದೆ. ಹೀಗಾಗಿ ಅ
ಉಪನ್ಯಾಸಕರಿಗೆ ಸೇವಾ ಭದ್ರತೆಯನ್ನು
ಖಾಯಂಗೊಳಿಸಬೇಕು. ಯು.ಜಿ.ಸಿ
ನಿಯಮದಂತೆ ವೇತನ ನೀಡಬೆ
ತಿಂಗಳ ಮೊದಲ ವಾರದಲ್ಲೇ ವೇ
ಬಿಡುಗಡೆಗೊಳಿಸಬೇಕು. ವರ್ಷದ 12 ತಿಂ
ವೇತನವನ್ನು ನೀಡಬೇಕು. ಉಪನ್ಯಾ
ನೇಮಕಾತಿಯಲ್ಲಿ ಅತಿಥಿ ಉಪನ್ಯಾಸ
ಆದ್ಯತೆ ನೀಡಿ ಸೇವಾನುಭವ ಆಧರಿಸಿ ವ
ಶೇ. 10ರಂತೆ ಕೃಪಾಂಕವನ್ನು ನೀಡಬೆ
ವಯೋಮಿತಿ ಮೀರಿರುವ/ ಮೀರುತ್ತಿ
ಅತಿಥಿ ಉಪನ್ಯಾಸಕರಿಗೆ ಉಪನ್ಯಾ
ನೇಮಕಾತಿಯಲ್ಲಿ ಆದ್ಯತೆ ನೀಡಬೇಕು.
ಇರುವ 6 ಸಾವಿರ ಉಪನ್ಯಾಸಕ, 3 ಸಾ
ಬೋಧಕೇತರ ಹುದ್ದೆಗಳು ಹಾಗೂ ಕಾಲೇ
ಶೀಕ್ಷಣ ಇಲಾಖೆಯ ಖಾಲಿ ಹುದ್ದೆಗ
ಭರ್ತಿ ಮಾಡಬೇಕು. ಎಲ್ಲಾ ಹಂತದ ಕಾಲೇ
ಶಿಕ್ಷಣ ಇಲಾಖೆಗಳು ಮತ್ತು ಎಲ್ಲಾ ಸರ್ಕಾ
ಪದವಿ ಕಾಲೇಜುಗಳಿಗೆ ಅಗತ್ಯ ಅತ್ಯಾಧ
ಮೂಲಭೂತ ಶೈಕ್ಷಣಿಕ ಸೌಲಭ್ಯಗ
ಒದಗಿಸಬೇಕು.

ಇಂತಹ ನ್ಯಾಯಯುದ್ಧ ಬೇಡಿಕೆಗ
ಸರ್ಕಾರ ಈಡೇರಿಸದಿದ್ದಲ್ಲಿ ಪ್ರಜಾಸತ್ತಾತ್ಮಕ
ಹೋರಾಟಕ್ಕೆ ಮುಂದಾಗದೆ
ಉಪನ್ಯಾಸಕರಿಗೆ ಅನ್ಯಮಾರ್ಗವಿಲ್ಲ.

[illegible]

ಕಾಲು ಬಾಯಿ ರೋಗ : ಸಾವಿನಂಚಿನಲಿ ಸಾವಿರಾರು ರಾಸುಗಳು

ಕಳೆದ ಎರಡು ತಿಂಗಳುಗಳಿಂದ ರಾಜ್ಯಾದ್ಯಂತ ಹರಡುತ್ತಿರುವ ಕಾಲು ಬಾಯಿ ರೋಗಕ್ಕೆ ಬಲಿಯಾಗಿ ಸಾವಿರಾರು ದನ ಕರುಗಳು ಸಾವನ್ನಪ್ಪುತ್ತಿದ್ದು ಹೈನುಗಾರಿಕೆಯನ್ನೇ ನಂಬಿ ಜೀವನ ನಡೆಸುತ್ತಿರುವ ಕುಟುಂಬಗಳು ತೀವ್ರ ಆಘಾತಕ್ಕೆ ಒಳಗಾಗಿವೆ. ದಕ್ಷಿಣದ ಜಿಲ್ಲೆಗಳಲ್ಲಿ ರೋಗ ವ್ಯಾಪಕವಾಗಿ ಹರಡುತ್ತಿದೆ. ದಕ್ಷಿಣ ಕರ್ನಾಟಕದಲ್ಲಿ ಹೈನುಗಾರಿಕೆ ಪ್ರಮಾಣ ಜಾಸ್ತಿ ಇರುವುದು ಇದಕ್ಕೆ ಕಾರಣವಾಗಿದೆ. ಬನ್ನೇರುಘಟ್ಟ ಅರಣ್ಯ ಪ್ರದೇಶದಲ್ಲಿ ಆರಂಭವಾಗಿತ್ತು ಎನ್ನಲಾದ ಈ ಕಾಲು ಬಾಯಿ ಸೋಂಕು ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಮಂಡ್ಯ ಮತ್ತು ಕೋಲಾರ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಹರಡಿದೆ.


ಸಾವಿಗೀಡಾಗುತ್ತಿರುವ ಜಾನುವಾರುಗಳಲ್ಲಿ ಸೀಮೆ ಹಸುಗಳ ಸಂಖ್ಯೆ ಹೆಚ್ಚು. ಸರ್ಕಾರಿ ಅಂಕಿ ಅಂಶಗಳ ಪ್ರಕಾರ ಮಂಡ್ಯದಲ್ಲಿ ಅತೀ ಹೆಚ್ಚು ಅಂದರೆ 230, ಕೋಲಾರ 222, ರಾಮನಗರ 129 ಜಾನುವಾರುಗಳು ಸೋಂಕಿನಿಂದ ಬಳಲುತ್ತಿವೆ. ಈ ಸಂಖ್ಯೆ ಇನ್ನೂ ಹೆಚ್ಚಾಗುವ ಲಕ್ಷಣಗಳಿವೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಕಾಲುಬಾಯಿ ರೋಗದ ಬಾಧೆ ಕಂಡುಬಂದಿದ್ದರೂ ಪ್ರಸಕ್ತ ವರ್ಷದಲ್ಲಿ ಸಾವಿರಾರು ಕುರಿಗಳು ಮತ್ತು ಮೇಕೆಗಳು ಮೃತಪಟ್ಟಿರುವ ವರದಿಗಳಿವೆ.

ರೋಗ ರಾಸುವಿನಿಂದ ರಾಸುವಿಗೆ ಹರಡುತ್ತದೆ. ಮೊದಲು ಜ್ವರ ಕಾಣಿಸಿಕೊಳುತ್ತದೆ. ರಾಸುಗಳು ಜೊಲ್ಲು ಸುರಿಸುತ್ತಾ ಮೇವು ತಿನ್ನುವುದನ್ನು ನಿಲ್ಲಿಸುತ್ತವೆ. ಗೊರಸುಗಳಲ್ಲಿ ಹುಣ್ಣು ಕಾಣಿಸಿಕೊಂಡು ಕುಂಟಲಾರಂಭಿಸುತ್ತವೆ. ಬಾಯಿಗಳಲ್ಲಿ ಚಿಕ್ಕ ಚಿಕ್ಕ ಗುಳ್ಳೆಗಳಾಗಿ ಒಡೆದು ಗಾಯಗಳಾಗುತ್ತವೆ. ಒಮ್ಮೊಮ್ಮೆ ನಾಲಿಗೆಯ ಮೇಲೆ ಹುಣ್ಣು ಜಾಸ್ತಿಯಾಗಿ ಅದರ ಮೇಲಿನ ಪದರ ಕಿತ್ತು ರಕ್ತ ಸ್ರಾವವಾಗುತ್ತದೆ. ಕೆಲವು ರಾಸುಗಳ ಕೆಚ್ಚಲಿನ ಮೇಲೆ ಗುಳ್ಳೆಗಳಾಗಿ ಹುಣ್ಣಾಗುತ್ತದೆ. ಗರ್ಭದ ರಾಸುಗಳಲ್ಲಿ ಗರ್ಭಪಾತವಾಗುವ ಸಾಧ್ಯತೆ ಹೆಚ್ಚಿದೆ. ರೋಗಕ್ಕೆ ತುತ್ತಾಗುವ ಸಣ್ಣ ಕರುಗಳು ಸಾಯುವ ಸಂಭವ ಜಾಸ್ತಿ.

ಜಾನುವಾರುಗಳಿಗೆ ಮಾರಕವಾಗಿರುವ ಈ ಸಾಂಕ್ರಾಮಿಕ ರೋಗವನ್ನು ನಿಯಂತ್ರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಪಶುಸಂಗೋಪನಾ ಸಚಿವ ಟಿ.ಬಿ. ಜಯಚಂದ್ರ ಹೇಳಿದ್ದಾರೆ. ಆದರೆ ರಾಸುಗಳಿಗೆ ಮಾರಣಾಂತಿಕವಾಗಿರುವ ಈ ರೋಗವನ್ನು ನಿಯಂತ್ರಿಸಲು ಇದುವರೆಗೂ ಸಾಧ್ಯವಾಗದೇ ಇರುವುದು ಸರ್ಕಾರದ ವಿಫಲತೆಯೇ ಆಗಿದೆ. ಮೃತಪಟ್ಟ ಅರ್ಧ ಲಕ್ಷಕ್ಕಿಂತ ಕಡಿಮೆ ಇಲ್ಲದ ಬೆಲೆ ಇರುವ ಹಾಲು ಕರೆಯುವ ಹಸುವಿಗೆ 10 ಸಾವಿರ ರೂ. ಪರಿಹಾರ ನೀಡಿ ಸರಕಾರ ಸುಮ್ಮನಾಗಬಹುದೆ? ಪ್ರತಿ ವರ್ಷದಂತೆ ಈ ವರ್ಷ ಜಾನುವಾರುಗಳಿಗೆ ಲಸಿಕೆ ಹಾಕುವ ಕೆಲಸ ಸಮರ್ಪಕವಾಗಿ ಪೂರ್ಣಗೊಳಿಸದಿರಲು ಕಾರಣವೇನು? ಸಿದ್ಧರಾಮಯ್ಯ ಸರ್ಕಾರ ಕೇವಲ ಮುಂಬರುವ ಲೋಕ ಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಜನರ ಕಣ್ಣಿಗೆ ಮಂಕುಬೂದಿ ಎರಚುವಲ್ಲಿ ಮಗ್ನವಾಗಿದೆ. ಜನರ ನೈಜ ಪ್ರಶ್ನೆಗಳನ್ನು ಇತ್ಯರ್ಥಗೊಳಿಸುವುದಕ್ಕೆ ಅವರ ಗಮನ ಏನೇನೂ ಸಾಲದಾಗಿದೆ.

ರೋಗಕ್ಕೆ ತುತ್ತಾಗಿ ಮೃತಪಟ್ಟ ರಾಸುಗಳಿಗೆ ನೀಡುವ ಪರಿಹಾರವನ್ನು ಗಣನೀಯವಾಗಿ ಹೆಚ್ಚಿಸಿ ರೈತರು ಆತಂಕಕ್ಕೀಡಾಗುವುದನ್ನು ಕೂಡಲೇ ತಪ್ಪಿಸಬೇಕು. ಮೃತಪಟ್ಟ ರಾಸುಗಳನ್ನು ಸರಿಯಾಗಿ ಹೂಳಲು ಗ್ರಾಮ ಪಂಚಾಯತಿಗಳ ಮೂಲಕ ಅಗತ್ಯ ಆರ್ಥಿಕ ನೆರವನ್ನು ಒದಗಿಸಬೇಕು. ರೋಗ ಹರಡುವುದನ್ನು ತಡೆಯಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು. ಲಸಿಕೆ ಹಾಕುವುದನ್ನು ಇನ್ನಷ್ಟು ಚುರುಕುಗೊಳಿಸಬೇಕು. ಸೋಂಕಿನಿಂದ ಬಳಲುತ್ತಿರುವ ರಾಸುಗಳಿಗೆ ಅಗತ್ಯ ಚಿಕಿತ್ಸೆಯನ್ನು ಉಚಿತವಾಗಿ ಪೂರೈಸಲು, ಪಶು ವೈದ್ಯಾಧಿಕಾರಿಗಳ ಸೇವೆಯನ್ನು ಒದಗಿಸಲು ಯುದ್ಧೋಪಾದಿಯಲ್ಲಿ ಪಶುಸಂಗೋಪನಾ ಇಲಾಖೆ ಕೆಲಸ ಮಾಡಬೇಕು. ರೋಗ ಹರಡದಂತೆ ಮುಂಜಾಗ್ರತಾ ಕ್ರಮವಾಗಿ ರಾಜ್ಯದ ವಿವಿಧೆಡೆ ಈ ಕಾಲಾವಧಿಯಲ್ಲಿ ನಡೆಯುವ ಜಾನುವಾರು ಸಂತೆಗಳನ್ನು ತಾತ್ಕಾಲಿಕವಾಗಿ ನಿಷೇಧಿಸಬೇಕು. ರೋಗದ ಬಗ್ಗೆ ಹೆಚ್ಚಿನ ಅಧ್ಯಯನ ಮಾಡಲು ವಿಶ್ವವಿದ್ಯಾಲಯಗಳಿಗೆ ಜವಾಬ್ದಾರಿ ವಹಿಸಿಕೊಡಬೇಕು.

ಸಮನ್ವಯ ಸಮಿತಿಯೆಂಬ ಕಾಲು ಕುಣಿಕೆ



ಕಾಂಗ್ರೆಸ್‌ನಲ್ಲಿ ಶಕ್ತಿ ಕೇಂದ್ರವಾಗಲು ಹಣಾಹಣಿ ಆರಂಭಗೊಂಡಿರುವುದನ್ನು ಕಳೆದ ವಾರದ ಈ ಕಾಲಂನಲ್ಲಿ ವಿವರಿಸಲಾಗಿತ್ತು. ಇದೀಗ ಅದು ಇನ್ನಷ್ಟು ವಿಸ್ತಾರಗೊಂಡು ನಿತ್ಯ ಕದನದ ಕಥಾನಕ ಸರಣಿಯಾಗುವ ಬೆಳವಣಿಗೆಗಳು ಆಗಿವೆ.

ಕಾಂಗ್ರೆಸ್ ಭಿನ್ನಮತ, ಆಂತರಿಕ ಕಿತ್ತಾಟದಿಂದ ಹೊರತೇನಲ್ಲ. ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬರುವುದರೊಂದಿಗೆ ಎರಡು ಬಣಗಳೂ ಚುರುಕಿನಿಂದ ಕಾರ್ಯಾರಂಭಿಸಿರುವುದನ್ನು ಕಂಡಿದ್ದೇವೆ. ಅಧಿಕಾರ ಹಂಚಿಕೆಯ ಸುತ್ತ ಎದ್ದ ಈ ಭಿನ್ನಮತದ ಕಿಡಿ ಕಾಲ ಕಳೆದಂತೆ ಕಿಚ್ಚಾಗಲು ಹೊರಟಿದೆ. ಸಿದ್ಧರಾಮಯ್ಯ ಮೂಲ ಕಾಂಗ್ರೆಸ್ಸಿಗನಲ್ಲವೆಂದೂ, ಖಾತೆ ಹಂಚಿಕೆಯಲ್ಲಿ ಮೂಲ ಕಾಂಗ್ರೆಸ್ಸಿಗರನ್ನು ಮೂಲೆಗೊತ್ತಲಾಗಿದೆಯೆಂದು ಆರೋಪಿಸಲಾಗಿತ್ತು. ಅಧಿಕಾರದಾಕಾಂಕ್ಷಿ ಕೆಪಿಸಿಸಿ ಅಧ್ಯಕ್ಷರಾದ ಪರಮೇಶ್ವರ್ ಸಂಪುಟ ಸೇರುವ ಕಸರತ್ತು ಆರಂಭಿಸಿದ್ದರು. ಸರಕಾರ ಮತ್ತು ಪಕ್ಷದ ನಡುವೆ ಸಮನ್ವಯ ಇಲ್ಲವೆಂದು ಅಂತಹ ಸಮನ್ವಯ ಸಮಿತಿ ರಚಿಸಬೇಕೆಂದೂ ಹೈಕಮಾಂಡ್‌ಗೆ ಒತ್ತಾಸೆಯನ್ನು ರವಾನಿಸಲಾಗಿತ್ತು. ಆ ಬಗ್ಗೆ ಸುಮ್ಮನಿದ್ದ ಹೈಕಮಾಂಡ್ ಇದೀಗ ಸಮನ್ವಯ ಸಮಿತಿಯನ್ನು ರಚಿಸುವ ಮೂಲಕ ಎರಡು ಶಕ್ತಿ ಕೇಂದ್ರಗಳಿಗೆ ಚಾಲನೆ ನೀಡಿದೆ.

ಇಂತಹ ಸಮನ್ವಯ ಸಮಿತಿಯ ರಚನೆಯೇ ರಾಜ್ಯದ ಕಾಂಗ್ರೆಸ್ಸಿನಲ್ಲಿ ಸಮನ್ವಯ ಇಲ್ಲದಿರುವ ಬಿರುಕನ್ನು ಬಹಿರಂಗವಾಗಿ ಒಪ್ಪಿಕೊಂಡಂತಾಗಿದೆ. ಇಂತಹ ಸಮನ್ವಯ ಸಮಿತಿಗೆ ಇನ್ನೊಂದು ಬಣದ ಧ್ವನಿ, ಸಿ.ಎಂ. ಸ್ಪರ್ಧಿಯೂ ಆಗಿರುವ ಪರಮೇಶ್ವರ್‌ರವರನ್ನು ಸಂಚಾಲಕರನ್ನಾಗಿ ನೇಮಿಸಿರುವುದು ಸಮನ್ವಯವನ್ನು ಅದೆಷ್ಟು ತರಲಿದೆ ಎಂಬುದನ್ನು ಅನುಮಾನಕ್ಕೆಡೆಯಿಲ್ಲದೇ ಸ್ಪಷ್ಟಪಡಿಸಿದೆ. ಸರಕಾರದ ಯಾವುದೇ ಯೋಜನೆ, ಕಾರ್ಯಕ್ರಮ ಜಾರಿ ಮುನ್ನ ಇಲ್ಲಿ ಚರ್ಚೆಯಾಗಬೇಕು, ಪಕ್ಷದ ಪ್ರಮುಖ ನಾಯಕರು ಸರ್ಕಾರದ ಕಾರ್ಯಚಟುವಟಿಕೆಗಳಲ್ಲಿ ಪಾಲುದಾರರಾಗಬೇಕೆಂಬ ಉದ್ದೇಶ ತಮದೆಂದುಕೊಂಡರೂ ಮುಖ್ಯವಾಗಿ ಅದು ಮುಖ್ಯಮಂತ್ರಿಯನ್ನು, ಆ ಮೂಲಕ ಸಚಿವ ಸಂಪುಟ–ಸರ್ಕಾರವನ್ನು ನಿಯಂತ್ರಿಸುವ ಉದ್ದೇಶವೇ ಪ್ರಧಾನವಾಗಿದೆ. ಅಂದರೆ ಸಿದ್ಧರಾಮಯ್ಯನವರ ಮೇಲೆ ಕಾಂಗ್ರೆಸ್‌ಗೆ ನಂಬಿಕೆ ಇಲ್ಲವೇ? ಪಕ್ಷದ ಅಂಗದಲ್ಲಿ ಸಿ.ಎಂ. ಇಲ್ಲವೇ? ಒಟ್ಟಾರೆ ಸಿದ್ಧುನನ್ನು ಮಣಿಸಲು ಸಹ ಹೈಕಮಾಂಡ್ ನಿರ್ಧರಿಸಿದಂತಿದೆ. ಹಾಗೆ ನೋಡಿದರೆ ರಾಜ್ಯದಲ್ಲಿ ಯಾವುದೇ ನಾಯಕ, ಮುಖ್ಯಮಂತ್ರಿ ಶಕ್ತಿಯುತವಾಗಿ ಹೊರಹೊಮ್ಮುವುದನ್ನು ಕಾಂಗ್ರೆಸ್ ನಾಯಕತ್ವ ಇಷ್ಟ ಪಡುವುದಿಲ್ಲ. ಏನಿದ್ದರೂ ಹೈಕಮಾಂಡ್ ಎದುರು ದುರ್ಬಲ ಪ್ರಧಾನಿ– ದುರ್ಬಲ ಮುಖ್ಯಮಂತ್ರಿ ಇರಬೇಕು ಎಂದು ಅದು ನಿರೀಕ್ಷಿಸುತ್ತಿರುವುದರಿಂದ ಯಾವ ರಾಜ್ಯದಲ್ಲಿಯೂ, ಯಾರನ್ನೂ ಬೆಳೆಯಲು ಬಿಡದ ಸರ್ವಾಧಿಕಾರಿಯಾಗಿದೆ.

ಪಕ್ಷ ಮತ್ತು ಸರ್ಕಾರದ ನಡುವೆ ಸಮನ್ವಯ ಇರಬೇಕಾದುದು ಸಹಜ, ಸರಿ. ಅದು ಸೌಹಾರ್ದತೆಯ, ಸಮನ್ವಯದ ಭಾವನೆ ಹೊಂದಿರುವುದು ಮುಖ್ಯವಾಗಿರಬೇಕು. ಆದರೆ ಕಾಂಗ್ರೆಸ್ ಪಕ್ಷದಲ್ಲೀಗ ಇವುಗಳ ಅರ್ಥವೇನಾದರೂ ಉಳಿದಿದೆಯೇ? ಸದಾ ಸಂಘರ್ಷದ ಮನೋಭಾವದಲ್ಲಿರುವ ಕೆಪಿಸಿಸಿ ಅಧ್ಯಕ್ಷರು, ಡಿ.ಕೆ.ಶಿವಕುಮಾರ್‌ರಂತಹ ನಾಯಕರು, ತನಗೆ ತಿಳಿದದ್ದೇ ದಾರಿ ಎನ್ನುವ ಸಿ.ಎಂ.ಸಿದ್ಧರಾಮಯ್ಯನವರು ಹೇಗೆಲ್ಲಾ ಸಮನ್ವಯ ಸಾಧಿಸುವರೆಂಬುದು ಕುತೂಹಲಕಾರಿಯಾಗಿದೆ.

ಹೈಕಮಾಂಡ್‌ನ ಈಗಿನ ಕ್ರಮವಂತೂ ಸಿದ್ಧರಾಮಯ್ಯನವರ ಮೇಲೆ ನಂಬಿಕೆ ಇಲ್ಲದಿರುವುದನ್ನೇ ಸಾರುತ್ತಿದೆ. ಈಗಿನದು ಅವರ ಕಾಲೆಳೆಯುವ ಕ್ರಮ ಎಂಬುದರಲ್ಲಿ ಅನುಮಾನವೇ ಇಲ್ಲ. ತನ್ನನ್ನು ನಿಯಂತ್ರಿಸುವ ಈ ಕ್ರಮವನ್ನು ಸಿದ್ದರಾಮಯ್ಯ ಹೇಗೆ ನೋಡುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಇಂತಹ ಸಂಗತಿಗಳು ಪಕ್ಷದ ಆಂತರಿಕ ವಿಷಯವೆಂಬುದು ಸರಿ. ಆದರೆ ಆಡಳಿತ ಪಕ್ಷದೊಳಗಿನ ಇಂತಹ ಕ್ರಮಗಳು ಆಡಳಿತದ ಮೇಲೆ ಎಂತಹ ಪರಿಣಾಮ ಬೀರಬಲ್ಲವು? ಸರ್ಕಾರದಲ್ಲಿ ಮುಖ್ಯಮಂತ್ರಿಗಿಂತಲೂ ಮತ್ತೊಂದು ಶಕ್ತಿ ಕೇಂದ್ರದ ಅಸ್ತಿತ್ವವು ಖಂಡಿತಕ್ಕೂ ಆಡಳಿತದಲ್ಲಿ ಶಿಥಿಲತೆಯನ್ನು ತರುತ್ತದೆ. ಬಲ ಪ್ರದರ್ಶನವೇ ಮುಖ್ಯವಾಗುತ್ತಾ, ಗುಂಪುಗಾರಿಕೆಯನ್ನು ಹೆಚ್ಚಿಸುತ್ತದೆ. ತಪ್ಪೆಸಗುವವರು ಯಾವುದಾದರೂ ಒಂದು ಕಡೆ ಆಶ್ರಯ ಪಡೆಯುತ್ತಾರೆ. ಇದು ಹಿಂದಿನ ಕೆಟ್ಟ ಅನುಭವ.


ಇದಕ್ಕೆ ಸತ್ವ ಪರೀಕ್ಷೆ ಎಂಬಂತೆ ನೆನ್ನೆ ಆದ 633 ಪೋಲೀಸ್ ಅಧಿಕಾರಿಗಳ ವರ್ಗಾವಣೆ ವಿಚಾರದಲ್ಲಿ ತಮ್ಮ ಇಚ್ಛೆಯಂತೆ ನಡೆದಿಲ್ಲವೆಂದು ಶಾಸಕರು ಮುನಿದು ಮುಖ್ಯಮಂತ್ರಿ ವಿರುದ್ಧ ಅಧ್ಯಕ್ಷರಿಗೆ ದೂರು ನೀಡಿದ್ದಾರೆ. ಪರಿಹಾರ ಏನಾಗುತ್ತೋ ಗೊತ್ತಿಲ್ಲ. ಆದರೆ ಈ ವಿಷಯದಲ್ಲಿ ಆರಂಭಗೊಂಡ ಪ್ರಕ್ರಿಯೆ ಮುಂದೆ ತಾರಕಕ್ಕೆ ಏರಲೂಬಹುದು.



ನಮ್ಮ ಗಮನ ಕಾಂಗ್ರೆಸ್ ಪಕ್ಷಕ್ಕೆ ಜನ ಕೊಟ್ಟ ಅಧಿಕಾರ ಸದ್ಬಳಕೆಯಾಗುತ್ತೋ ಇಲ್ಲವೋ ಎಂಬುದರತ್ತಲೇ. ಸದಾ ಭಿನ್ನಮತ, ಬಡಿದಾಟಗಳಿಂದ ಜರ್ಝರಿತಗೊಂಡ ರಾಜ್ಯದ ಜನರ ಪ್ರಶ್ನೆಗಳನ್ನು ಬಗೆ ಹರಿಸಲು ಈ ಸರ್ಕಾರ ಆದ್ಯತೆಯ ಗಮನ ನೀಡಬೇಕೇ ಹೊರತು ಸಾರ್ವಜನಿಕ ಸಂಪತ್ತು, ಹಣ, ಲೂಟಿ ಮಾಡುವ, ಅರಾಜಕತೆಯ ದುರಾಡಳಿತ ಅಲ್ಲ. ಹೀಗಾದರೆ ಜನ ಕಾಂಗ್ರೆಸ್‌ಗೆ ಬುದ್ಧಿ ಕಲಿಸುವಲ್ಲಿ ಹಿಂಜರಿಯುವುದೂ ಇಲ್ಲ.

ಹುಬ್ಬಳ್ಳಿ 'ಜಿಮಖಾನಾ ಮೈದಾನ' ನುಂಗಲು ನಿಂತಿರುವ ಮೋಜುಗಾರ ಶ್ರೀಮಂತರು

–ಬಿ.ಎಸ್. ಸೊಪ್ಪಿನ, ಹುಬ್ಬಳ್ಳಿ




ಹುಬ್ಬಳ್ಳಿಯ ಮತ್ತೊಂದು ಮೈದಾನದ ವಿವಾದದಿಂದ ಸುದ್ದಿಯಲ್ಲಿದೆ. 'ಹುಬ್ಬಳ್ಳಿ ಮೈದಾನ' ಅಂದ ತಕ್ಷಣ ಯಾರಿಗಾದರೂ 'ಈದ್ಗಾ ಮೈದಾನ'ದ ವಿವಾದದ ವಿಷಯ ನೆನಪಿಗೆ ಬರಬಹುದು. ಆ ವಿವಾದದಲ್ಲಿ ಎದ್ದುಕಂಡ 'ಜಗದೀಶ್ ಶೆಟ್ಟರ್', ಬಿಜೆಪಿ ಸಂಸದ 'ಪ್ರಹ್ಲಾದ ಜೋಷಿ' ಮುಂತಾದ ಮುಖಗಳು ಇಲ್ಲೂ ಇವೆ. ಅವರು ಶ್ರೀಮಂತರ ಪರನಿಂತಿದ್ದಾರೆ. ಅಂದು ಈದ್ಗಾ ಮೈದಾನವನ್ನು ಸಾರ್ವಜನಿಕರಿಗಾಗಿ ಉಳಿಸಿಕೊಳ್ಳುವ ಹೆಸರಿನಲ್ಲಿ ಇದೇ ಬಿಜೆಪಿಯವರು ಪರಿಸ್ಥಿತಿಯನ್ನು ಪ್ರಕ್ಷುಬ್ಧಗೊಳಿಸಿದರು. ಈಗ ಅದೇ ತರಹದ ಸಾರ್ವಜನಿಕ ಮೈದಾನವನ್ನು ಕಬಳಿಸಲು ಹೊಂಚುಹಾಕುತ್ತಿರುವ ನಗರದ ಪ್ರತಿಷ್ಠರ ಬೆಂಬಲಕ್ಕೆ ನಿಂತಿದ್ದಾರೆ ಅದೇ ಬಿಜೆಪಿಯ ನಾಯಕರು. ಇಲ್ಲಿ ದೇಶಪ್ರೇಮದ ಹೆಸರಿನ ಹುಸಿ ಆವೇಶವಿಲ್ಲ. ಸಾರ್ವಜನಿಕ ಉಪಯೋಗಕ್ಕೆ ಸಿಗಬೇಕಾದ 'ಆಟದ ಮೈದಾನ'ವನ್ನು ಹೇಗೋ ಉಪಾಯವಾಗಿ ನುಂಗುವ ಮೋಜಗಾರ ಶ್ರೀಮಂತರ ಸಂಚು ಮಾತ್ರ ಇದೆ.

ಕೆಲವು ವರ್ಷಗಳ ಹಿಂದೆ 'ಈದ್ಗಾ ಮೈದಾನ' ವಿವಾದ ಎಲ್ಲರ ಗಮನ ಸೆಳೆದಿತ್ತು. ರಾಜಿಯಿಂದಲೋ, ಕೊಡುವ-ತೆಗೆದುಕೊಳ್ಳುವ ನಡವಳಿಕೆಗಳಿಂದಲೋ ಅಂತೂ ವಿವಾದಕ್ಕೆ ತೆರೆ ಎಳೆದಂತಾಗಿದೆ. ಪ್ರಸ್ತುತ ವಿವಾದಿತ ಮೈದಾನ ಹುಬ್ಬಳ್ಳಿಯ ಜಿಮಖಾನಾ ಅಸೋಶಿಯನ್‌ಗೆ ಸಂಬಂಧಿಸಿದ್ದು. ಹುಬ್ಬಳ್ಳಿಯ ದೇಶಪಾಂಡೆ ನಗರದಲ್ಲಿರುವ ಕರ್ನಾಟಕ ಜಿಮಖಾನಾ ಅಸೋಸಿಯೇಶನ್ ಹುಟ್ಟುವಾಗ ಉನ್ನತ ಉದ್ದೇಶ ಮತ್ತು ಆಶಯಗಳನ್ನು ಇಟ್ಟುಕೊಂಡು ಹುಟ್ಟಿದ ಸಂಸ್ಥೆ. ಅದರ ಜನ್ಮದಾತರಿಗೆ ಸಾಮಾಜಿಕ ಕಳಕಳಿ ಮತ್ತು ಜವಾಬ್ದಾರಿ ಇತ್ತು ಎಂಬುದಕ್ಕೆ ಎರಡು ಮಾತಿಲ್ಲ. ಆದರೆ ಕಾಲ ಬದಲಾದಂತೆ ಸಂಸ್ಥೆಯ ಮೂಲ ಆಶಯಕ್ಕೆ ವ್ಯತಿರಿಕ್ತ ಹಿತಾಸಕ್ತಿ ಇಟ್ಟು-ಕೊಂಡ ಜನ ಸಂಸ್ಥೆಯ ಒಳಗೆ ನುಸುಳಿದಾಗ ಸಂಸ್ಥೆಯ ಉದ್ದೇಶಗಳು, ಕಾರ್ಯಕ್ರಮಗಳು ಬದಲಾಗುತ್ತಾ ಹೋಗುತ್ತವೆ. ಸಂಸ್ಥೆಯ ಸುತ್ತಮುತ್ತ ಇರುವ ನಾಗರಿಕರಿಗೆ ಸಂಸ್ಥೆಯ ಒಳಗಡೆ ನಡೆಯುವ ಚಟುವಟಿಕೆಗಳು ಅನಾರೋಗ್ಯಕರ ಮತ್ತು ಸಾರ್ವಜನಿಕ ಹಿತ-ಕ್ಕೆ ಧಕ್ಕೆ ಮಾಡುವಂತಹವುಗಳು ಅನ್ನಿಸಿದಾಗ ಸಹಜವಾಗಿ ವಿರೋಧವಾಗುವುದುಂಟು. ಇಂತಹ ಗುಮಾನಿಯ ಹಿನ್ನಲೆಯಲ್ಲೇ ಕರ್ನಾಟಕ ಜಿಮಖಾನಾ ಅಸೋಸಿಯೇಶನ್ ಮೈದಾನ ವಿವಾದಕ್ಕೆ ಒಳಗಾಗಿದೆ.

ಹಿನ್ನಲೆ ಏನು? : ಕರ್ನಾಟಕ ಜಿಮಖಾನಾ ಅಸೋಸಿಯೇಶನ್ ಹುಬ್ಬಳ್ಳಿ 1908 ರಲ್ಲಿ ಡಾ॥ ಎಸ್. ಆರ್. ಗೋರೆ ಮತ್ತು ಎಸ್.ಆರ್. ಕುಂಭಕೋಣಂ ಅವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂತು. ಆಟೋಟಗಳನ್ನು ಸಂಘಟಿಸುವ ಉದ್ದೇಶವನ್ನು ಹೊಂದಿದ್ದ ಈ ಸಂಘಟನೆಗೆ ಒಂದು ವಿಶಾಲ ಜಾಗೆಯ ಅಗತ್ಯತೆ ಇತ್ತು. ಆ ಕಾರಣಕ್ಕಾಗಿ ಕ್ಲಬ್‌ನ ಪದಾಧಿಕಾರಿಗಳು 1914 ರಲ್ಲಿ ಮುಂಬಯಿ ಸರಕಾರಕ್ಕೆ ಜಾಗೆ-ಯ ಮಂಜೂರಾತಿಗಾಗಿ ಮನವಿ ಸಲ್ಲಿಸಿದರು ಮತ್ತು ನಾಗಶೆಟ್ಟಿಕೊಪ್ಪದ ಸರ್ವೇ ನಂ. 63ರ 8ಎ 4 ಗುಂಟೆ ಜಾಗೆಯನ್ನು ನೀಡುವಂತೆ ಮನವಿಯಲ್ಲಿ ತಿಳಿಸಲಾಗಿತ್ತು. ಧಾರವಾಡದ ಆಗಿನ ಕಲೆಕ್ಟರ್ ತಮ್ಮ ಪತ್ರ ಸಂಖ್ಯೆ 2641 ದಿನಾಂಕ: 24 ಎಪ್ರಿಲ್ 1915 ರಲ್ಲಿ ಅಸೋಶಿಯೇಶನ್ ಕೇಳಿದ ಜಾಗೆಯು ಖಾಲಿ ಇದೆ ಮತ್ತು ಭಾರಿ ಕಂಟಿ ಗಿಡಗಳಿಂದ ಕೂಡಿದ್ದು, ಮಳೆಗಾಲದಲ್ಲಿ ನೀರು ಸಂಗ್ರಹವಾಗುತ್ತದೆ ಎಂದು ಉಲ್ಲೇಖಿಸಿದ್ದರು. ಕರ್ನಾಟಕ ಜಿಮಖಾನಾ ಅಸೋಸಿಯೇಶನ್‌ನವರು ಕೇಳಿದ ಜಾಗೆಯನ್ನು ಕೊಡಬಹುದು ಎಂದು ಶಿಫಾರಸ್ಸು ಮಾಡಿದ್ದರು. ಅದರಂತೆ ಮುಂಬಯಿ ಸರಕಾರವು ಅಂದಿನ ಅಧೀನ ಕಾರ್ಯದರ್ಶಿ ಜಿ.ಎ. ಪ್ಲೇಪ ಅವರು ಕ್ರಿಕೆಟ್, ಟೆನ್ನಿಸ್ ಮತ್ತು ಫುಟ್‌ಬಾಲ್ ಆಟಗಳನ್ನು ಆಡಲಿಕ್ಕೆಂದು ಕರಾರುಗಳೊಂದಿಗೆ ಅಸೋಸಿಯೇಶನ್‌ಗೆ ಲೀಸ(ಗುತ್ತಿಗೆ) ಮೇಲೆ ಮಂಜೂರು ಮಾಡಿದ್ದರು. (ಆದೇಶ ಸಂ-ಖ್ಯೆ 6628, ದಿನಾಂಕ: 15.06.1915) ಲೀಸ ಅವಧಿ 10 ವರ್ಷಗಳು ಮಾತ್ರ ಎಂದಾಗಿತ್ತು. ಜಾಗೆಯನ್ನು ವಾಪಸ್ ಪಡೆಯುವ ಹಕ್ಕನ್ನು ಸರಕಾರ ಹೊಂದಿತ್ತು. ಸಾರ್ವಜನಿಕರು ಮುಖ್ಯವಾಗಿ ಈ ಜಾಗೆಯಲ್ಲಿ ವಾಯು ವಿಹಾರ ಮತ್ತು ಮಕ್ಕಳ ಆಟೋಟಗಳನ್ನು ನಡೆಸುತ್ತಾ ಬಂದಿದ್ದರೂ ಯಾವುದೇ ನಿರ್ಬಂಧ ಇರಲಿಲ್ಲ. ಸಮಸ್ಯೆ ಪ್ರಾರಂಭವಾದದ್ದು 2008 ರಿಂದ. ಕರ್ನಾಟಕ ಜಿಮಖಾನಾ ಅಸೋಸಿಯೇಶನ್ 2008 ರಲ್ಲಿ ಸಂಸ್ಥೆಯ ಪೋಟ ನಿಯಮಗಳಿಗೆ ತಿದ್ದುಪಡಿ ತಂದಿತು. ಅಂದಿನ ಜಿಲ್ಲಾಧಿಕಾರಿ ದರ್ಪಣ ಜೈನ್ ಅವರ ಶಿಫಾರಸ್ಸಿನ ಮೇರೆಗೆ ಕರ್ನಾಟಕ ಸರಕಾರ ಉಪಕಾರ್ಯದರ್ಶಿ (ಕಂದಾಯ ಇಲಾಖೆ) ಗೀತಾ ರಮೇಶ ಅವರು ಮಂಜೂರಾತಿ ನೀಡಿದರು.



ಆ ತಿದ್ದುಪಡಿ ಆಧರಸಿ ಸಂಸ್ಥೆ ಒಂದು ಮನರಂಜನಾ ಕ್ಲಬ್ ರಚನೆಗೆ ಮುಂದಾಯಿತು. ಜಾಗೆಯ ಸುತ್ತಮುತ್ತಲೂ ಎತ್ತರದ ಗೋಡೆ ನಿರ್ಮಾಣ ಕಾರ್ಯ ನಡೆಯಹತ್ತಿತು. ಅಂ-ದರೆ ಈಜುಕೊಳ, ಸ್ಪಾ ಮಸ್ಸಾಜ್, ಬಾರ್, ಇಸ್ಪೀಟ ಮುಂತಾದ ಚಟುವಟಿಕೆಗಳಿಗಾಗಿ ಕ್ಲಬ್ ಅಸ್ತಿತ್ವಕ್ಕೆ ಬಂತು ಎಂದರ್ಥ.



ವಿವಾದ ಪ್ರಾರಂಭವಾದದ್ದು ಇಲ್ಲಿಂದ. ಪ್ರಜ್ಞಾವಂತ ನಾಗರೀಕರನೇಕರು 'ಮೈದಾನ ಬಚಾವೋ' ಸಮಿತಿ ರಚಿಸಿಕೊಂಡು ಸ್ವಯಂ ಸ್ಫೂರ್ತಿಯಿಂದ ಹೋರಾಟಕ್ಕಿಳಿದರು.

ನಿಸ್ಸಂಶಯವಾಗಿ ಇದೊಂದು ಶ್ರೀಮಂತರು, ಸಮಾಜದಲ್ಲಿ 'ಪ್ರತಿಷ್ಠಿತ'ರು ಎನ್ನಿಸಿಕೊಂಡವರ 'ಮೋಜು-ಮಸ್ತಿ' ಹವ್ಯಾಸಗಳನ್ನು ಮೈಗೂಡಿಸಿಕೊಂಡವರ ಸಂಸ್ಥೆಯಾಗಿದೆ. ಶಾಸಕರು, ಸಂಸದರು, ಮಾಧ್ಯಮಗಳವರು, ರಾಜಕಾರಣಿಗಳು ತಮ್ಮ 'ಮನರಂಜನೆ ಚಟುವಟಿಕೆ' ಎನ್ನುವ ವಿಷಯಗಳಲ್ಲಿ ಜನಸಾಮಾನ್ಯರಿಂದ ಅಂತರ ಕಾಯ್ದುಕೊಳ್ಳಬೇಕೆನ್ನುವವರು. ಗೌಪ್ಯತೆ ಹಾಗೂ ಪ್ರತಿಷ್ಠೆ ಕಾಪಾಡಿಕೊಳ್ಳಬೇಕೆಂದು ಇಚ್ಛಿಸುವರು. ಅವರು ಇಂತಹ 'ಸಂಸ್ಥೆ'ಯ ಆಶ್ರಯ ಪಡೆಯುವುದು ಸಹಜ. ಈ ಸಂಸ್ಥೆಯ ಸದಸ್ಯತ್ವ ಶುಲ್ಕವೇ 4-5 ಲಕ್ಷ ರೂಪಾಯಿ. ಅಂದರೆ ಯಾವ ರೀತಿಯ ಸಂಸ್ಥೆ- ಯಾವ ವರ್ಗದ ಜನರ ಸಂಸ್ಥೆ ಎಂಬುದು ಅರ್ಥವಾದೀತು.

ಈಗ ಅಸೋಶಿಯೇಶನ್‌ದವರ ವಾದವೆಂದರೆ 'ಜಾಗೆಯು ಅಸೋಶಿಯೇಶನ್‌ಗೆ ಮಂಜೂರಾಗಿದೆ. ಸದಸ್ಯರಿಗಾಗಿ ಹೊಸ ಸೇವೆ ಒದಗಿಸುವುದು ಸಂಸ್ಥೆಯ ಉದ್ದೇಶ. ಅದಕ್ಕಾಗಿ ಅದನ್ನು ಸಿದ್ಧಗೊಳಿಸಲಾಗುತ್ತಿದೆ.' 'ಇದು ಸರಕಾರಿ ಜಾಗೆ. ಲೀಸ್ ಅವಧಿ ಮುಗಿದಿದೆ. ಸರಕಾರ ಅದನ್ನು ಪರತ್ ತೆ-ಗೆದುಕೊಂಡು ಸಾರ್ವಜನಿಕರ ಉಪಯೋಗಕ್ಕೆ ಮುಕ್ತಗೊಳಿಸಬೇಕು ಮತ್ತು ಮೋಜು ಮಸ್ತಿಗೆ ಅವಕಾಶವಿರಬಾರದು. ಯಾವ ಕಾರಣಕ್ಕೂ ನಾವು ಹಿಂದೆ ಸರಿಯುವದಿಲ್ಲ' ಎನ್ನುವುದು ಮೈದಾನ ಬಚಾವೋ ಸಮಿತಿಯ ವಾದ. ಈ ಹೋರಾಟಕ್ಕೆ ನಾಡೋಜ ಪಾಟೀಲ ಪುಟ್ಟಪ್ಪ ನೇತೃತ್ವ ನೀಡಿದ್ದು ವಿಶೇಷವಾಗಿದೆ. ಹೋರಾಟ ತೀವ್ರಗೊಂಡಿದ್ದೇ ಅವರ ಮುತುವರ್ಜಿಯಿಂದ. ಒಂದು ಹಂತದಲ್ಲಿ ಜಿಲ್ಲಾ ಉಸ್ತುವಾರಿ ಮಂತ್ರಿ ಸಂತೋಷ ಲಾಡ್ ಅವರ ಮಧ್ಯಸ್ಥಿಕೆಯಲ್ಲಿ ಜಿಲ್ಲಾಧಿಕಾರಿಗಳ ಸಭಾ ಭವನದಲ್ಲಿ ಮಾತುಕತೆ ನಡೆದು ಯಾವುದೇ ಇತ್ಯರ್ಥವಾಗಿಲ್ಲ. ಮುಖ್ಯಮಂತ್ರಿ ಸಿದ್ಧರಾಮಯ್ಯ ಮತ್ತು ಪಾಟೀಲ ಪುಟ್ಟಪ್ಪ ಅವರ ನಡುವೆ ಚರ್ಚೆಯಾಗಿದ್ದರೂ ಪ್ರಶ್ನೆ ಬಗೆಹರಿಯುವ ಲಕ್ಷಣಗಳು ಗೋಚರಿಸುತ್ತಿಲ್ಲ.

ಒಂದು ಮೈದಾನದ ವಿವಾದ ವಿರೋಧದ ಹಂತವನ್ನು ದಾಟಿ ಸಂಘರ್ಷದ ಘಟ್ಟ ತಲುಪಿದೆ. ಸರಕಾರ ಈಗಲೇ ಮಧ್ಯ ಪ್ರವೇಶ ಮಾಡಿ ಸಮಸ್ಯೆ ಬಗೆಹರಿಸಬೇಕು. ಅದು ಸರ್ಕಾರಕ್ಕೂ ಮತ್ತು ಜನರಿಗೂ ಒಳ್ಳೆಯದು. ಈ ವಿಷಯದಲ್ಲಿ ಸರಕಾರ ದಿವ್ಯ ನಿರ್ಲಕ್ಷ್ಯವಹಿಸಿದೆ. ಮೈದಾನವನ್ನು ಕೋಟಿ ಉಳ್ಳವರಿಗೆ ಮೋಜಿಗಾಗಿ ಬಿಟ್ಟುಕೊಡುವುದು, ಸಾರ್ವಜನಿಕರ ಹಿತ ಕಡೆಗಣಿಸುವುದನ್ನು ಸರ್ವದಾ ಒಪ್ಪಲಾಗದು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಜನತಾ ದಳ: ಈಗಲಾದರೂ ಪಾಠ ಕಲಿಯುವುದೇ?

ಎಸ್.ವೈ.ಗುರುಶಾಂತ್

ಜಾತ್ಯಾತೀತ ಜನತಾದಳ ತನ್ನ ಅನುಭವದಿಂದ ಪಾಠ ಕಲಿಯುವುದೇ? ಒಂದೊಂದು ಚುನಾವಣಾ ಸಂದರ್ಭದಲ್ಲಿ, ಗೆದ್ದಾಗ ಅಥವಾ ಸೋತಾಗ ಮುಂದೇನು ಎಂದಾಗ ಮತ್ತೇ ಮತ್ತೇ ಕೇಳಿ ಬರುವ ಪ್ರಶ್ನೆಯೇ ಇದು. ಇಂತಹ ಸ್ಥಿತಿ ಜೆಡಿ-ಎಸ್‌ಗೆ ಮಾತ್ರವಲ್ಲ, ಬಹುತೇಕ ದೇಶದ ಪ್ರಾದೇಶಿಕ ಪಕ್ಷಗಳ ಬಗೆಗೂ ಕೇಳಿ ಬರುವ ಮಾತು. ಇದೀಗ ಕಳೆದ ತಿಂಗಳು ಎರಡು ಲೋಕಸಭಾ ಸ್ಥಾನಗಳಿಗೆ ನಡೆದ ಉಪಚುನಾವಣೆ ಫಲಿತಾಂಶದ ಬಳಿಕ ಜೆಡಿ-ಎಸ್‌ನ ನಿಲುವು, ನಡೆ ತೀವ್ರ ಸಂದೇಹಗಳಿಗೆ ಒಳಪಟ್ಟಿದೆ.


ಪ್ರಶ್ನೆಗಳು ಹಲವು


ಬಿಜೆಪಿಯೊಂದಿಗೆ ಮೈತ್ರಿಗೆ ಹೋಗಿ ತಾನು ಸೆಕ್ಯುಲರ್ ಎಂದು ಕರೆದು ಕೊಳ್ಳುವುದಕ್ಕೆ ಏನರ್ಥವಿದೆ? ಇದು ಜಾತಿಗೆ ಸೀಮಿತಗೊಂಡ ಪಕ್ಷ, ಸಾಮೂಹಿಕ ನಾಯಕತ್ವವಿಲ್ಲದ ಅಪ್ಪ ಮಕ್ಕಳ ಪಕ್ಷ ಎನ್ನುವಂತಹ ಪ್ರಶ್ನೆಗಳಿಗೆ ಉತ್ತರ ಕೊಡಲು ಅದರ ನಾಯಕತ್ವ ಇದೀಗ ಕಾರ್ಯಸೂಚಿ ಹಿಡಿದು ಹೊರಟಿದೆ. ಹೀಗಾಗಿಯೇ ಪಕ್ಷದ ಮುಖ್ಯ ಘಟಕಕ್ಕೆ ಎ.ಕೃಷ್ಣಪ್ಪನವರನ್ನು ನೂತನ ಅಧ್ಯಕ್ಷರಾಗಿ ನೇಮಿಸಿದ್ದೂ ಒಳಗೊಂಡು ಪಕ್ಷ ಸಂಘಟಿಸಲು ರಾಜ್ಯ ಪ್ರವಾಸ, ಪಕ್ಷದ ರಾಜಕೀಯ ನಿಲುವಿನ ಸ್ಪಷ್ಟನೆ ನೀಡುವ ಹಲವು ಪ್ರಯತ್ನಗಳು ನಡೆದಿವೆ.


ಕರ್ನಾಟಕದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಿಗೆ ಪರ್ಯಾಯವಾಗಿ ಜೆಡಿಎಸ್ ಪಕ್ಷಕ್ಕೆ ಒಂದು ಮಹತ್ವದ ಸ್ಥಾನವನ್ನು ಜನತೆ ನೀಡುತ್ತಾ ಬಂದಿದೆ. 1983ರಲ್ಲಿ ಕಾಂಗ್ರೆಸ್‌ನ ಏಕಸ್ವಾಮಿತ್ವವನ್ನು ಮುರಿದ ಜನತೆ ಪರ್ಯಾಯವಾಗಿ ಜನತಾ ಪಕ್ಷವನ್ನು ಬೆಂಬಲಿಸಿದರು, ಬಲಪಡಿಸಿದರು. ಈ ಪ್ರಕ್ರಿಯೆ ರಾಷ್ಟ್ರ ಮಟ್ಟದಲ್ಲಿಯೂ ಮುಂದುವರಿದಿತ್ತು. ಮುಂದೆ ಹಲವಾರು ರಾಜಕೀಯ ಸ್ಥಿತ್ಯಂತರಗಳಲ್ಲಿ ಈ ಪಕ್ಷದಲ್ಲಿ ಸಂಭವಿಸಿದ ಒಡಕುಗಳು, ವಿವಿಧ ಬಣಗಳಲ್ಲಿ, ವಿವಿಧ ಹೆಸರುಗಳಲ್ಲಿ ಪುನರ್ ಸಂಘಟನೆಗೂ ಈಡಾಯಿತು. ಇದರಲ್ಲಿ ಜನತಾಪಕ್ಷ/ಜನತಾದಳದೊಳಗಿನ ಆಂತರಿಕ ಬಿಕ್ಕಟ್ಟು, ಸಂಘರ್ಷಗಳನ್ನು ಬಳಸಿ ಅದನ್ನು ದುರ್ಬಲಗೊಳಿಸುವುದರಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳೆರಡರ ತಂತ್ರ-ಕುತಂತ್ರಗಳು, ಸತತ ಧಾಳಿಗಳ ಪಾತ್ರವಿತ್ತು. ಇಷ್ಟಾದರೂ ರಾಜ್ಯದ ಜನತೆ ಮೂರನೆಯ ಪರ್ಯಾಯವಾಗಿ ಜೆಡಿ-ಎಸ್‌ಗೆ ಬೆಂಬಲಿಸುತ್ತಾ ಬಂದಿರುವುದು ಗಮನಾರ್ಹ.

ತಪ್ಪುಗಳ ಸರಮಾಲೆ

ಒಂದೊಮ್ಮೆ ಪ್ರಧಾನಿಯನ್ನೂ ಹೊಂದಿದ್ದ ಜೆಡಿ-ಎಸ್ ಪಕ್ಷದ ಎಲ್ಲಾ ಬೆಳವಣಿಗೆಗಳನ್ನು ಅವಲೋಕಿಸುವುದು ಈಗ ಅಗತ್ಯವಿಲ್ಲ. ಮುಖ್ಯವಾಗಿ ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ಆರ್ಥಿಕ ನೀತಿಗಳ ಜಾರಿಯ ಭರಾಟೆ, ಅದು ತಂದ ರಾಜಕೀಯ ಬದಲಾವಣೆಗಳ ಸಂದರ್ಭದಲ್ಲಿ ವಿವಿಧ ಆರ್ಥಿಕ, ರಾಜಕೀಯ ಶಕ್ತಿಗಳ ಮೇಲಾಟಗಳನ್ನು, ಇದಕ್ಕೆ ಜನತೆ ನೀಡಿದ ಏಟಿನ ಪ್ರತಿಕ್ರಿಯೆಗಳನ್ನು ಜೊತೆಯಲ್ಲೇ ಸ್ವಲ್ಪವಾದರೂ ಗಮನಿಸಬೇಕಾಗುತ್ತದೆ.







> ಜಾತ್ಯಾತೀತ ಜನತಾದಳವು ಈ ಎಲ್ಲಾ ಅನುಭವಗಳಿಂದ ಪಾಠ ಕಲಿಯಬೇಕಿದೆ. ಕಾಂಗ್ರೆಸ್ ಮತ್ತು ಬಿಜೆಪಿಗಳು ಒಂದೇ ರೀತಿಯ ನೀತಿಗಳ ಮೂಲಕವಾಗಿ, ಕಾರ್ಯವೆಸಗುತ್ತಿರುವಾಗ ಇದಕ್ಕೆ ಪರ್ಯಾಯ ಕಂಡುಕೊಳ್ಳಬೇಕಿರುವುದು ಅನಿವಾರ್ಯ, ಅತ್ಯಗತ್ಯ. ಇದನ್ನು ಕಠಿಣ ಪರಿಶ್ರಮದಿಂದಲೇ ಕಟ್ಟಬೇಕಿದೆ.

ಉದಾರೀಕರಣದ ನೀತಿಗಳ ಪ್ರಬಲ ಆರಾಧಕರಾಗಿದ್ದ ಕಾಂಗ್ರೆಸ್‌ನ ಹೈಟೆಕ್ ಕೃಷ್ಣರವರ ಜನವಿರೋಧಿ ಸರಕಾರವನ್ನು 2004 ರಲ್ಲಿ ಜನತೆ ತಿರಸ್ಕರಿಸಿತು. ಆಗ ಇದರ ಲಾಭವನ್ನು ಕೋಮುವಾದಿ ಬಿಜೆಪಿ ಪಡೆಯಿತಾದರೂ (44ಶಾಸಕರಿಂದ 79ಕ್ಕೆ) ಜನತೆ ಅಧಿಕಾರವನ್ನು ನೀಡಲಿಲ್ಲ. ಆಗ ಜನಾದೇಶ ಸೆಕ್ಯುಲರ್ ಶಕ್ತಿಗಳ ಪರವಾಗೇ ಇತ್ತು. ಇಂತಹ ಸಂದರ್ಭದಲ್ಲಿ ಕೋಮುವಾದಿಗಳನ್ನು ಅಧಿಕಾರದಿಂದ ದೂರವಿಡಲು 65 ಸ್ಥಾನ ಗಳಿಸಿದ ಕಾಂಗ್ರೆಸ್ ಪಕ್ಷದೊಂದಿಗೆ 56 ಸ್ಥಾನ ಗಳಿಸಿದ್ದ ಜೆಡಿ-ಎಸ್ ಸೇರಲು ನಿರ್ಧರಿಸಿತು. ಹೀಗಾದ ಒಪ್ಪಂದದ ಬಳಿಕ ಈ ಪಕ್ಷಗಳ ಸಮಿಶ್ರ ಸರಕಾರ ಧರ್ಮಸಿಂಗ್ ನೇತೃತ್ವದಲ್ಲಿ ಅಧಿಕಾರಕ್ಕೆ ಬಂತು. ಜೆಡಿ-ಎಸ್ ಅಧಿಕಾರ ಹಂಚಿಕೊಂಡಿತು. ಗಣಿ ಹಾಗೂ ಭೂ ಮಾಫಿಯಾಗಳ ಪ್ರಧಾನ ಪಾತ್ರದಿಂದಾಗಿ, ಮೈತ್ರಿಕೂಟದ ಪಕ್ಷಗಳ ನಡುವಿನ ಕಿತ್ತಾಟದಿಂದಾಗಿ ಈ ಸರಕಾರ ಪತನವಾದಾಗ ಜೆಡಿ-ಎಸ್ ಪಕ್ಷವು ಅಧಿಕಾರದಾಹದಿಂದ ಸಂದರ್ಭ ಸಾಧಕ ರಾಜಕೀಯ ನೀತಿಯನ್ನು ಅನುಸರಿಸಿತು. (ಇದಕ್ಕೆ ದೇವೇಗೌಡರ ವಿರೋಧವಿದೆಯೆಂದು ಹೇಳಲಾಯಿತು) ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಈ ಸರಕಾರ ಮೊಟ್ಟ ಮೊದಲ ಬಾರಿಗೆ ಬಿಜೆಪಿಯನ್ನು ಅಧಿಕಾರದ ಭಾಗವಾಗಿಸಿತಲ್ಲದೇ, ಅಂತರಿಕ ಘರ್ಷಣೆಗಳು ಇದ್ದಾಗಲೂ ಅಭಾಧಿತವಾಗಿ ಕೋಮುವಾದಿಗಳು ಈ ಮೂಲಕ ತಮ್ಮ ರಾಜಕೀಯ, ಸಂಘಟನಾ ಹಾಗೂ ಆರ್ಥಿಕ ಬಲವನ್ನು ಕ್ರೋಢೀಕರಿಸಿಕೊಳ್ಳಲು, ನೆಲೆ ವಿಸ್ತರಿಸಿಕೊಳ್ಳಲು ಕಾರಣವಾಯಿತು. ಮುಂದೆ ಅದೊಂದೇ ಪಕ್ಷ ಅಧಿಕಾರಕ್ಕೆ ಬರುವಂತಾಗಲು ಪ್ರಧಾನ ಕಾಣಿಕೆ ನೀಡಿತು.

ಹಾದಿ ತಪ್ಪಿದ ರಾಜಕಾರಣ

ಹೀಗಿರುವಾಗಲೂ ಜೆಡಿ-ಎಸ್ ಮೂರನೆಯ ಶಕ್ತಿಯಾಗಿ ಒಂದು ಗಣನೀಯ ನೆಲೆ ಕಂಡುಕೊಳ್ಳಲು, ವಿರೋಧ ಪಕ್ಷವಾಗಿ ಪಾತ್ರ ನಿರ್ವಹಿಸುವಲ್ಲಿ ಜನತೆ ನೀಡಿದ ಅವಕಾಶವನ್ನು ಬಳಸಿ, ಜನತೆಯ ಸಂಕಷ್ಟಗಳಿಗೆ ರಾಜಕೀಯವಾಗಿ ಸ್ಪಂದಿಸಿ ರಾಜ್ಯದಲ್ಲಿ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳಲಿಲ್ಲ. ಮಾತ್ರವಲ್ಲ, ಅಂತಹ ಎಲ್ಲಾ ಅವಕಾಶಗಳನ್ನು ಕಳೆದುಕೊಳ್ಳುತ್ತಾ ಬಂತು. ಅಧಿಕಾರದ ಮೇಲೆ ವ್ಯಾಮೋಹ, ಆದರೆ ರಾಜಕೀಯ ನಿಷ್ಕ್ರಿಯತೆಗಳು ಕೇವಲ ಅರಮನೆ ಪಿತೂರಿ ರಾಜಕಾರಣಕ್ಕೆ ಸೀಮಿತಗೊಳ್ಳುವ ದುರಂತವನ್ನು ತಂದಿಟ್ಟಿತು. ಈ ಅವಧಿಯಲ್ಲೆಲ್ಲಾ ಎಡ ಪಕ್ಷಗಳ ಸಲಹೆ ಸೂಚನೆಗಳನ್ನು ಅಷ್ಟಾಗಿ ಗಂಭೀರವಾಗಿ ಪರಿಗಣಿಸಲಿಲ್ಲ, ಅವು ಅಪ್ರಾಯೋಗಿಕವೆಂದೇ ಎಂದು ಭಾವಿಸಿತು.

ಇಷ್ಟಾದ ನಂತರವೂ ಇತ್ತೀಚಿನ ಮಂಡ್ಯ, ಬೆಂಗಳೂರು ಗ್ರಾ. ಲೋಕಸಭಾ ಉಪಚುನಾವಣೆಯಲ್ಲಿ ಕಾಂಗ್ರೆಸ್‌ಗೆ ವಿರೋಧವಾಗಿ ಬಿಜೆಪಿಯೊಂದಿಗೆ ಮೊದಲು ಒಳ ಒಪ್ಪಂದ, ನಂತರ ಬಹಿರಂಗವಾಗಿ ಮೈತ್ರಿ ಮಾಡಿಕೊಂಡು ತೀವ್ರ ಮುಖಭಂಗ ಅನುಭವಿಸಿದ್ದು ಗಮನಾರ್ಹ. ಇದೇ ಸೂತ್ರವನ್ನೇ ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲೂ ಪ್ರಯೋಗಿಸುವ ಯೋಜನೆಗೆ ಮತದಾರರು ತೀವ್ರ ಏಟು ಕೊಟ್ಟಿದ್ದಾರೆ. ಜೆಡಿ-ಎಸ್‌ನ ಇಂತಹ ಸಮಯಸಾಧಕ ತಂತ್ರವನ್ನು ಎಡಪಕ್ಷಗಳು ತೀವ್ರವಾಗಿ ವಿರೋಧಿಸಿದ್ದವು.

ಕಠಿಣ ವಾಸ್ತವ

ಕರ್ನಾಟಕದಲ್ಲಿ ಹಾಗೂ ದೇಶದಲ್ಲಿ ಮೂರನೆಯ ಸೆಕ್ಯುಲರ್ ಪರ್ಯಾಯ ಅದರಲ್ಲೂ ನೀತಿಗಳಾಧಾರದಲ್ಲಿ ಎಡ ಪಕ್ಷಗಳುಳ್ಳ ಮೂರನೆಯ ರಾಜಕೀಯ ಪರ್ಯಾಯ ರೂಪುಗೊಳ್ಳದಂತೆ, ಅದನ್ನು ದುರ್ಬಲಗೊಳಿಸಲು ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಸತತವಾಗಿ ಪ್ರಯತ್ನ ನಡೆಸುತ್ತಿವೆ. ಇದಕ್ಕೆ ದೇಶವನ್ನು ಲೂಟಿ ಹೊಡೆಯುತ್ತಿರುವ ಕಾರ್ಪೋರೇಟ್ ಕಂಪನಿಗಳು, ಅಮೇರಿಕನ್ ಸಾಮ್ರಾಜ್ಯಶಾಹಿಗಳ ಸಂಪೂರ್ಣ ನೆರವು ಇದೆ. ಜೆಡಿ-ಎಸ್ ನಂತಹ ಪ್ರಾದೇಶಿಕ ಪಕ್ಷವೂ ಸಹ ಇಂತಹ ಸ್ಥಿತಿಯಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗುತ್ತಿರುವುದೂ ವಾಸ್ತವವೇ. ಆದರೆ ಕಾಂಗ್ರೆಸ್ಸನ್ನು ವಿರೋಧಿಸುವ ಭರದಲ್ಲಿ ಫ್ಯಾಸಿಸ್ಟ್ ಮನೋಭಾವದ ಕೋಮುವಾದೀ ಬಿಜೆಪಿಯನ್ನು ಅಪ್ಪಿಕೊಳ್ಳುವುದು, ಅವರನ್ನು ಬಲಗೊಳಿಸುವುದು ಎಂತಹ ಹಾನಿಕಾರಕ ಪರಿಣಾಮಗಳಿಗೆ ಹಾದಿ ಮಾಡಿಕೊಡುವುದು ಎಂಬುದರ ಬಗ್ಗೆ ಎಚ್ಚರ ಇರಬೇಕು.

ಜನತಾ ಪಕ್ಷ-ಜನತಾದಳ, ಜೆಡಿ-ಎಸ್‌ಗಳ ಇಂತಹ ತಪ್ಪಾದ, ಸಂದರ್ಭಸಾಧಕ ರಾಜಕೀಯ ತಂತ್ರಗಳು ಅವುಗಳ ನೆಲೆಯನ್ನೇ ಬಿಜೆಪಿ ಕಬಳಿಸಿ ಕಾಂಗ್ರೆಸ್‌ಗೆ ತಾನೇ ಪರ್ಯಾಯವೆಂದು ಬೆಳೆಯಲು ಕಾರಣವಾಗಿದೆ. ಪರಿಣಾಮವಾಗಿ ಅಲ್ಪಸಂಖ್ಯಾತರು, ದಲಿತ, ಹಿಂದುಳಿದ ವರ್ಗಗಳು ಜೆಡಿ-ಎಸ್‌ನಿಂದ ದೂರ ಹೋಗುವಂತೆ ಮಾಡಿವೆ. ಒಂದೊಮ್ಮೆ 2006ರಲ್ಲಿ ಬಿಜೆಪಿಯೊಂದಿಗೆ ಸೇರಿ ಸರಕಾರವನ್ನು ರಚಿಸಿದ ಬಗ್ಗೆ ಕೆಲವು ಒತ್ತಡದ ಸಂದರ್ಭದಲ್ಲಿ ನಿರ್ಧಾರ ಸರಿಯಿರಲಿಲ್ಲ ಎಂಬ ವಿಷಾದ ವ್ಯಕ್ತಪಡಿಸಿದರೂ ಮತ್ತೇ ಅದೇ ರೀತಿಯ ಸಂಬಂಧವಿರಿಸಿಕೊಳ್ಳಲು ಆಗೀಗ ಪ್ರಯತ್ನಿಸುವುದು ಏನನ್ನು ತೋರಿಸುತ್ತದೆ? 2013ರ ವಿಧಾನ ಸಭಾ ಚುನಾವಣೆಯಲ್ಲೂ ಮುಂದೆ ಬಿಜೆಪಿಯೊಂದಿಗೆ ಸೇರಿ ಸರಕಾರ ರಚಿಸಬಹುದು ಎಂಬ ಇಂಗಿತ ನೀಡಿದ್ದು ಸಹ ಜೆಡಿ-ಎಸ್ ಪಕ್ಷವು ಜಾತ್ಯಾತೀತ ಶಕ್ತಿಗಳ ಬೆಂಬಲವನ್ನು ಗಣನೀಯವಾಗಿ ಕಳೆದುಕೊಳ್ಳಲು ಕಾರಣವಾಯಿತು. ಇಂತಹ ರಾಜಕೀಯ ನಿಲುಮೆಯಿಂದಾಗಿಯೇ ಅದು ನಿರ್ದಿಷ್ಟ ನೀತಿಗಳು ಹಾಗೂ ವಿಷಯಗಳಾಧಾರದಲ್ಲಿ ರಾಜಕೀಯ ಪರ್ಯಾಯವನ್ನು ಜನರ ಮುಂದೆ ಕೊಂಡೊಯ್ಯಲು ನಿರಾಕರಿಸುತ್ತಿದೆ.

ಪ್ರಾಮಾಣಿಕ ಪ್ರಯತ್ನದ ಅಗತ್ಯತೆ

ಪುಟ 12 ಕ್ಕೆ

ಕಡಲತೀರ

ವಾ. ಉ.

ಮಂಗಳೂರಿನಲ್ಲಿ ಪಿ.ರಾಮಚಂದ್ರರಾವ್ ಸಂಸ್ಮರಣೆ

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ದೀರ್ಘ ಕಾಲದ ಕಾರ್ಯದರ್ಶಿಯೂ, ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಸದಸ್ಯರೂ ಆಗಿದ್ದ ಕಾಂ. ಪಿ.ರಾಮಚಂದ್ರ ರಾವ್ ಅವರ 15ನೇ ಮರಣ ವಾರ್ಷಿಕ



ಸಂಸ್ಮರಣೆಯನ್ನು ಸಂಗಾತಿ ಭಗತ್‌ಸಿಂಗ್ ಬಳಗ ಕೊಟ್ಟಾರ, ಮತ್ತು ಕಟ್ಟಡ ಕಾರ್ಮಿಕರ ಉರ್ವಸ್ಟೋರ್ ವಲಯ ಸಮಿತಿಯ ಆಶ್ರಯದಲ್ಲಿ ಸಪ್ಟೆಂಬರ್ 22 ರಂದು ಮಂಗಳೂರಿನಲ್ಲಿ ನಡೆಸಲಾಯಿತು.

ಶಾಲಾ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದ ಪಿ.ರಾಮಚಂದ್ರರಾಯರು "ಮಾಸ್ಟ್ರು" ಎಂದೇ ಜನಪ್ರಿಯರು. ವೃತ್ತಿ ಜೀವನದಲ್ಲಿ ಅವರು ಎಷ್ಟೋ ಸಾಧನೆ ಮಾಡಬಹುದಿತ್ತು; ಆದ-ರೆ ಅವರು ಕಮ್ಯೂನಿಸ್ಟ್ ಪಕ್ಷಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ಕ್ರಾಂತಿಕಾರಿ ಹೋರಾಟಗಾರರಾದ ಮಾಸ್ಟ್ರು, ಅತ್ಯಂತ ಸರಳ ಜೀವನವನ್ನು ನಡೆಸಿದರು – ಎಂಬುದಾಗಿ ಈ ಸಂದರ್ಭದಲ್ಲಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ನುಡಿದರು.

ಇವತ್ತು ರೈತರ ಭೂಮಿಯನ್ನು ಅಗ್ಗದ ಬೆಲೆಗೆ ಕಿತ್ತುಕೊಂಡು ಕಾರ್ಪೊರೇಟ್ ಉದ್ಯಮಗಳಿಗೆ ಉದಾರವಾಗಿ ನೀಡುತ್ತಿರುವ ಹಾಗೂ ಮತೀಯ ದ್ವೇಷವನ್ನು ಮಾತುಮಾತಿಗೂ ಉಗುಳುತ್ತಿರುವ ನರೇಂದ್ರ ಮೋದಿಯಂಥವರಿಗೆ ಕೆಲವರು ಮರುಳಾಗಿದ್ದಾರೆ. ಜೀವಮಾನವಿಡೀ ಕಾರ್ಮಿಕ ವರ್ಗದವರಿಗೆ ನ್ಯಾಯ ದೊರಕಿಸಲು, ರೈತರಿಗೆ ತಾವು ಉಳುವ ಭೂಮಿಯನ್ನು ಪಡೆಯುವುದಕ್ಕಾಗಿ ಹೋರಾಟ ಮಾಡಿದ ಪಿ.ರಾಮಚಂದ್ರರಾಯರಂಥವರು ನಮಗೆ ಆದರ್ಶ ಮಾದರಿಯಾಗಬೇಕು ಎಂದೂ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಪಿ.ರಾಮಚಂದ್ರರಾಯರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಮ್ಮಂಥ ಕಿರಿಯರಿಗೆ ಪಕ್ಷದ ಚಳುವಳಿಯಲ್ಲಿ ಮಾರ್ಗದರ್ಶನ ನೀಡಿದ ಬಗ್ಗೆ ಜಿಲ್ಲೆಯ ಹಿರಿಯ ರೈತ ಕಾರ್ಮಿಕ ಮುಖಂಡರಾದ ಕೆ.ಆರ್.ಶ್ರೀಯಾನ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಮಾಧವ ಭಾವುಕರಾಗಿ ವಿವರಿಸಿದರು.

ಸಂಗಾತಿ ಭಗತ್‌ಸಿಂಗ್ ಬಳಗದ ಸ್ಯಾಮುವೆಲ್ ಟೈಟಸ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಟ್ಟಡ ಕಾರ್ಮಿಕ ಮಂಗಳೂರು ನಗರ ಸಮಿತಿಯ ಯೋಗೀಶ್ ಜಪ್ಪಿನಮೊಗರು, ಅಶೋಕ್ ಶ್ರೀಯಾನ್ ಉರ್ವಸ್ಟೋರ್, ಡಿವೈಎಫ್ಐ ಜಿಲ್ಲಾ ಮುಖಂಡರಾದ ಮುನೀರ್ ಕಾಟಿಪಳ್ಳ, ದಯಾನಂದ ಶೆಟ್ಟಿ, ಬಿ.ಕೆ.ಇಮ್ತಿಯಾಜ್, ಮಾಸ್ಟ್ರ ಕುಟುಂಬದ ಪಿ.ಹರಿಶ್ಚಂದ್ರ ರಾವ್, ಮಾಧುರಿ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಂಗವಾಗಿ ಸ್ಥಳೀಯ ಎ.ಜೆ.ಆಸ್ಪತ್ರೆಯ ಸಹಯೋಗದಿಂದ ರಕ್ತದಾನ ಶಿಬಿರವನ್ನು ಬೆಳಿಗ್ಗೆ ನಡೆಸಲಾಗಿತ್ತು. ಬಡವರಿಗೆ



ವಸ್ತ್ರ ವಿತರಣೆ, ಒಬ್ಬರಿಗೆ ಮನೆ ವಿತರಣೆ ಕಾರ್ಯಕ್ರಮ ಕೂಡಾ ನಡೆಯಿತು.

ಉಡುಪಿ ಮತ್ತು ಮಂಗಳೂರಿಗಳಲ್ಲಿ ಕಾರ್ಮಿಕರ ಭರ್ಜರಿ ಪ್ರತಿಭಟನೆಗಳು:

ಕಾರ್ಮಿಕರಿಗೆ ಕನಿಷ್ಠ ರೂ.10,000 ವೇತನ ನಿಗದಿಪಡಿಸಬೇಕು, ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ನಿಷೇಧಿಸಬೇಕು ಇತ್ಯಾದಿ ಕಾರ್ಮಿಕ ವರ್ಗದ ಬೇಡಿಕೆಗಳನ್ನು ಅನುಷ್ಠಾನಗೊಳಿಸಬೇಕೆಂದು ಒತ್ತಾಯಿಸಿ ಸಿಐಟಿಯು ನೇತೃತ್ವದಲ್ಲಿ ಸಪ್ಟೆಂಬರ್ 20 ರಂದು ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನಾ ಪ್ರದರ್ಶನ ಮಾಡಬೇಕೆಂದು ಸಿಐಟಿಯು ರಾಜ್ಯ ಸಮಿತಿ ಕೊಟ್ಟ ಕರೆ ಮೇರೆಗೆ, ಉಡುಪಿ ಮತ್ತು ಮಂಗಳೂರಿನಲ್ಲಿ ನಡೆದ ಕಾರ್ಮಿಕರ ಮೆರವಣಿಗೆ ಮತ್ತು ಪ್ರತಿಭಟನಾ ಪ್ರದರ್ಶನಗಳು ಭಾರೀ ಯಶಸ್ವಿ ಯಾದವು.

ಎರಡೂ ನಗರಗಳಲ್ಲಿ ನಡೆದ ಕಾರ್ಮಿಕರ ರ್‍ಯಾಲಿಗಳು ಇತ್ತೀಚೆಗಿನ ವರ್ಷಗಳಲ್ಲೇ ಅತೀ ದೊಡ್ಡ ಪ್ರಮಾಣದ್ದು ಎಂದು ತಿಳಿದು ಬರುತ್ತಿದೆ. ಉಡುಪಿ ಮತ್ತು ಮಂಗಳೂರಿನಲ್ಲಿ ಆ ದಿನ ಭಾರೀ ಮಳೆ ಸುರಿಯುತ್ತಿದ್ದು, ಅದರ ಮಧ್ಯೆಯೂ ಕೊಡೆ ಹಿಡಿದು-ಕೊಂಡೇ ಕಾರ್ಮಿಕರು ಮಳೆಯಲ್ಲಿ ಸಾಗಿದ್ದು ಹಾಗೂ ಪ್ರತಿಭಟನಾ ಪ್ರದರ್ಶನ ನಡೆಸಿದ್ದು ವಿಶೇಷವಾಗಿತ್ತು.


ಕೋಟೇಶ್ವರ ಪಂಚಾಯತಿಗೆ ನಿವೇಶನ ರಹಿತರ ಮುತ್ತಿಗೆ:

ಕೋಟೇಶ್ವರ ಪಂಚಾಯತಿ ವ್ಯಾಪ್ತಿಯ 904 ನಿವೇಶನ ರಹಿತರ ಅರ್ಜಿಗಳನ್ನು ಮೂಲೆಗುಂಪು ಮಾಡಿರುವ ಗ್ರಾಮ ಪಂಚಾಯತ್ ಧೋರಣೆಯನ್ನು ಪ್ರತಿಭಟಿಸಿ ಸಪ್ಟೆಂಬರ್ 19 ರಂದು ಕುಂದಾಪುರ ತಾಲೂಕಿನ ಕೋಟೇಶ್ವರ ಗ್ರಾಮ ಪಂಚಾಯತಿಯ ಎದುರು ಮನೆ ನಿವೇಶನ ರಹಿತರ ಹೋರಾಟ ಸಮಿತಿ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಪ್ರದರ್ಶನ ನಡೆಸಲಾಯ್ತು.

ಕುಂದಾಪುರ ತಾಲೂಕಿನ ಗ್ರಾಮ ಗ್ರಾಮಗಳಿಂದಲೂ ನಿವೇಶನ ರಹಿತರು ಅರ್ಜಿ ಸಲ್ಲಿಸಿದ್ದು ಗ್ರಾಮ ಪಂಚಾಯತಿ ಅಧಿಕಾರಿಗಳು ಅರ್ಜಿಗಳನ್ನು ತಾಲೂಕು ಪಂಚಾಯತಿಗೆ ಕಳುಹಿಸಲು ವಿಳಂಬ ಮಾಡುತ್ತಿದ್ದಾರೆ. ಬಡವರಿಗೆ ನಿವೇಶನ ಒದಗಿಸಲು ಕ್ರಮಕೈಗೊಳ್ಳಲು ಮುಂದಾಗದಿದ್ದಲ್ಲಿ 20 ಗ್ರಾಮ ಪಂಚಾಯತಿಗಳ ಮೂರು ಸಾವಿರ ಅರ್ಜಿದಾರರಿಂದ ತಹಶೀಲ್ದಾರ್ ಕಚೇರಿ ಎದುರು ಅಹೋರಾತ್ರಿ ಪ್ರತಿಭಟನೆ ನಡೆಸಲಾಗುವುದು ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ಕೃಷಿ ಕೂಲಿಕಾರರ ಸಂಘದ ಕುಂದಾಪುರ ತಾಲೂಕು ಅಧ್ಯಕ್ಷ ರಾಜೀವ ಪಡುಕೋಣೆ, ಕಾರ್ಯದರ್ಶಿ ವೆಂಕಟೇಶ್ ಕೋಣಿ, ಮನೆ ನಿವೇಶನ ಹೋರಾಟ ಸಮಿತಿ ಸಂಚಾಲಕ ಕ-ರಿಯ ದೇವಾಡಿಗ, ಕಾರ್ಮಿಕ ಸಂಘಟನೆಗಳ ಮುಖಂಡರಾದ ಎಚ್.ನರಸಿಂಹ, ಬಾಲಕೃಷ್ಣಶೆಟ್ಟಿ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ●


ಕಾಂ. ಹರಿಕಿಶನ್ ಸಿಂಗ್ ಸುರ್ಜಿತ್ ಭವನ ಕೇರಳದಲ್ಲಿ ದಾಖಲೆ ನಿಧಿ ಸಂಗ್ರಹ



ಕಾಂ. ಹರಿಕಿಶನ್ ಸಿಂಗ್ ಸುರ್ಜಿತ್ ಅವರು ರಾಷ್ಟ್ರ ರಾಜಕಾರಣದಲ್ಲಿ ಜನಪರ ಪರ್ಯಾಯವೊಂದನ್ನು ರೂಪಿಸಲು ಶ್ರಮಿಸಿದ ಹಿರಿಯ ನಾಯಕರು. ಅವರು ಧೀರ್ಘಕಾಲಗಳವರೆಗೆ ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾಗಿ ದುಡಿದವರು. ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರೀಯ ನಾಯಕರೂ, ದೇಶದ ಎಡ ಚಳುಳಿಗೆ ದೊಡ್ಡ ಕೊಡುಗೆಯನ್ನು ನೀಡಿದ ಮುಖಂಡರಾಗಿದ್ದಾರೆ. ಅವರ ನೆನಪಿಗಾಗಿ ದೆಹಲಿಯಲ್ಲಿ 'ಸುರ್ಜಿತ್ ಭವನ'ವನ್ನು ನಿರ್ಮಿಸಲಾಗುತ್ತಿದ್ದು ಜೊತೆಗೆ ಇಎಂಎಸ್ ಸಂಶೋಧನಾ ಕೇಂದ್ರವೊಂದನ್ನೂ ಸಹ ರೂಪಿಸಲು ತಿರ್ಮಾನಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಪಕ್ಷವು ಕೇರಳ ರಾಜ್ಯದಲ್ಲಿ ಬಹುದೊಡ್ಡ ಮಟ್ಟದಲ್ಲಿ ಜನರ ಮಧ್ಯೆ ಬೀದಿಗಿಳಿದು ಹಣ ಸಂಗ್ರಹ ಮಾಡಿ ದೇಶದ ಗಮನ ಸೆಳೆದಿದೆ. ಈ ನಿಧಿ ಸಂಗ್ರಹ ಆಂದೋಲನದಲ್ಲಿ ಕೇವಲ 2 ದಿನ ಅಂದ-ರೆ ಸೆಪ್ಟೆಂಬರ್ 8 ಮತ್ತು 9 ರಂದು ಒಟ್ಟೂ 8,19,14,987 ರೂ. ಗಳನ್ನು ಸಂಗ್ರಹಿಸಲು ಸಾಧ್ಯವಾಗಿದೆ. ಎಂಟು ಕೋಟಿ ಗಳನ್ನೂ ಮೀರಿದ ಈ ಬೃಹತ್ ಮೊತ್ತದಲ್ಲಿ ಐದು ಕೋಟಿಗೂ ಮೀರಿದ ಮೊತ್ತವು ಸಾಮೂಹಿಕ ಸಂಗ್ರಹದಿಂದ ಬಂದಿದೆ ಎಂಬುದು ಗಮನಿಸಬೇಕಾದ ಅಂಶವಾಗಿದೆ. ಅಂದರೆ 5,15,07,436 ರೂ. ಜನಸಾಮಾನ್ಯರಿಂದ ಸಂಗ್ರಹಿಸಲಾಗಿದ್ದರೆ, 3,04,07,551 ರೂ. ಗಳು ಪಕ್ಷದ ಸದಸ್ಯರುಗಳ ಕೊಡುಗೆಯಾಗಿದೆ. ಹಣಸಂಗ್ರಹದ ಈ ಅಭೂತಪೂರ್ವ ಯಶಸ್ಸು ಇತರ ರಾಜ್ಯಗಳಿಗೆ ಸ್ಫೂರ್ತಿಯನ್ನು ತಂದಿದ್ದು ಸಿಪಿಐ(ಎಂ) ಪಾಲಿಟ್ ಬ್ಯೂರೋ ಸಿಪಿಐ(ಎಂ) ಕೇರಳ ಘಟಕವನ್ನು ಹಾರ್ಧಿಕವಾಗಿ ಅಭಿನಂದಿಸಿದೆ.

ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆಯಲ್ಲಿ ಆಳುವ ಕೂಟ ಮತ್ತೊಮ್ಮೆ ಅವೇ ಹಳಸಲು, ಅರ್ಥಹೀನ ಭರವಸೆಗಳನ್ನು ಕೊಟ್ಟರೆ ಆರೆಸ್ಸೆಸ್/ ಬಿಜೆಪಿ ಮುಖಂಡರು ತಮ್ಮ ಎಂದಿನ ಕೋಮುವಾದಿ ಚರ್ವಿತಚರ್ವಣವನ್ನೇ ಮಂಡಿಸಿದರು. ಅತ್ತ ಉತ್ತರಪ್ರದೇಶ ಮತ್ತು ಬಿಹಾರದ ಮುಖಂಡರು ಕೋಮುವಾದಿ ಧ್ರುವೀಕರಣದ ಭರ ಭೀತಿ ಹುಟ್ಟಿಸುವಂತಿದೆ ಎಂದರೆ,ಅಲ್ಪಸಂಖ್ಯಾತರ ಪ್ರತಿನಿಧಿಗಳು ದೇಶ 2014ರ ಸಾರ್ವತ್ರಿಕ ಚುನಾವಣೆಗಳತ್ತ ಸಾಗಿರುವ ಸಂದರ್ಭದಲ್ಲಿ ದಿಗಿಲುಗೊಂಡಿರುವುದು ಕಾಣಬಂತು. ಕಾರ್ಪೊರೇಟ್ ವಲಯದ ಗೈರುಹಾಜರಿ ಜರ್ಮನಿಯಲ್ಲಿ ಫ್ಯಾಸಿಸಂನ ಉದಯದ ಸಂದರ್ಭವನ್ನು ನೆನಪಿಸಿದೆ.



ಜಾತ್ಯಾತೀತ ಪ್ರಜಾಸತ್ತಾತ್ಮಕ ಬಹುಮುಖಿ ಸಾಮಾಜಿಕ ವ್ಯವಸ್ಥೆಯನ್ನು ಉಳಿಸಬೇಕಾಗಿದೆ

ಸೀತಾರಾಂ ಯೆಚೂರಿ

ರಾಷ್ಟ್ರೀಯ ಸಮಗ್ರತಾ ಮಂಡಳಿಯ 16ನೇ ಸಭೆ, ಮುಝಫ್ಫರ್‌ನಗರದ ಭೀಕರ ಕೋಮುಗಲಭೆಗಳ ನಂತರ, ಉತ್ತರಪ್ರದೇಶ ರಾಜ್ಯದ ಪಶ್ಚಿಮ ಭಾಗದಲ್ಲಿ ಗಂಭೀರ ಸ್ಥಿತಿ ಮುಂದುವರೆಯುತ್ತಿರುವ ಹಿನ್ನೆಲೆಯಲ್ಲಿ ನಡೆದಿದೆ.ಇತರ ಕಲಾಪಗಳೊಂದಿಗೆ, ಈ ಸಭೆ ಸರ್ವಸಮ್ಮತಿಯಿಂದ ಅಂಗೀಕರಿಸಿದ ನಿರ್ಣಯ, "ಕೋಮುಸೌಹಾರ್ದವನ್ನು ಕದಡುವ ಯಾವುದೇ ಸ್ವರೂಪದ ಹಿಂಸಾಚಾರವನ್ನು ಖಂಡಿಸಲು ಮತ್ತು ಇಮತಹ ಹಿಂಸಾಚಾರದಲ್ಲಿ ತೊಡಗಿರುವ ಎಲ್ಲರ ವಿಷಯದಲ್ಲೂ ಕಾನೂನಿನ ಅಡಿಯಲ್ಲಿ ತ್ವರಿತವಾಗಿ ಮತ್ತು ದೃಢತೆಯಿಂದ ವ್ಯವಹರಿಸಲು ನಿರ್ಧರಿಸಿದೆ, ಎಲ್ಲ ಸಮುದಾಯಗಳ ನಡುವೆ ಸೌಹಾರ್ದಯುತ ಸಂಬಂಧಗಳನ್ನು ಕಾಪಾಡಿಕೊಳ್ಳಲು, ಉಳಿಸಿಕೊಳ್ಳಲು ಮತ್ತು ಬಲಪಡಿಸಲು ಸಕಲ ಕ್ರಮಗಳನ್ನು ಕೈಗೊಳ್ಳಲು ಹಾಗೂ ಎಲ್ಲ ನಾಗರಿಕರು ತಮ್ಮ ಬದುಕನ್ನು ಸಮಾನ ನಾಗರಿಕರಾಗಿ ಘನತೆ ಮತ್ತು ಗೌರವದಿಂದ ಸಾಗಿಸಲು ಅನುವು ಮಾಡಿಕೊಡಲು ನಿರ್ಧರಿಸಿದೆ."

ಕೋಮು ಧಾಂಧಲೆಗಳು ಮತ್ತು ಅಪಾರ ಕಷ್ಟ-ನಷ್ಟಗಳ ನಂತರ ಇಂತಹ ಸದ್ಭಾವನೆಗಳನ್ನಷ್ಟೇ ಸೂಸುವ ನಿರ್ಣಯಗಳಿಗೆ ಏನು ಅರ್ಥ ಉಳಿದಿದೆ ಎಂಬ ಹತಾಶೆಯ ದನಿಗಳು ಸಭೆಯಲ್ಲಿ ಪಕ್ಷಭೇದವಿಲ್ಲದೆ, ವಿಶೇಷವಾಗಿ ಜಾತ್ಯಾತೀತ ದನಿಗಳು ಕೇಳಬಂದವು. ಈ ಮಂಡಳಿಯ ಸಭೆಯನ್ನು ಪ್ರತಿ ವರ್ಷ ನಡೆಸಲಾಗುವುದು ಎಂಬ ಭರವಸೆ ನೀಡಲಾಗಿತ್ತು. ಆದರೆ ಅದನ್ನೆಂದೂ ಪಾಲಿಸಿಲ್ಲ. ಈ ಹಿಂದಿನ ಸಭೆ ನಡೆದದ್ದು ಎರಡು ವರ್ಷಗಳ ಹಿಂದೆ 2011ರಲ್ಲಿ. ಗಲಭೆಗಳು ನಡೆದ ಮೇಲೆಯೇ ಇಂತಹ ಸಭೆಗಳನ್ನು ನಡೆಸಲಾಗುತ್ತಿದೆ. ಪರಿಸ್ಥಿತಿಯನ್ನು ಮುಂಗಂಡು ಮಧ್ಯಪ್ರವೇಶಿಸುವ ನಿಲುವು ಇಲ್ಲದಿದ್ದರೆ ಪರಿಸ್ಥಿತಿ ಸುಧಾರಿಸಲಾರದು. ಇದು ಸಾಧ್ಯವಾಗುವುದು ಸಮಯ-ಸಮಯಕ್ಕೆ ನಿಯಮಿತವಾಗಿ ಸಭೆ ನಡೆಸಿದರೆ ಮಾತ್ರ. ಘಟನೆ ಸಂಭವಿಸಿದ ನಂತರದ ಇಂತಹ ಸಭೆ ಕೇವಲ ಮರಣೋತ್ತರ ಪರೀಕ್ಷೆಯ ಕಸರತ್ತು ಮಾತ್ರವಾಗಿ ಉಳಿಯುತ್ತದೆ. ಹಿಂದಿನ ಅನುಭವಗಳ ನಂತರವೂ ಸರಕಾರ ಎಂದಿನ ಭರವಸೆಗಳನ್ನೇ ಮತ್ತೊಮ್ಮೆ ಕೊಟ್ಟಿದೆ.

ಅದೇ ಕೋಮುವಾದಿ ಚರ್ವಿತಚರ್ವಣ

ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆಯನ್ನು ಆರು ವರ್ಷಗಳ ಬಿಜೆಪಿ ನೇತೃತ್ವದ ಎನ್‌ಡಿಎ ಆಳ್ವಿಕೆಯಲ್ಲಿ ಒಂದು ಬಾರಿಯೂ ನಡೆಸಿಲ್ಲ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳುವ ಅಗತ್ಯವಿದೆ. ಆರು ವರ್ಷಗಳ ವಾಜಪೇಯಿ ಆಳ್ವಿಕೆಯಲ್ಲಿ ಈ ಮಂಡಳಿಯ ರಚನೆಯಾದರೂ ಆಗಿದೆಯೆ ಎಂದು ನೆನಪಿಸಿಕೊಳ್ಳಲಾಗದಷ್ಟು ಅದು ಮರೆವಿಗೆ ಸಂದಿದೆ. 2002ರ ಗುಜರಾತಿನ ಸರಕಾರೀ ಪ್ರಾಯೋಜಿತ ಹತ್ಯಾಕಾಂಡದ ನಂತರವೂ ಮಂಡಳಿ ಸಭೆ ಸೇರಿರಲಿಲ್ಲ.

ಅಂತಹುದೇ ನಿಲುವನ್ನು ಬಿಂಬಿಸುತ್ತ ಗುಜರಾತಿನ ಮುಖ್ಯಮಂತ್ರಿಗಳು ಸಭೆಗೆ ಹಾಜರಾಗದಿರಲು ನಿರ್ಧರಿಸಿದರು. ದೇಶದ ಮುಂದಿನ ಪ್ರಧಾನ ಮಂತ್ರಿ ತಾನೆಂದು ಪ್ರದರ್ಶಿಸಿಕೊಳ್ಳುವುದರ ನಡುವೆ ಅವರಿಗೆ ಬಿಡುವಾದರೂ ಎಲ್ಲಿದೆ? ಬಿಜೆಪಿ ಅಧ್ಯಕ್ಷರು ಕೂಡ ಸಭೆಯಲ್ಲಿ ಹಾಜರಿರಲಿಲ್ಲ. ಬಿಜೆಪಿ ನೇತೃತ್ವದ ಮುಖ್ಯಂತ್ರಿಗಳಲ್ಲಿ ಹಾಜರಾದವರು ಮಧ್ಯಪ್ರದೇಶದ ಮುಖ್ಯಮಂತ್ರಿಗಳು ಮಾತ್ರ. ಪಶ್ಚಿಮ ಬಂಗಾಲ, ತಮಿಳುನಾಡು, ಒಡಿಶಾ ಮುಂತಾದ ಇನ್ನು ಕೆಲವು ರಾಜ್ಯಗಳ ಮುಖ್ಯಮಂತ್ರಿಗಳು ತಮ್ಮ ಪ್ರತಿನಿಧಿಗಳಾಗಿ ತಮ್ಮ ಸಂಪುಟದ ಮಂತ್ರಿಗಳನ್ನು ಕಳಿಸಿದ್ದರು.

ಲೋಕಸಭೆಯಲ್ಲಿ ಪ್ರತಿಪಕ್ಷದ ಬಿಜೆಪಿ ಮುಖಂಡರು ಚರ್ಚೆಯಲ್ಲಿ ಮೊದಲೇ ಮಾತಾಡುತ್ತ ಕೋಮುವಾದಿ ಶಕ್ತಿಗಳ ಎಂದಿನ ಜುಗುಪ್ಸೆ ಹುಟ್ಟಿಸುವ ಚರ್ವಿತಚರ್ವಣವನ್ನೇ ಎತ್ತಿದರು. ಜಾತ್ಯಾತೀತತೆಗೆ ಹಿಂದಿಯಲ್ಲಿ ಬಳಸುವ 'ಧರ್ಮನಿರಪೇಕ್ಷತಾ' ಎಂಬ ಪದದ ಬದಲು 'ಪಂಥನಿರಪೇಕ್ಷತಾ' ಎಂದು ಬಳಸಬೇಕು ಎಂದರು. ಅಂದರೆ ಪ್ರಭುತ್ವ ಧರ್ಮಗಳ ನಡುವೆ ಭೇದಭಾವ ಮಾಡುವುದಿಲ್ಲ, ಅಥವ ಸ್ವತಃ ಯಾವುದೇ ಧರ್ಮವನ್ನು ಅಂಗೀಕರಿಸದೆ ಎಲ್ಲ ಧರ್ಮಗಳನ್ನು ಸಮಾನವೆಂದು ಪರಿಗಣಿಸುತ್ತದೆ ಎಂಬುದರ ಬದಲು, ಪಂಥಗಳ ನಡುವೆ ಭೇದಭಾವ ಮಾಡುವುದಿಲ್ಲ ಎಂದು. ಇದರಲ್ಲಿ ಹೇಳದೇ ಇದ್ದ, ಆದರೆ ಧ್ವನಿತವಾದ ಮಾತೆಂದರೆ, ಹಿಂದೂ ಧರ್ಮ ಮಾತ್ರವೇ ಧರ್ಮವೆಂದು ಕರೆಸಿಕೊಳ್ಳಲು ಅರ್ಹವಾಗಿದೆ, ಉಳಿದವನ್ನೆಲ್ಲ ಪಂಥಗಳೆಂದಷ್ಟೆ ವರ್ಣಿಸಬಹುದು ಎಂದು. ಇವರೆಲ್ಲ ಈಗ ಗೋಲ್ವಾಲ್ಕರ್‌ರವರ 'ಹಿಂದೂರಾಷ್ಟ್ರ'ದ ನಗ್ನ ಪ್ರತಿಪಾದನೆಯನ್ನು ಅಲ್ಲಗಳೆದರೂ ಆತನ ಫ್ಯಾಸಿಸ್ಟ್ ತರ್ಕಗಳನ್ನು ಮತ್ತಷ್ಟು ಗಟ್ಟಿಗೊಳಿಸುತ್ತಾರೆ. ಇಂತಹ ಒಂದು ಪರಿಕಲ್ಪನೆಯೇ, ಒಂದು ಧರ್ಮ ಬೇರೆಲ್ಲದರಕ್ಕಿಂತ ಮೇಲ್ಮಟ್ಟದ್ದು ಎಂದು ಹೇಳಿಕೊಂಡು ಸಮಾಜವನ್ನು ಕ್ರೋಮುಗ್ರಸ್ತಗೊಳಿಸುವ ಬುನಾದಿಯನ್ನು ಹಾಕುತ್ತದೆ. ಆರೆಸ್ಸೆಸ್/ಬಿಜೆಪಿ ಮಂದಿ ಇಂತಹ ತರ್ಕದ ಆಧಾರದಲ್ಲಿಯೇ ಕೋಮುವಾದಿ ಧ್ರುವೀಕರಣ ತರುತ್ತಿದ್ದಾರೆ, ಆಮೂಲಕ ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಅವರ ಕಣ್ಣೋಟದ ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿದ್ದಾರೆ.

ಇಂತಹುದೇ ದನಿಯಲ್ಲಿ ಮಧ್ಯಪ್ರದೇಶದ ಮುಖ್ಯಮಂತ್ರಿಗಳು ಅಲ್ಪಸಂಖ್ಯಾತರ 'ತುಷ್ಟೀಕರಣ'ದ ಮಾತಾಡಿದರು. ಈ ಸಭೆಯಲ್ಲಿ ಭಾಗವಹಿಸಿದ್ದ ಬಹಳಷ್ಟು ಮಂದಿ ನ್ಯಾಯಮೂರ್ತಿ ಸಾಚಾರ್ ಸಮಿತಿಯ ಮುಸ್ಲಿಂ ಅಲ್ಪಸಂಖ್ಯಾತರ ಸ್ಥಾನಮಾನ ಕುರಿತ ಶಿಫಾರಸುಗಳು ಮತ್ತು ರಂಗನಾಥ್ ಮಿಶ್ರ ಆಯೋಗದ ಅಲ್ಪಸಂಖ್ಯಾತರಿಗೆ ಮೀಸಲಾತಿ ಕುರಿತ ಶಿಫಾರಸುಗಳನ್ನು ಜಾರಿ ಮಾಡುವ ತುರ್ತಿನ ಬಗ್ಗೆ ಮಾತಾಡಿದರೆ, ಬಿಜೆಪಿಯವರು ಇಂತಹ ಕ್ರಮಗಳು ಅಲ್ಪಸಂಖ್ಯಾತರ 'ತುಷ್ಟೀಕರಣ' ಎಂಬಂತೆ ಮಾತಾಡಿದರು.

ಮತೀಯ ಪ್ರಭುತ್ವದತ್ತ?

ರಾಷ್ಟ್ರೀಯ ಸಮಗ್ರತಾ ಮಂಡಳಿಯಲ್ಲಿನ ಧಾರ್ಮಿಕ ಅಲ್ಪಸಂಖ್ಯಾತರ ಪ್ರಮುಖ ಪ್ರತಿನಿಧಿಗಳು ದೇಶಾದ್ಯಂತ 2014ರ ಸಾರ್ವತ್ರಿಕ ಚುನಾವಣೆಗಳಿಗೆ ಪೂರ್ವಭಾವಿಯಾಗಿ ತಮ್ಮ ಬಾಂಧವರ ವಿರುದ್ಧ ಹೆಚ್ಚುತ್ತಿರುವ ಸೆಳೆತಗಳ ಬಗ್ಗೆ ದಿಗಿಲಿನಿಂದ ಮಾತಾಡಿದರು. ಪ್ರತಿಷ್ಠಿತ ನ್ಯಾಯವಾದಿ ಫಾಲಿ ನರಿಮನ್‌ರಂತೂ ಭಾರತ ಒಂದು ಮತೀಯ ಪ್ರಭುತ್ವವಾಗುವತ್ತ ಚಲಿಸುತ್ತಿದೆಯೇ ಎಂಬ ಪ್ರಶ್ನೆಯನ್ನು ಮುಂದಿಟ್ಟರು.

ಉತ್ತರಪ್ರದೇಶ ಮತ್ತು ಬಿಹಾರದ ಪ್ರಮುಖ ಮುಖಂಡರು ಮತ್ತು ಅವರ ಮುಖ್ಯಮಂತ್ರಿಗಳು ಅಲ್ಲಿ ಕೋಮುವಾದಿ ಧ್ರುವೀಕರಣ ಭೀತಿ ಹುಟ್ಟಿಸುವ ರೀತಿಯಲ್ಲಿ ನಡೆದಿದೆ ಎಂದರು. ಸರಕಾರ ಮತ್ತು ಎಲ್ಲ ರಾಜಕೀಯ, ಸಾಮಾಜಿಕ ಶಕ್ತಿಗಳು ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಬಹುಳತೆಯ ಸಾಮಾಜಿಕ ವ್ಯವಸ್ಥೆಯನ್ನು ಕಾಯ್ದುಕೊಳ್ಳಲು ಒಟ್ಟುಗೂಡದಿದ್ದರೆ ಆಧುನಿಕ ಭಾರತದ ಭವಿಷ್ಯವೇ ಗಂಡಾಂತರಕ್ಕೀಡಾಗಲಿದೆ..

ಭಾರತದ ಕಾರ್ಪೊರೇಟ್ ವಲಯದ ಗೈರುಹಾಜರಿ ಈ ಸಭೆಯಲ್ಲಿ ಎದ್ದು ಕಾಣುತ್ತಿತ್ತು. ಈ ಮೂಲಕ ನಮ್ಮ ಬಹುಮುಖೀ ಜಾತ್ಯಾತೀತ ಪ್ರಜಾಸತ್ತಾತ್ಮಕ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯ ವಿಘಟನೆ ನಡೆದರೆ ಏನಾದೀತು ಎಂಬ ಪರಿವೆಯೇ ಅವರಿಗಿಲ್ಲ, ಅವರಿಗೆ ಬೇಕಾಗಿರುವುದು ತಮ್ಮ ಲಾಭಗಳನ್ನು ಗರಿಷ್ಟ ಮಟ್ಟಕ್ಕೇರಿಸುವುದು ಮಾತ್ರ, ಎಂಬುದು ಮತ್ತೊಮ್ಮೆ ದೃಢಗೊಂಡಿದೆಯಷ್ಟೇ. ಕಳೆದ ವಾರ ಈ ಅಂಕಣದಲ್ಲಿ ವರ್ಣಿಸಿದಂತೆ ಅವರು ಹೊಸದಾಗಿ ಕಂಡುಕೊಂಡ ತಮ್ಮ 'ಪ್ರವಾದಿ' ಅವರೆಲ್ಲ ಈ ಸಭೆಯಲ್ಲಿ ಭಾಗವಹಿಸದಂತೆ ಪ್ರೇರೇಪಿಸಿರುವಂತೆ ಕಾಣುತ್ತದೆ. ಆಮೂಲಕ ತಮ್ಮ ಭವಿಷ್ಯದ ಆಶಾಕಿರಣವನ್ನು ನೋಯಿಸಬಾರದು ಎಂದಿರಬಹುದು. ಜರ್ಮನಿಯಲ್ಲಿ ಹಿಟ್ಲರನಿಗೆ ಮತ್ತು ಫ್ಯಾಸಿಸಂನ ಉದಯಕ್ಕೆ ಕಾರ್ಪೊರೇಟ್ ವಲಯ ನೀಡಿದ ಬೆಂಬಲ ಮತ್ತು ಪ್ರೋತ್ಸಾಹವನ್ನು ಇದು ಮೈನಡುಕ ತರುವ ರೀತಿಯಲ್ಲಿ ನೆನಪಿಸಿದೆ.

2014ರ ಸಾರ್ವತ್ರಿಕ ಚುನಾವಣೆಗಳ ಸಿದ್ಧತೆಯಾಗಿ ಆರೆಸ್ಸೆಸ್/ಬಿಜೆಪಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸಲು ಮತ್ತು ಅದರ ಆಧಾರದಲ್ಲಿ ಚುನಾವಣಾ ಲಾಭಗಳನ್ನು ಗಿಟ್ಟಿಸಿಕೊಳ್ಳಲು ಏನು ಬೇಕಾದರೂ ಮಾಡಲು ಸಿದ್ಧವಿದೆ ಎಂಬುದಕ್ಕೆ ಗುಜರಾತದ ಮುಖ್ಯಮಂತ್ರಿಯನ್ನು ತಮ್ಮ ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸಲು ನಿರ್ಧರಿಸಿರುವುದೇ ಸಾಕ್ಷಿ. ನಮ್ಮ ದೇಶದ ಸಾಮಾಜಿಕ ಹಂದರದ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯ ಐಕ್ಯತೆ ಮತ್ತು ಸಮಗ್ರತೆಯನ್ನು ಬಲಿಗೊಟ್ಟಾದರೂ ನಮ್ಮ ಜನತೆಯ ಧಾರ್ಮಿಕ ಭಾವನೆಗಳನ್ನು ತಮ್ಮ ಅಲ್ಪ ಚುನಾವಣಾ ಲಾಭಕ್ಕಾಗಿ ಈ ರೀತಿ ಸಿನಿಕತನದಿಂದ ಅವರು ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಬಿಡಲಾಗದು. ಭಾರತದ ಶ್ರೀಮಂತ ಬಹುಳತೆ ಮತ್ತು ಅದರ ಐಕ್ಯತೆ ಹಾಗೂ ಸಮಗ್ರತೆಯನ್ನು ಕಾಯ್ದುಕೊಳ್ಳಬೇಕಾಗಿದೆ, ಅದರ ಆಧಾರದಲ್ಲಿ ನಮ್ಮ ಎಲ್ಲ ಜನತೆಗೆ ಒಂದು ಉತ್ತಮ ಭಾರತವನ್ನು ನಿರ್ಮಿಸುವ ಹೋರಾಟಗಳನ್ನು ಬಲಪಡಿಸಬೇಕಾಗಿದೆ.



ಡೆಕ್ಕನ್ ಕ್ರಾನಿಕಲ್ ನಲ್ಲಿ ಸುಧೀರ್ ತೈಲಾಂಗ್ ವ್ಯಂಗ್ಯ

2014ರ ಸಾರ್ವತ್ರಿಕ ಚುನಾವಣೆಗಳ ಸಿದ್ಧತೆಯಾಗಿ ಆರೆಸ್ಸೆಸ್/ಬಿಜೆಪಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸಲು ಮತ್ತು ಅದರ ಆಧಾರದಲ್ಲಿ ಚುನಾವಣಾ ಲಾಭಗಳನ್ನು ಗಿಟ್ಟಿಸಿಕೊಳ್ಳಲು ಏನು ಬೇಕಾದರೂ ಮಾಡಲು ಸಿದ್ಧವಿದೆ ಎಂಬುದಕ್ಕೆ ಗುಜರಾತದ ಮುಖ್ಯಮಂತ್ರಿಯನ್ನು ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸಲು ನಿರ್ಧರಿಸಿರುವುದೇ ಸಾಕ್ಷಿ.



'ದಮನಕಾರಿ ಎಸ್ಮಾ ಕಾಯ್ದೆಯನ್ನು ಹಿಂದಟ್ಟೋಣ'

ವರದಿ: ಭಾರತಿ ಗಾಂವ್ಕಾರ್

'ಕರ್ನಾಟಕದಲ್ಲಿ ಎಸ್ಮಾ ಕಾನೂನು ಅಗತ್ಯವೇ' ಎಂಬ ವಿಷಯದ ಮೇಲೆ ವಿಚಾರ ಸಂಕಿರಣವೊಂದು ಬೆಂಗಳೂರಿನ ರಾಜ್ಯ ಸರಕಾರಿ ನೌಕರರ ಸಭಾಂಗಣದಲ್ಲಿ ಸೆಪ್ಟೆಂಬರ್ 26, 2013 ರಂದು ಸಿಐಟಿಯುವಿನ ನೇತೃತ್ವದಲ್ಲಿ ನಡೆಯಿತು.

ಪ್ರಾಸ್ತಾವಿವಾಗಿ ಮಾತನಾಡಿದ ಸಿಐಟಿಯು ಪ್ರಧಾನ ಕಾರ್ಯದರ್ಶಿ ಕಾಂ. ಪ್ರಸನ್ನ ಕುಮಾರ್, ರಾಜ್ಯದ ಸಾರಿಗೆ ಸಚಿವರಾಗಿರುವ ರಾಮಲಿಂಗಾರೆಡ್ಡಿ ಅವರು ಎಸ್ಮಾ ಕಾನೂನನ್ನು ಮತ್ತೊಮ್ಮೆ ವಿಧಾನ ಸಭೆ ಅಧಿವೇಶನದಲ್ಲಿ ಮಂಡಿಸಿ ಅಂಗೀಕರಿಸುವುದಾಗಿ ಪ್ರಕಟಿಸಿದ್ದಾರೆ. ಎಸ್ಮಾ (ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆ- Essential Service maintenance Act) ಕರಾಳ ಕಾನೂನನ್ನು ಪುನರ್ ರಚಿಸಿ ಜಾರಿಗೊಳಿಸುವುದನ್ನು ಸಿಐಟಿಯು ಬಲವಾಗಿ ಖಂಡಿಸುತ್ತದೆ ಎಂದರು. ಜಗತ್ತಿನ ಇತಿಹಾಸದಲ್ಲಿ ಮಾನವ ಹಕ್ಕುಗಳ ರಕ್ಷಣೆಗಾಗಿ, ಸ್ವಾತಂತ್ರ್ಯ ಮತ್ತು ನೆಮ್ಮದಿಯ ಬದುಕಿಗಾಗಿ ಹಲವು ಹೋರಾಟಗಳು ಮತ್ತು ಕ್ರಾಂತಿಗಳು ನಡೆದು ಹೋಗಿವೆ. ಭಾರತದ ಸಂವಿಧಾನದಲ್ಲಿಯೂ ಸಹ ಭಾಗ 3 ರಲ್ಲಿ ಮೂಲಭೂತ ಹಕ್ಕುಗಳನ್ನು ದೇಶದ ಎಲ್ಲ ನಾಗರಿಕರಿಗೆ ಖಚಿತ ಪಡಿಸಿದೆ. ಮನುಷ್ಯನ ನ್ಯಾಯಯುತ ಮತ್ತು ನೆಮ್ಮದಿಯ ಬದುಕಿಗಾಗಿ ಮೂಲಭೂತ ಹಕ್ಕುಗಳು ಪ್ರಮುಖವಾಗಿವೆ ಎಂದು ಸ್ಪಷ್ಟಪಡಿಸಲಾಗಿದೆ. ಅದರ ಪರಿಚ್ಛೇಧ 19ರ ರಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಘಟನಾ ಸ್ವಾತಂತ್ರ್ಯ ಮತ್ತು ಶೋಷಣೆಯ ವಿರುದ್ಧದ ಸ್ವಾತಂತ್ರ್ಯಗಳನ್ನು ಕೊಡಮಾಡಲಾಗಿದೆ. ಸಂಘಟನಾ ಸ್ವಾತಂತ್ರ್ಯ ಇತರ ಎಲ್ಲಾ ಹಕ್ಕುಗಳ ಉಳಿವಿಗೂ ಮೂಲಭೂತ ಹಕ್ಕಾಗಿದೆ. ರಾಜ್ಯ ಸರಕಾರ ಪ್ರಸ್ತಾಪಿಸುತ್ತಿರುವ 'ಎಸ್ಮಾ' ಕಾನೂನು ಸಂಘಟನಾ ಹಕ್ಕು, ಶೋಷಣೆಯ ವಿರುದ್ಧದ ಮೂಲಭೂತ ಹಕ್ಕುಗಳ ಮೇಲೆ ಮಾಡುವ ಧಮನವೇ ಆಗಿದೆ.

ಸ್ವಾತಂತ್ರ್ಯಾನಂತರ 1952ರಲ್ಲಿ ಕೇಂದ್ರ ಸರಕಾರವು ಜವಾಹರಲಾಲ್ ನೆಹರೂರವರ ನೇತೃತ್ವದಲ್ಲಿ ಮೊದಲಬಾರಿಗೆ 'ಎಸ್ಮಾ' ಕಾನೂನನ್ನು 10ವರ್ಷಗಳ ಕಾಲಾವಧಿಗೆ ಅಸ್ತಿತ್ವದಲ್ಲಿರುವಂತೆ ಜಾರಿಗೊಳಿಸಿ, ರಾಜ್ಯ ಸರಕಾರಗಳು ಸದರಿ ಮಾದರಿಯಲ್ಲಿ ಕಾನೂನುಗಳನ್ನು ರಚಿಸಲು ಅಧಿಕಾರ ನೀಡಿತ್ತು. ಇಂದಿರಾ ಗಾಂಧಿ ಪ್ರಧಾನ ಮಂತ್ರಿ ಅಧಿಕಾರದ ಅವಧಿಯಲ್ಲಿ 1968 ರಲ್ಲಿ ಮತ್ತೊಮ್ಮೆ 'ಎಸ್ಮಾ' ಕರಾಳ ಕಾನೂನನ್ನು ಅಂಗೀಕರಿಸಲಾಯಿತು. ಈ ಕಾನೂನಿನ ಮೂಲಕ ಸಾರಿಗೆ, ವಿದ್ಯುತ್ ಮತ್ತು ಆರೋಗ್ಯ ಸೇವೆ ಮುಂತಾದ ವಲಯಗಳ ಕಾರ್ಮಿಕ ಮುಷ್ಕರಗಳನ್ನು ದಮನ ಮಾಡಲು ಉದ್ದೇಶಿಸಲಾಗಿತ್ತು.

1994ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿದ್ದಾಗ 10 ವರ್ಷಗಳ ಕಾಲ ಮಿತಿಯೊಂದಿಗೆ 'ಎಸ್ಮಾ' ಕಾನೂನನ್ನು ಜಾರಿಗೊಳಿಸಿದ್ದು, 2004ಕ್ಕೆ ಮುಕ್ತಾಯವಾಗಿದೆ. ಬಿಜೆಪಿ ಸರಕಾರವು 2009ರಲ್ಲಿ ಪುನಃ ಎಸ್ಮಾ ಕಾನೂನನ್ನು ಅಂಗೀಕರಿಸಿ ರಾಷ್ಟ್ರಪತಿಗಳ ಅನುಮೋದನೆಗಾಗಿ ಕಳುಹಿಸಿದ್ದೂ, ಆಗ ಕೇಂದ್ರದಲ್ಲಿ ಯುಪಿಎ-1 ಸರಕಾರವು ಎಡಪಕ್ಷಗಳ ಬೆಂಬಲದಲ್ಲಿದ್ದ ಕಾಲಾವಧಿಯಲ್ಲಿ ಈ ಕಾನೂನಿಗೆ ಅನುಮೋದನೆಯನ್ನು ನೀಡದಿರುವ ಕಾರಣ ಈ ಕಾನೂನು ಕಾಲ ಮಿತಿಯನ್ನು ಕಳೆದುಕೊಂಡಿತು.

ಬಿಜೆಪಿ ಸರಕಾರದ ಉದ್ದೇಶಿತ ಕಾನೂನಿನಲ್ಲಿ ಅಗತ್ಯ ಸೇವೆಗಳ ನೌಕರರು ಪರವಾನಿಗೆ ಇಲ್ಲದೇ ಕೆಲಸಕ್ಕೆ ಗೈರು ಹಾಜರಾದರೆ, ಅಥವಾ ಮುಷ್ಕರದಲ್ಲಿ ಭಾಗಿಯಾದರೆ ಮತ್ತು ಅಂತಹ ಮುಷ್ಕರಗಳಿಗೆ ಬೆಂಬಲಿಸಿದರೆ ಜೈಲು ಶಿಕ್ಷೆ ಮತ್ತು ರೂ. 2000 ದಂಡವಿಧಿಸುವ ಅಂಶಗಳು ಒಳಗೊಂಡಿವೆ. ಅಲ್ಲದೇ ವಾರೆಂಟ್ ಇಲ್ಲದೇ ಬಂಧಿಸುವ ಸರ್ವಾಧಿಕಾರಿ ಅಂಶಗಳನ್ನೂ ಒಳಗೊಂಡಿದೆ. ರಾಮಲಿಂಗಾರೆಡ್ಡಿ ಅವರು ಈ ಕಾನೂನನ್ನು ಇನ್ನಷ್ಟು ಬಿಗಿಗೊಳಿಸಿ ಜಾರಿಮಾಡುವುದಾಗಿ ಹೇಳಿಕೆ ನೀಡಿದ್ದು, ದಂಡವನ್ನು ರೂ. 2,000 ದಿಂದ ರೂ.5,000 ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದಾರೆ. ಹಿಂದೆ ಇಂತಹ ಕರಾಳ ಕಾನೂನನ್ನು ಪಿಯುಸಿ ಉಪನ್ಯಾಸಕರ ವಿರುದ್ಧ ಕರ್ನಾಟಕದಲ್ಲಿ ಉಪಯೋಗಿಸಿ ಧಾಳಿ ಮಾಡಲಾಗಿತ್ತು. ಈ ಹಿಂದಿನ ಕಾಲಾವಧಿಯಲ್ಲಿ 'ಎಸ್ಮಾ' ಜಾರಿ ಇಲ್ಲದ ಸಂಧರ್ಭದಲ್ಲಿ ಕಳೆದ ವರ್ಷ ಸಾರಿಗೆ ನೌಕರರು ಬೇಡಿಕೆಗಳ ಈಡೇರಿಕೆಗಾಗಿ ಮುಷ್ಕರ ನಡೆಸಿದಾಗ ಮಾತುಕತೆಗಳ ಮೂಲಕ ಪರಿಹಾರವನ್ನು ಕಂಡುಕೊಂಡಿರುವುದು ನಮ್ಮ ಮುಂದಿರುವ ಅನುಭವ.

ಯಾವುದೇ ಅಗತ್ಯ ಸೇವೆಗಳ ನೌಕರರ ಸಾಂದರ್ಭಿಕ ಬೇಡಿಕೆಗಳು, ಸಮಸ್ಯೆಗಳನ್ನು ಬಗೆಹರಿಸ ಬೇಕಾದರೆ ಪ್ರಜಾಪ್ರಭುತ್ವ ರೀತಿಯಲ್ಲಿ, ಮಾತುಕತೆ, ಸಂಧಾನ ಸಮಾಲೋಚನೆಗಳ ಮೂಲಕ ನ್ಯಾಯಬದ್ಧವಾಗಿ ಸರಕಾರವು ಮಧ್ಯಪ್ರವೇಶ ಮಾಡಿ ಪರಿಹಾರ ಕಂಡು ಹಿಡಿದು ಸಾರ್ವಜನಿಕರಿಗೆ ಆಗಬಹುದಾದ ಅನಾನುಕೂಲಗಳನ್ನು ತಪ್ಪಿಸಬಹುದಾಗಿದೆ.

'ಎಸ್ಮಾ'ದಂತಹ ಕರಾಳ ಕಾನೂನುಗಳ ವಿರುದ್ಧ ಜನತಾ ಪರಿವಾರ ಭಾಗವಾಗಿ ಇಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೋರಾಟಗಳಲ್ಲಿ ಭಾಗಿಯಾಗಿದ್ದರು. ಜನತಾ ಪಕ್ಷ ಅಸ್ತಿತ್ವಕ್ಕೆ ಬಂದಿದ್ದೇ ಇಂತಹ ಕರಾಳ ಕಾನೂನುಗಳ ವಿರುದ್ಧ ಹೋರಾಟದ ಪ್ರಕ್ರಿಯೆಯಲ್ಲಿ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇಂತಹ ಕರಾಳ ಕಾನೂನನ್ನು ಯಾವುದೇ ಕಾರಣಕ್ಕೂ ವಿಧಾನ ಮಂಡಲದಲ್ಲಿ ಮಂಡಿಸಬಾರದೆಂದು ಸಿಐಟಿಯು ರಾಜ್ಯ ಸಮಿತಿ ಒತ್ತಾಯಿಸುತ್ತದೆ ಎಂದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಎಸ್. ದೊರೆಸ್ವಾಮಿ ಅವರು ಮಾತನಾಡಿ ಎಸ್ಮಾದಂತಹ ಕಾನೂನನ್ನು ಜಾರಿಗೆ ತರುತ್ತೇವೆ ಎಂದು ಹೇಳಲಾಗುತ್ತಿದೆ. ಇದರ ಅಗತ್ಯ ಇದೆಯೆ ಎಂಬುದು ಇಂದಿನ ಪ್ರಶ್ನೆ. ಇರುವ ಕಾರ್ಮಿಕ ಕಾನೂನುಗಳನ್ನ ಸಮರ್ಪಕವಾಗಿ ಜಾರಿಗೊಳಿಸುವ ಬದಲು, ಯಾವ್ಯಾವುದೋ ಕಾರ್ಮಿಕ ವಿರೋಧಿ ಕಾನೂನುಗಳನ್ನು ಜಾರಿಗೊಳಿಸುವ ಕೆಲಸ ಮಾಡಲಾಗುತ್ತಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಇಂತಹ ಹುಚ್ಚಾಟಗಳೆಲ್ಲ ನಡೆಯುತ್ತಿತ್ತು, ಆದರೆ ಇಂದು ಅದರ ಅಗತ್ಯ ಇಲ್ಲ.

ಕಾರ್ಮಿಕರು ಸ್ವಾತಂತ್ರ್ಯ ಪೂರ್ವದಿಂದ ಇಂದಿನವರೆಗೆ ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಾ ಬಂದಿದ್ದಾರೆ. ಸ್ವಾತಂತ್ರ್ಯ ಸಂದರ್ಭದಲ್ಲಿ ನಮ್ಮ ಉದ್ದೇಶ ದೇಶಕ್ಕೆ ಸ್ವಾತಂತ್ರ್ಯ ಕೊಡಿಸುವುದು, ನಮ್ಮ ಕುಟುಂಬವನ್ನು ಸರಿದೂಗಿಸುವ ರೀತಿಯ ವಾತಾವರಣ ನಿರ್ಮಿಸುವ ಕಡೆಗಿನ ಪ್ರಯತ್ನವಾಗಿತ್ತು. ಇಂದಿನ ಸರಕಾರಗಳು ಅಂತಹ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನ ನಡೆಸುತ್ತಲೇ ಇರುತ್ತಾರೆ. ಅಂತಹ ಪ್ರಯತ್ನದಲ್ಲಿ ಎಸ್ಮಾ ಕರಾಳ ಕಾನೂನು ಕೂಡ ಒಂದು.

ಕಾರ್ಮಿಕರು ಒಂದಾಗಬೇಕು. ಬೇರೆ ದೇಶದವರು ನಮ್ಮ ಸಂಪತ್ತನ್ನು ಲೂಟಿ ಮಾಡಲು ಸಹಾಯಮಾಡಬಾರದು ಹಾಗಾಗಿ, ಜೊತೆಗೆ ಎಸ್ಮಾ ಕಾನೂನನ್ನು ವಿರೋಧಿಸಬೇಕು ಎಂದು ಅಭಿಪ್ರಾಯ ಪಟ್ಟರು.

ಜೆಡಿಸ್ ಮುಖಂಡರು, ವಿಧಾನಪರಿಷತ್ ಸದಸ್ಯರೂ ಆದ ಎಂ.ಸಿ. ನಾಣ... ಮಾತನಾಡಿ ಅಗತ್ಯ ಸೇವೆಗಳ ಕಾರ್ಮಿಕ... ಮಾತ್ರ ಈ ವಿಧೇಯಕ ಸೀಮಿತವಾಗಿ... ಮುಂದೊಂದು ದಿನ ಸರಕಾರದ ... ಇಲಾಖೆಗಳಲ್ಲಿ ಕೆಲಸ ಮಾಡುವ ... ನೌಕರರ ಮೇಲೂ ಈ ಕಾನೂ... ಜಾರಿಯಾಗಬಹುದಾದ ಅಪಾಯವಿ... ಎಂದು ಅಭಿಪ್ರಾಯ ಪಟ್ಟರು.

ಸಿಐಟಿಯುವಿನ ರಾಜ್ಯ ಅಧ್ಯಕ್ಷರಾ... ಕಾಂ. ವಿಜೆಕೆ ನಾಯರ್ ಮಾತನಾಡಿ ಎಸ... ಕಾಯ್ದೆ ಜಾರಿಗೆ ಸರಕಾರ ಮುಂದಾದ... ಕಾರ್ಮಿಕರು ಒಟ್ಟಾಗಿ ಹೋರಾ... ನಡೆಸಬೇಕು. ಅದಕ್ಕೂ ಮಣಿಯದಿದ್ದ... ಕರ್ನಾಟಕ ಬಂದ್ ಮಾಡಿಯಾದರೂ ಎಸ... ಜಾರಿಯಾಗದಂತೆ ತಡೆಯಬೇಕು ಎಂದರ... ಕಾನೂನನ್ನು ಅನುಸರಿಸಿ ಕಾರ್ಮಿಕ... ಹೋರಾಟವನ್ನು ಹತ್ತಿಕ್ಕಲು ಸಾಧ್ಯವಾಗ... ಪರಿಸ್ಥಿತಿಯಲ್ಲಿ ಕಾನೂನು ಬಾಹಿರವಾ... ಕಾನೂನು ರಚಿಸುವುದೇ ಸರ್ವಾಧಿಕಾ... ಅದರಂತೆಯೇ ಈಗ ಕಾರ್ಮಿಕರನ... ಹತ್ತಿಕ್ಕಲು ಈ ಎಸ್ಮಾ ಕಾಯಿದೆಯನ್ನು ತರಲ... ಸರಕಾರ ಮುಂದಾಗಿದೆ ಎಂದು ಆಕ್ರೋ... ವ್ಯಕ್ತಪಡಿಸಿದರು.

ಕಾರ್ಮಿಕ ಕಾನೂನುಗಳ ಪ್ರಕಾ... ಕರ್ತವ್ಯದ ಜೊತೆಗೆ ತಮ್ಮ ಹಕ್ಕನ... ಪಡೆದುಕೊಳ್ಳಲು ಮುಷ್ಕರ ನಡೆಸುವ ಹಕ... ಕಾರ್ಮಿಕರಿಗೆ ಇರುತ್ತದೆ, ಈ ಹಿನ್ನೆಲೆಯ... ಹಕ್ಕಿಗಾಗಿ ಹೋರಾಟ ನಡೆಸುವುದ... ಕಾನೂನು ಬಾಹಿರವಲ್ಲ ಎಂದರು.

ಬಿಎಂಎಸ್‌ನ ರಾಜ್ಯ ಸಂಘಟನ... ಕಾರ್ಯದರ್ಶಿಯಾದ ಕೆ.ಎಂ... ಸೂರ್ಯನಾರಾಯಣರಾವ್ ಅವರು ನಮ... ಸರಕಾರಗಳ ತಪ್ಪು ಆರ್ಥಿಕ ನೀತಿಯಿಂದಾ... ಕಾರ್ಮಿಕರು ಮತ್ತು ಮಾಲಿಕರ ನಡುವ... ಅಂತರ ಹೆಚ್ಚಾಗಿದೆ. ಲಾಭದ ಅಂಶವನು... ಕಾರ್ಮಿಕರಲ್ಲಿ ಸರಿಯಾಗಿ ಹಂಚಿ... ಮಾಡುವ ಕೆಲಸ ಆಗಿಲ್ಲ.

ನಮ್ಮ ಸಂವಿಧಾನದ 41ನೇ ವಿ... ಕೆಲಸದ ಹಕ್ಕನ್ನು ಖಾತರಿಗೊಳಿಸಿದ... 43ನೇ ವಿಧಿ ರಾಜ್ಯಗಳು ಎಲ್ಲ ಕಾರ್ಮಿಕರಿ... ತಮ್ಮ ಬದುಕನ್ನು ಭದ್ರಗೊಳಿಸಲು ಲಿವಿಂಗ್... ವೇಜಸ್ ನೀಡಬೇಕೆಂದಿದೆ. ಆದರೆ ನಮ... ರಾಜ್ಯದಲ್ಲಿ ಇಂತಹ ಹಕ್ಕನ್ನು ನಾಶಮಾ... ಕೆಲಸ ಮಾಡಲಾಗುತ್ತಿದೆ. ಅಗತ್ಯ ಸೇವೆಗ... ಕಾನೂನು ಎಂದು ಹೇಳುವಾಗ ಕಾರ್ಮಿಕ... ಬದುಕುವ ಹಕ್ಕು ಅಗತ್ಯ ಅಲ್ಲವೇ ಎಂಬ ಪ್ರಶ... ಏಳುತ್ತದೆ. ಅಂತಹ ಹಕ್ಕನ್ನು ಕಸಿದುಕೊಳ್ಳು... ಎಸ್ಮಾ ಕಾನೂನು ಅಗತ್ಯವಿಲ್ಲ ಎಂದರು.

ಎಐಯುಟಿಯುಸಿಯ ರಾಜ್ಯ ... ಧ್ಯಕ್ಷರಾದ ಕೆ. ರಾಧಾಕೃಷ್ಣ ಮಾತನಾಡಿ ... ಎಸ್ಮಾ ಕಾನೂನನ್ನು ಕಾರ್ಮಿಕರ ಮೇಲ... ಕಾರ್ಮಿಕರ ಹಕ್ಕನ್ನು ಕಸಿದು ಕೊಳ್ಳಲ... ಪ್ರಯತ್ನಿಸುತ್ತಿರುವ ಮಾಲಿಕರ ಮೇ... ಜಾರಿಗೋಳಿಸ ಬೇಕಿದೆ ಎಂದರು.

ಎಐಸಿಸಿಟಿಯು ಮುಖಂಡರಾ... ಅಪ್ಪಣ್ಣವರು ಮಾತನಾಡಿ ದೇಶ... ಸ್ವಾತಂತ್ರ್ಯ ಬಂದರೂ ಕಾರ್ಮಿಕರಿ... ಇನ್ನೂ ಸ್ವಾತಂತ್ರ್ಯ ಬಂದಿಲ್ಲ, ಇಂದಿಗೂ... ಅವರ ಮೇಲೆ ಎಸ್ಮಾದಂತಹ ಕಾನೂನನ... ಜಾರಿಗೊಳಿಸುತ್ತಿರುವುದೇ ಇದಕ್ಕೆ ... ಎಂದರು.

ಕಾರ್ಯಕ್ರಮದ ನಿರೂಪಣೆಯನ್ನು ಕಾ... ವರಲಕ್ಷ್ಮಿ ಮಾಡಿ, ವಂದನಾರ್ಪಣೆಯನ್ನ... ಕಾಂ. ಮಹಾಂತೇಶ ಮಾಡಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

"ಮಹಿಳೆಯರ ಅಭಿವೃದ್ಧಿ ಆಗದೇ ದೇಶದ ಅಭಿವೃದ್ಧಿ ಸಾಧ್ಯವಿಲ್ಲ" – ಬೃಂದಾ ಕಾರಟ್

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಭಾರತೀ ನಗರದಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 8ನೇ ರಾಜ್ಯ ಸಮ್ಮೇಳನವು ಸೆ.21 ರಿಂದ 23, 2013 ರವರೆಗೆ ಯಶಸ್ವಿಯಾಗಿ ನಡೆದಿದೆ. ಆ ಕುರಿತು ಒಂದು ನೋಟ.

ವರದಿ: ಯಶವಂತ.ಟಿ

ಡೊಳ್ಳು ಕುಣಿತ, ಪೂಜಾ ಕುಣಿತಗಳಂತಹ ಜಾನಪದ ಕಲಾತಂಡಗಳೊಂದಿಗೆ ಕೆ.ಎಂ. ದೊಡ್ಡಿ ಮುಖ್ಯ ರಸ್ತೆಯಲ್ಲಿ ಸು. ಎರಡು ಸಾವಿರ ಮಹಿಳೆಯರು ಆಕರ್ಷಕ ಮೆರವಣಿಗೆ ನಡೆಸಿದರು. ಮಹಿಳೆಯರ ಘೋಷಣೆಗಳು, ಜಾನಪದ ಕಲಾ ಪ್ರಾಕಾರಗಳು. ಜನರ ಗಮನ ಸೆಳೆದವು. ಮೆಳ್ಳಳ್ಳಿಯಲ್ಲಿ ಪ್ರಾರಂಭವಾದ ಮೆರವಣಿಗೆ ಕೊನೆಗೆ ಕೆಂ. ಎಂ.ದೊಡ್ಡಿಯ ವಿಶ್ವೇಶ್ವರಯ್ಯ ವೃತ್ತದಲ್ಲಿ ಬಹಿರಂಗ ಸಭೆಯಾಗಿ ಮಾರ್ಪಾಡಾಯಿತು. ಮಾಜಿ ರಾಜ್ಯಸಭಾ ಸದಸ್ಯೆ, ಹಿರಿಯ ನಾಯಕಿ ಬೃಂದಾ ಕಾರಟ್ ಮುಖ್ಯಅತಿಥಿ. ದೇಶ ಸಮಗ್ರವಾಗಿ ಅಭಿವೃದ್ಧಿ ಸಾಧಿಸಲು ಮಹಿಳೆಯರ ಸರ್ವತೋಮುಖ ಅಭಿವೃದ್ಧಿ ಅವಶ್ಯಗತ್ಯ ಎಂದು ಬೃಂದಾ ಕಾರಟ್ ಬಲವಾಗಿ ಪ್ರತಿಪಾದಿಸಿದರು.

ಶೇ. 60 ಕ್ಕೂ ಹೆಚ್ಚು ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಅಪೌಷ್ಟಿಕತೆಯಿಂದ ಹಲವು ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಮಾತೃ ಮರಣ ನಿಯಂತ್ರಿಸಲಾಗುತ್ತಿಲ್ಲ. ಇಡೀ ದಿನ ಮೈ ಮುರಿದು ದುಡಿದರೂ ಜೀವನಕ್ಕೆ ಬೇಕಾಗುವಷ್ಟು ಕೂಲಿ ರಕ್ಷಣೆ ಇಲ್ಲ. ಇಂತಹ



ಪರಿಸ್ಥಿತಿಯಲ್ಲಿ ದೇಶವನ್ನಾಳುವ ಯುಪಿಎ ಸರ್ಕಾರ ಹಾಗೂ ರಾಜ್ಯವನ್ನಾಳುವ ಕಾಂಗ್ರೇಸ್ ಸರ್ಕಾರ ಅಭಿವೃದ್ಧಿ ಕುರಿತು ಮಾತನಾಡುತ್ತಿರುವುದು ಹಾಸ್ಯಾಸ್ಪದ ಎಂದು ಲೇವಡಿ ಮಾಡಿದರು.

ನರೇಂದ್ರ ಮೋದಿ ಒಬ್ಬ ಕೋಮುವಾದವನ್ನು ಹರಡುವ ಅಧುನಿಕ ರಾವಣ. ಆರ್‌ಎಸ್‌ಎಸ್ ಬಜರಂಗದಳ, ವಿಶ್ವ ಹಿಂದೂ ಪರಿಷತ್ ಬಿಜೆಪಿ ಒಂದೊಂದು ತಲೆಯಂತೆ ಕೆಲಸಮಾಡುತ್ತಾ ಫ್ಯಾಸಿಸ್ಟ್ ರೋಗವನ್ನು ಹರಡುತ್ತಿವೆ ಇದರ ಬಗ್ಗೆ ಎಚ್ಚರದಿಂದಿರುವುದು ಅಗತ್ಯ ಎಂದು ಎಚ್ಚರಿಸಿದರು.

ಅತ್ಯಾಚಾರಿ ಡೋಂಗಿಬಾಬಾಗೆ ಬಿಜೆಪಿ ಬೆಂಬಲ ನಾಚಿಗೇಡು – ಸುಧಾ

ಜನವಾದಿಯ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಸುಧಾ ಸುಂದರ್‌ರಾಮನ್‌ರವರು ಮಾತನಾಡಿ ಯುವಕ ಯುವತಿಯರು ತಮ್ಮ ಜೀವನದ ಕುರಿತು ತಮ್ಮದೇ ಸ್ವತಂತ್ರ ನಿರ್ಧಾರವನ್ನು ತೆಗೆದು-ಕೊಂಡ ಕಾರಣಕ್ಕೆ, ಜಾತಿಯ ಬೇಲಿದಾಟಿ ಪ್ರೇಮವಿವಾಹವಾದ ಕಾರಣಕ್ಕೆ 'ಮರ್ಯಾದೆ ಹತ್ಯೆ'ಗಳು ನಡೆಯುತ್ತಿವೆ. ಇವು ಮರ್ಯಾದೆ ಹತ್ಯೆಗಳಲ್ಲ. ನಿಜವಾಗಿ ಅವಮರ್ಯಾದೆ ಹತ್ಯೆಗಳು. ದೇಶದಾದ್ಯಂತ ಅತ್ಯಾಚಾರ ಘಟನೆಗಳು ಹೆಚ್ಚುತ್ತಿದ್ದರೂ ಪೋಲಿಸ್ ಇಲಾಖೆ ಮತ್ತು ನ್ಯಾಯಾಂಗ ವ್ಯವಸ್ಥೆ ಕಟ್ಟುನಿಟ್ಟಿನ ಕ್ರಮತೆಗೆದುಕೊಳ್ಳದೇ ಇರುವುದರಿಂದ ದಾಖಲಾಗುತ್ತಿರುವ ಕೇಸುಗಳಲ್ಲಿ ಬಹುತೇಕ ಅಪರಾಧಿಗಳು ಖುಲಾಸೆ ಆಗುತ್ತಿದ್ದಾರೆ. ಕರ್ನಾಟಕದಲ್ಲಿ ಪ್ರತಿವರ್ಷ 2 ಸಾವಿರ ಪ್ರಕರಣಗಳು ಸೇರಿದಂತೆ ಇಡೀ ದೇಶದಲ್ಲಿ 24 ಸಾವಿರ ಅತ್ಯಾಚಾರ ಪ್ರಕರಣಗಳು ದಾಖಲಾಗುತ್ತಿವೆ. ಅಸಾರಾಂನಂತಹ ಡೋಂಗಿ ಬಾಬಾಗಳು ಧರ್ಮದ ಹೆಸರಿನಲ್ಲಿ ತನ್ನ ಅಪ್ರಾಪ್ತ ಭಕ್ತೆ ಮೇಲೆ ಅತ್ಯಾಚಾರ ಮಾಡಿದ್ದರೂ, ಬಿಜೆಪಿ ಅವರನ್ನು ಬೆಂಬಲಿಸುವ ಮೂಲಕ ತನ್ನ ನಿಜಮುಖ ತೋರಿಸಿದೆ ಎಂದು ಹರಿಹಾಯ್ದರು.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳು ವಾಣಿಜ್ಯೀಕರಣಗೊಳ್ಳುತ್ತಿರುವುದರಿಂದ ಬಡ ಮಹಿಳೆಯರಿಗೆ ರಕ್ಷಣೆಯೇ ಇಲ್ಲವಾಗಿದೆ. ಶೇ. 33ರ ಮೀಸಲಾತಿಗಾಗಿ ಹೋರಾಟ ನಡೆಯುತ್ತಿದ್ದರೂ ಸುಳ್ಳು ಭರವಸೆಗಳನ್ನು ನೀಡುತ್ತಿರುವ ಆಳುವ ಸರ್ಕಾರಗಳ ವಿರುದ್ಧ ದೆಹಲಿಯಲ್ಲಿ ಬೃಹತ್ ರ್‍ಯಾಲಿ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.



ಹುಟ್ಟಿನ ಮೂಲ-ಕೀಳು ಮಟ್ಟದ ಚರ್ಚೆ ಖಂಡನಾರ್ಹ-ದೇವಿ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಮಂಡ್ಯ ಜಿಲ್ಲಾ ಅಧ್ಯಕ್ಷೆ ದೇವಿ ಮಾತನಾಡಿ ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆ ಸರಿಯಾಗಿ ಜಾರಿಯಾಗುತ್ತಿಲ್ಲ. ಬಡಜನರಿಗೆ ಸರಿಯಾಗಿ ರೇಷನ್ ಸಿಗುತ್ತಿಲ್ಲ. ಇತ್ತೀಚಿನ ಲೋಕಸಭಾ ಉಪಚುನಾವಣೆಯಲ್ಲಿ ಜನರ ಬದುಕಿನ ಈ ಸಮಸ್ಯೆಗಳು ಚರ್ಚೆಗೆ ಬರಲಿಲ್ಲ. ಆದ-ರೆ ಮಹಿಳೆಯೊಬ್ಬರ ಹುಟ್ಟಿನ ಮೂಲದ ಕುರಿತು ಅನಗತ್ಯವಾದ ಮತ್ತು ಕೀಳು ಮಟ್ಟದ ಚರ್ಚೆ ನಡೆಯಿತು. ಇದು ಜನವಿರೋಧಿ, ಪ್ರಗತಿ ವಿರೋಧಿ ರಾಜಕಾರಣವನ್ನು ಧೋರಣೆಯನ್ನು ಎತ್ತಿ ತೋರಿಸುತ್ತದೆ ಎಂದರು.



ಗೀತಾ. ವಿ



ಕೆ.ಎಸ್. ಲಕ್ಷ್ಮಿ

ಜೆಎಂಎಸ್ ರಾಜ್ಯ ಅಧ್ಯ-ಕ್ಷೆ ಗೌರಮ್ಮ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ ಮಹಿಳೆಯರು ಸಂಘಟಿತರಾಗಬೇಕು. ನಮ್ಮ ಹಕ್ಕುಗಳಿಗಾಗಿ ಹೋರಾಡಲು ಸಿದ್ಧರಾಗಬೇಕು ಎಂದರು. ರಾಜ್ಯ ಕಾರ್ಯದರ್ಶಿ ಕೆ.ಎಸ್. ಲಕ್ಷ್ಮಿ, ರಾಜ್ಯ ಉಪಾಧ್ಯಕ್ಷೆ ಕೆ.ನೀಲಾ, ಸಿಐಟಿಯು ರಾಜ್ಯ ಕಾರ್ಯದರ್ಶಿ ಹಾಗೂ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ನಾಯಕಿ ಎಸ್. ವರಲಕ್ಷ್ಮಿ, ಸ್ವಾಗತ ಸಮಿತಿ ಅಧ್ಯಕ್ಷರು ಪ್ರೊ. ಬಿಳಿಗೌಡ ಉಪಸ್ಥಿತರಿದ್ದರು. ಜಿಲ್ಲಾ ಮುಖಂಡರಾದ ಸುನೀತಾ ಸ್ವಾಗತಿಸಿದರೆ, ಶೋಭಾ ಕಾರ್ಯಕ್ರಮ ನಿರೂಪಿಸಿದರು ಸಿ.ಕುಮಾರಿ ವಂದಿಸಿದರು.



ಕಾಂ. ಲಕ್ಷ್ಮಿ ಸೆಹಗಲ್ ವೇದಿಕೆಯಲ್ಲಿ ನಡೆದ ಉದ್ಘಾಟನಾ ಸಮಾರಂಭಕ್ಕೂ ಮೊದಲು ಸಂಘಟನೆಯ ಅಧ್ಯಕ್ಷೆ ಗೌರಮ್ಮ ಧ್ವಜಾರೋಹಣ ನೆರವೇರಿಸಿದರು. ಹುತಾತ್ಮ ಸಂಗಾತಿಗಳಿಗೆ ಗೌರವ ವಂದನೆ ಸಲ್ಲಿಸಲಾಯಿತು.

ಐಕ್ಯ ಹೋರಾಟ ಬಲಗೊಳ್ಳಲಿ- ಎಸ್. ವರಲಕ್ಷ್ಮಿ

ಸಿಐಟಿಯು ರಾಜ್ಯ ಕಾರ್ಯದರ್ಶಿ ಎಸ್. ವರಲಕ್ಷ್ಮಿಯವರು ಈ ಸಂದರ್ಭದಲ್ಲಿ ಮಾತನಾಡಿ ಸಮಾಜದಲ್ಲಿ ಮಹಿಳೆಯರ ಅಭಿಪ್ರಾಯಗಳಿಗೆ ಮತ್ತು ದುಡಿಮೆಗೆ ಬೆಲೆ ಇಲ್ಲ. ಅಸಂಘಟಿತ ವಲಯದ ಕಾರ್ಮಿಕರನ್ನು, ಅದರಲ್ಲಿಯೂ ಮಹಿಳೆಯರನ್ನು ಕನಿಷ್ಟ ವೇತನ, ಉದ್ಯೋಗ ಭದ್ರತೆ ಯಾವುದನ್ನು ನೀಡದೆ ಅನ್ಯಾಯಯುತವಾಗಿ ದಂಡಿಸಿಕೊಳ್ಳಲಾಗುತ್ತಿದೆ. ಅಂಗನವಾಡಿ, ಬಿಸಿಯೂಟ, ಆಶಾ ಮುಂತಾದ ನೌಕರರನ್ನು ಆಳುವ ಸರ್ಕಾರಗಳೇ ದುಡಿಸಿಕೊಂಡು ಅವರಿಗೆ ಅನ್ಯಾಯವೆಸಗುತ್ತಿವೆ. 'ಮಹಿಳೆ'ಯರಾಗಿ ಎದುರಿಸುವ ಸಮಸ್ಯೆಗಳ ವಿರುದ್ಧ ಹಾಗೂ ದುಡಿಯುವ ಮಹಿಳೆಯರ ಸಮಸ್ಯೆಗಳ ವಿರುದ್ಧ ಮಹಿಳೆಯರು ಮತ್ತು ದುಡಿಯುವ ಮಹಿಳೆಯರ ಐಕ್ಯ ಹೋರಾಟವನ್ನು ರೂಪಿಸಬೇಕಾಗಿದೆ ಎಂದರು. ಸುಧಾ ಸುಂದರರಾಮನ್ ಅವರು ಸಮ್ಮೇಳನಕ್ಕೆ ಮಾರ್ಗದರ್ಶಕವಾದ ಮಾತನ್ನಾಡಿದರು.

ಚರ್ಚೆ

ಪ್ರಧಾನ ಕಾರ್ಯದರ್ಶಿಗಳು ಮಂಡಿಸಿದ ಕರಡು ವರದಿಯ ಮೇಲೆ ಒಟ್ಟು 43 ಪ್ರತಿನಿಧಿಗಳು ಮಾತನಾಡಿದರು. ಸಮೇಳನದಲ್ಲಿ 14 ಜಿಲ್ಲೆಗಳನ್ನು ಪ್ರತಿನಿಧಿಸಿ 183 ಜನ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಸಮ್ಮೇಳನವು ಒಟ್ಟು 35 ಜನರ ನೂತನ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಿತು. ನಂತರದಲ್ಲಿ ರಾಜ್ಯಸಮಿತಿಯು ಹದಿಮೂರು ಜನರ ಪದಾಧಿಕಾರಿಗಳ ಸಮಿತಿಯನ್ನು ಚುನಾಯಿಸಿಕೊಂಡಿತು.

'ಸ್ಫೂರ್ತಿಯ ಚಿಲುಮೆ'- ಸಾಧಕಿಯರಿಗೆ ಸನ್ಮಾನ

ಕಳೆದ ವರ್ಷ ಗುಲಬರ್ಗಾ, ಯಾದಗಿರ ಮತ್ತು ಬೀದರ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್ ಮಹಿಳಾ ಸದಸ್ಯರು ಸಭೆಯಲ್ಲಿ ತಮ್ಮ ಗಂಡಂದಿರರಿಗೆ ಬರಲು ಅವಕಾಶ ಕೊಡಬೇಕೆಂದು ಒತ್ತಡ ಹೇರಿದ್ದಾಗ ಗುಲ್ಬರ್ಗಾದ ಒಬ್ಬ ಚುನಾಯಿತ ಸದಸ್ಯೆ ಮಾತ್ರ, 'ಜನ ನನ್ನನ್ನು ಆಯ್ಕೆ ಮಾಡಿದ್ದಾರೆ.


ಪುಟ 14 ಕ್ಕೆ

ಶಿವಮೊಗ್ಗ ಅಭಿವೃದ್ಧಿಯಲಿ, ಗಣೇಶ ವಿಸರ್ಜನೆಯಲಿ,

ನೇಪಥ್ಯಕ್ಕೆ ಸರಿದ ಕೂಲಿಯವರ ಮಾಯದ ಗಾಯಗಳು

– ಆರ್. ರಾಮಕೃಷ್ಣ

ಹಳೆಯ ಕಾಲದ ಜನರಿಗೆ ಶಿವಮೊಗ್ಗ ಜಿಲ್ಲೆ ಎಂದರೆ ಬಹುಶಃ ಬಡ ರೈತರು– ಗೇಣೀದಾರರ 'ಭೂಮಿ ಹೋರಾಟ' ನೆನಪಿಗೆ ಬರುತ್ತಿತ್ತು. ಅಂದು ಸೋಷಿಯಲಿಸ್ಟರು, ಕಮ್ಯೂನಿಸ್ಟರು ಈ ಚಳುವಳಿಯ ನೇತೃತ್ವ ವಹಿಸಿದ್ದರು. ಈಗ ಕಳೆದ ಐದಾರು ವರ್ಷಗಳಲ್ಲಿ 'ಶಿವಮೊಗ್ಗ' ಸಾಕಷ್ಟು ಅಭಿವೃದ್ಧಿ ಕಂಡಿದೆ ಎಂಬ ಮಾತು ಚಾಲ್ತಿಗೆ ಬಂದಿದೆ. ಈ ಬಗ್ಗೆ ಒಂದು ಸಾರಿ ನೋಡೇ ಬಿಡೋಣ ಅಂತ ಹೊರಟಾಗ ಶಿವಮೊಗ್ಗ ನಗರದಲ್ಲಿ ಕಂಡಿದ್ದು ಇಲ್ಲಿ ದಾಖಲಾಗಿದೆ!



ಬೆಳಗಿನ ಜಾವ ಐದು ಗಂಟೆಗೆ ಆ ಶಿವಮೊಗ್ಗ ಬಸ್ಸು ನಿಲ್ದಾಣಕ್ಕೆ ಬಂದು ನಿಂತಾಗ ಇನ್ನೂ ಒಂಥರಾ ಮಬ್ಬುಗತ್ತಲು. ಒಹ್, ಹಿಂದೆ ನೋಡಿದ್ದ ಬಸ್‌ಸ್ಟ್ಯಾಂಡ್. ಅದೀಗ ಮೊದಲಿನಂತಿಲ್ಲ. ಹೊಸ ಥಳಥಳಿಸುವ ಹೈಟೆಕ್ ಬಸ್‌ಸ್ಟಾಂಡ್ ಮೈದಳೆದು ನಿಂತಿದೆ. ಮಹಡಿ ಅಂಗಡಿಗಳಿಗೆ ಮೇಲೆ ಹತ್ತಿ ಹೋಗಲು ಯಾಂತ್ರಿಕ ಮೆಟ್ಟಿಲು–ಎಲಿವೇಟರ್ ಕೂಡ ಸಿದ್ದವಾಗುತ್ತಿದೆ.

ಆಹಾ ಇಲ್ಲೇ ಇದೆ ಸಹ್ಯಾದ್ರಿ ರೆಫ್ರೆಶ್‌ಮೆಂಟ್. ರುಚಿಯಾದ ಚಹ. ಅಕ್ಷರಶಹ ಅರ್ಧ ಕಪ್ ಚಹಕ್ಕೆ ಕೇವಲ ಎಂಟು ರೂಪಾಯಿ. ಅಮ್ಮಮ್ಮ!!!

ಒಳ್ಳೆ ಸೀಟಿದೆ. ಸ್ವಲ್ಪ ಹೊತ್ತು ಕೂರಬಹುದು– ಬೀಸುವ ತಂಗಾಳಿಗೆದುರು ಮುಖವಿಟ್ಟು. .. .. ಥೂ ಏನಿದು ಎಂಥದ್ದೋ ವಾಸನೆ. ಹಳೆ ಬಸ್‌ಸ್ಟ್ಯಾಂಡ್‌ನ ತರಾನೆ. ಇಷ್ಟು ಒಳ್ಳೆ.. .. ಹೈಜನಿಕ್ ಶೌಚಾಲಯ ಇದ್ದರೂ ಜನ ಯಾಕೆ ಗೋಡೆ ಬದಿ ಹೋಗಿ ನಿಲ್ಲುತ್ತಾರೋ ಶಿವ !! ಹಾಂ, ಶೌಚಾಲಯದ ಕಡೆ ಹೋಗಿ ಬರುವ. ಒಹ್ ಇದು 'ಬಳಸು–ಪಾವತಿಸು' ಶೌಚಾಲಯ. ಆಯ್ತು. ಯಾಕ್ರಿ ಹಂಗೆ ಟೇಬಲ್ ಬಡಿತೀರಿ ? ಕೋಲು, ನಿಮ್ಮ ಟೇಬಲ್ಲು ಮುರಿದು ಹೋಗಲ್ವ. ಎಷ್ಟು ಬಿಲ್ಲು ? ಬರೀ ನಾಲ್ಕು ರೂಪಾಯಾ. ಹಾಂ. ಇಕೋರಿ.

ಅಭಿವೃದ್ಧಿ–ಸುದ್ದಿ

ನಗರದಲಿ ರೈಲು ನಿಲ್ದಾಣದ ಬಳಿಯಲಿ– ನೂರು ಅಡಿಗಳ ರಸ್ತೆಗೆ ಜಂಟಿ ಸಮೀಕ್ಷೆಗೆ ಸಮಿತಿ ರಚನೆ. –ಕ್ರಿಯಾ ಯೋಜನೆ. ಮರೆತಿರೇಕೆ 'ಚತುಷ್ಪತ ರಸ್ತೆ'ಯ ಪಿತಾಮಹ– ಅಟಲ್‌ಜಿಯನು–ಯಾರದೋ ದಬಾವಣೆ. ಮಾತನಾಡಿದರಂತೆ ಒಂದೆಡೆ ಕೂಡಿ ಯಡಿಯೂರಪ್ಪ ಬಿ.ಎಸ್.–ಈಶ್ವರಪ್ಪ ಕೆ.ಎಸ್. – ನಾಡಿಗೆ ಏನೋ ಶುಭ ಸೂಚನೆ. ಸಾಲು ಸುದ್ದಿ. ಏನೋ ಹೇಳಿಹರು ಮನಮೋಹನ– ಸೋನಿಯಾ– ಮೋದಿ. ಒಟ್ಟು ವಿಷಯ– ದೇಶ, ರಾಜ್ಯ, ಜಿಲ್ಲೆ, ಹಳ್ಳಿಗಳ ಅಭಿವೃದ್ಧಿ.

ಓ ಆಗಲೇ ಬೆಳಕು ಹರಿದಿದೆ. ಶಿವಮೊಗ್ಗವೇನು ಕಡಿಮೆ ? ಅದರ ಮುಖವೇ ಬದಲಾಗಿ ಹೋಗಿದೆ.

ಅಗೋ .. ಬಿ.ಎಂ. ರಸ್ತೆ. ಅಲ್ಲಿ ನೆಹರೂ ರಸ್ತೆ, ಕಿರಿದಾಗಿದ್ದ ಮುಖ್ಯ ರಸ್ತೆಗಳು ಊರಗಲ ಆಗಿವೆ. ಒಹೋ, ಅಲ್ಲಿ ಹೊಸ ಮಾರುಕಟ್ಟೆ. ನಾನಾ ಕಟ್ಟಡಗಳು ತಲೆ ಎತ್ತಿ ಬೀಗಿವೆ. ಕೆಲವಕ್ಕೆ ಸುಣ್ಣ ಬಣ್ಣವಷ್ಟೆ ಬಾಕಿ, ಅವೂ ಇನ್ನೇನು ಮುಗಿದೇ ಹೋಗಿವೆ. ವಾವ್, 'ರಾಯಲ್ ಆರ್ಕೆಡ್'–ಶಿವಮೊಗ್ಗದ ಶ್ವೇತ ಭವನ. ಸುವರ್ಣ ಸೌಧ–ಸರ್ಕೀಟ್ ಹೌಸ್, ಸಿಂಥೆಟಿಕ್ ಟ್ರ್ಯಾಕ್– ಸ್ಟೇಡಿಯಂ ಓಪನ್ ಮತ್ತು ಇನ್ ಡೋರು. ಆ ಕಡೆ ದೂರ ನಳನಳಿಸುವುದು ಹೂಗಳು ಅರಳಿ 'ಗಾಂಧಿ ವನ'.

ದೊಡ್ ರೋಡು, ರೋಡ್ ತುಂಬಾ ಮೆರವಣಿಗೆ

"ಇವರೇ, ಒಂದು ಬಾಳೆ ಹಣ್ಣು ಕೊಡಿ. ಎಷ್ಟು ಇದಕ್ಕೆ? ನಾಲ್ಕು ರೂಪಾಯ್‌ನಾ –ತಗೊಳ್ಳಿ. .. ಆ ಕಡೆ ಎಲ್ಲ ರೋಡಲ್ಲಿ ಉದ್ದುಕ್ಕೂ ಯಾಕೆ ಹೋಟ್ಲು, ಅಂಗಡಿ ಎಲ್ಲಾ ಮುಚ್ಚಿದಾವಲ್ಲ.? ಏನಾದರೂ ಗಲಾಟೆ ಆಗಿದೆಯಾ ಶಿವಮೊಗ್ಗದಲ್ಲಿ?

"ಹಿಂದೂ ಮಹಾಸಭಾ ಗಣಪತಿ ವಿಸರ್ಜನೆ ಅಲ್ವಾ ಇವತ್ತು. ಮೆರವಣಿಗೆ ಬರುತ್ತೆ. .. ಗಲಾಟೆ ಇವಾಗೇನಿಲ್ಲ. ಅದೆಲ್ಲಾ ಹಿಂದೆ ಬಾಳ ಇತ್ತು. ಎಲ್ಲ ಅಡಗಿಸಿ ಬಿಟ್ಟಿದ್ದಾರೆ ಇವಾಗ. ಸರಿಯಾಗಿ ಮೆರವಣಿಗೇನೂ ಮಾಡೋಕ್ ಬಿಡ್ತಾ ಇರಲಿಲ್ಲ.. ಮೇಲ್ ನಿಂತೆ–ಕ್ಕಂಡ್ ಕಲ್ ಹೊಡೆಯೋದು. ..ದು ಬಿಟ್ಟು ಒಡೋಗೊದು. ಏನ್ ಒಂಥರಾನಾ. ರೋಡ್‌ಗಳು ಬೇರೆ ತುಂಬಾ ಚಿಕ್ಕವಿದ್ದು ನೋಡಿ. ಹಂಗೆ ಇರ್‌ಕಿಸ್ ಬಿಡ್ತಾ ಇದ್ರು. ಏನಿತ್ತು ಸಾರ್ ಮೊದ್ಲು ಶಿವಮೊಗ್ಗದಲ್ಲಿ. ಆ ಕಾ..ಸ್‌ನೋರಿದ್ದಾಗ. ಎಲ್ಲ ಬರೀ ಅವರ್ ತಿನ್ನೋದಷ್ಟೆ. ಯಾವಾಗ ಈಶ್ವರಪ್ಪ, ಯಡಿಯೂರಪ್ಪ ಬಂದ್ರೋ ಎಲ್ಲ ಚೇಂಜ್ ಅಗೋಯ್ತು ನೋಡಿ. ಎಲ್ಲೆಲ್ಲಿ ಮಟ್ಟ ಹಾಕ್ಬೇಕೋ ಹಾಕಿದರು. ಆ ಕತೆ ಏನ್ ಹೇಳೋದ್ ಬಿಡಿ. ಇವರ್ ಬಂದ್ ಮೇಲೂ ತುಂಬಾನೇ ತಕರಾರು ಮಾಡಿದ್ರಂತೆ. ಈ ರೋಡಲ್ಲಿ ಮೆರವಣಿಗೆ ಬರಬಾರದು. ಆ ರೋಡಲ್ಲಿ ಬರಬಾರದ್ದು. ಮಸೀದಿ ಮುಂದೆ ಬ್ಯಾಂಡ್ ಬಾರಿಸ್ಬಾರ್ದು .. ಅದು ಇದು ಅಂತ. ಇವರನ್ನ ಕೇಳ್‌ಬೇಕಾ. ಎಲ್ಲ ಸೇರ್‌ಕೊಂಡು ಸರಿಯಾಗಿ ಗದುಮಿದಾರೆ. ಈಗ ದೊಡ್ಡ ರೋಡು–ರೋಡ್ ಫುಲ್ ಮೆರವಣಿಗೆ. ನೋಡಿ ಬೇಕಾದ್ರೆ ಎಷ್ಟು ಜನ ಸೇರ್ತಾರೆ. ಇಡೀ ಸ್ಟೇಟಲ್ಲೇ ಎಲ್ಲೂ ಈ ಥರ ನಡೆಯಲ್ಲ. ಉಸ್ರೆತ್ತಂಗಿಲ್ಲ ಯಾರು .. ಉ. ಮತ್ತೆ ಈಗ.. ಎಲ್ಲ ಅಡಗೋಗ್ ಬಿಟ್ಟವ್ರೆ. ಯಾರು ಬಾಲ ಬಿಚ್ಚಲ್ಲ."

ಮೆರವಣಿಗೆ ಇಲ್ಲಿಗೆ ಬರೋದಕ್ಕೆ ಎಷ್ಟೋತ್ತಾಗುತ್ತೆ? ಸಾಯಂಕಾಲ ಏಳ್‌ಗಂಟೆ ಏಳೂವರೆ ಆಗಬಹುದು. ಈ ಕಡೆ ಹೋಗುತ್ತಾ.? ಇಲ್ಲಿ, ಸ್ವಲ್ಪ ಮುಂದೆ ಹೋದ್ರೆ 'ಶಿವಮೂರ್ತಿ' ಸರ್ಕಲ್. ಅಲ್ಲಿಂದ ಬಲಕ್ಕೆ ತಿರುಗ್‌ಕೊಂಡ್ ಮುಂದೆ ಹೋಗಿ ಆಮೇಲೆ ನದಿಲಿ ಬಿಡೋದು. ಅದೆಲ್ಲಾ ರಾತ್ರಿ ಲೇಟ್ ಆಗುತ್ತೆ ಸಾರ್.

ಓ.ಕೆ. ಥ್ಯಾಂಕ್ಯು ಸಾರ್.

* * * * *

– ಅಯ್ಯಪ್ಪ ದೇವಸ್ಥಾನದಿಂದ ಬಂದ್ರೆ



ಸರ್ಕಲ್‌ಗೆ, ಎದರ್‌ಗೆ ಕಾಣತ್ತೆ ಬೆಕ್ಕಿನ ಬಲ್ಮಠ. ಅಲ್ಲೇ ಅದರ ಪಕ್ಕದ ದಾರಿ. –ಆಯ್ತು. ಓಕೆ ಥ್ಯಾಂಕ್ಯು. –ಗಾಂಧಿ ಬಜಾರ್ ಅಂದ್ರೆ ಎಲ್ಲಿ ಈ ಕಡೆನಾ ಸಾರ್.

–ಅಯ್ಯೋ !! ಇವತ್ತು ಅಲ್ ಯಾ–ಕೆ ಹೋಗ್ತೀರಾ ಸಾರ್. ಅಲ್ ಹೋಗ್ಲೇ ಬೇಡಿ. ನೀವು, ಈ ದಾರಿಯಿಂದ ಹೋಗ್ ಬಿಡಿ. –ಯಾಕೆ ? – ಗಣೇಶ ಮೆರವಣಿಗೆ ಇದೆಯಲ್ಲಾ ಅಲ್ಲಿ. –ನಾನು ಅದನ್ನ ನೋಡೋದಕ್ಕೇ ಹೋಗ್ತಾ ಇರೋದು.– ಹೌದಾ, ಹಂಗಾದ್ರೆ ಸರಿ. ಸೀದಾ ಹೋಗಿ ಈಗ ಸ್ವಲ್ಪ ಹೊತ್ತಾಗಿದೆ. ಹೊರಟು.

* * * * *

ಮೆರವಣಿಗೆ

ಭೀಮೇಶ್ವರ ದೇವಾಲಯ ಬಿಟ್ಟು ಹೊರಟಿದೆ ರಾಜಬೀದಿಯಲಿ, ಹಿಂದು ಹಿಂದು ಯುವಜನರ ರಣಭೇರಿ ಅಲ್ಲಿ. ಮಂತ್ರ 'ಹಿಂದೂ ಎಂದೂ ಒಂದು'. ಬಾವುಟ ಎಲ್ಲೆಲ್ಲೂ ಕೇಸರಿ. ಅಲ್ಲಲ್ಲಿ ಸ್ವಾಗತ ಕಮಾನು ಫಲಕ. ಹಣೆಗೆ ಕೇಸರಿ ತಿಲಕ. ಡೊಳ್ಳು, ತಮಟೆ– ಡಮ್ಮ ಡಕ್ಕ. ರಣಕೇಕೆ ಜೋರು ನಗಾರಿ. ಪೂಜೆ–ಸಲ್ಲಿಸುವರು ಹೂಹಾರ. ನಗುವ ಗಣಪ. ಮೇಲೊಂದು ಚಿತ್ರ. 'ವೀರ ಸಾವರ್‌ಕರ'. ಭಕ್ತಿ– ಅಗರಬತ್ತಿಯ ಧೂಮ. ಉರಿಯುತಿದೆ ರಾಜಕೀಯ ಕರ್ಪೂರ, ಹೋಮ. ಲಡ್ಡು–ಸಿಹಿ ಪ್ರಸಾದ ವಿತ[illegible] ಅವರ ಹುಲಿವೇಷ ಧಾರಣೆ. ರಂಗೋಲಿ ಸಿಂಗಾರ ಮನೆ ಮನೆ. ಹೂ ಹಣ್ಣು ಹಿಡಿದು ನಿಂತ ಮಕ್ಕಳು ಮಹಿಳೆಯರು. ಸಭ್ಯರು ಸದ್‌ಗೃಹಸ್ಥರು ಕೂಡ ಸಾವಿರಾರು.

ಸೂಕ್ತ ಬಂದೋಬಸ್ತ್

ನಡುಹಗಲಿಗೆ ಕೈಗೆ ಬಂದಿರುವ 'ಸಂಜೆ'ವಾಣಿಯ ಅಭಯ. ಹೆದರದಿರಿ (ಯಾರು ?) ಸೂಕ್ತ ಬಂದೋಬಸ್ತ್ ಮಾಡಲಾಗಿದೆ.

ಸಿಸಿ ಕ್ಯಾಮರಾ ನೂರು. ಓರ್ವ ಎಸ್.ಪಿ. ಡೋಂಟ್‌ವರಿ ಇರುವರು ಮತ್ತೋರ್ವ ಹೆಚ್ಚುವರಿ. ಎಂಟು ಡಿಎಸ್ಪಿ, 19 ಸಿಪಿಐ, 55 ಪಿಎಸ್‌ಐ, 330 ಹೆಚ್.ಸಿ, 761 ಪಿಸಿ, 500 ಗೃಹ ರಕ್ಷಕರು. ಮಾಸ್ತಿಕಟ್ಟೆಯ ಎಎನ್‌ಎಫ್ ಸಿಬ್ಬಂದಿಗಳು. ಸಾಕಷ್ಟು ಪಟ್ಟಿಯಲಿ ಇನ್ನೂ ಇಹರು. ಫೈರ್ ಎಂಜೀನು. ಬಂದೂಕು, ರೈಫಲ್ ಸರ್ಪ[illegible] ಕಾವಲು.

ಹೋ, ಹೋ. ನಡೆ ಮು[illegible] ಮುಂದೆ ನುಗ್ಗಿ ನಡೆ ಮುಂದೆ. ಬಂತು ದೊಡ್ಡ ಸರ್ಕಲ್ಲು. ಪುಷ್ಪಾಲಂಕಾರ ಸರಿ, ಬೇಡವೆನ್ನುವರೇ ಕೆಳದಿ 'ಶಿವಪ್ಪ ನಾಯಕ'. ತಲೆಗೆ ಕೇಸರಿ ರುಮಾಲು. ಆಮೇಲೆ, ಅಲ್ಲಿ ತಾಸು ಬ್ರೇಕು. ಆಮೇಲೆ 'ಅಮೀರ್ ಅಹ್ಮದ್' ಸರ್ಕಲ್. ಅಲ್ಲಿ ಹ[illegible] ಜಗ್ಗಿ ನಿಲ್ಲಲೇ ಬೇಕು.

ಅಮೆ ನಡಿಗೆ. ಅಗಲೇಳು ಕತ್ತಲು. ಅದೆ ಸರಿ ಬಾಣ–ಬಿರುಸು, ರಾಕೆಟ್ಟು–ಪಟಾಕಿ ಕಿಡಿ ಹಚ್ಚಲು. ವಿಎಚ್‌ಪಿ– ಭಜರಂಗ ದಳ– 'ನಮೋ ಬ್ರಿಗೇಡ್' ಗಳೆಯ 'ಸಂಘ'. ಟೀ ಶರ್ಟ್ ಸಾರುವುದು 'ಒನ್ ನೇಷನ್, ಒನ್ ಲೀಡರ್. ದಟ್ ಇಸ್ ನರೇಂದ್ರ ಮೋದಿ.'– (ಒದೆ ಗಿ[illegible] ಬಿದ್ದೀತು ಸರಿಯಾಗಿ ಓದಿ.)

* * * * *

–ಸಾರ್, ಈ ಗಣೇಶನ್ನ ಬಿಡೋದು ಎಷ್ಟೊತ್ತಾಗಬಹುದು.?

–ಮಧ್ಯ ರಾತ್ರಿ, ಹನ್ನೆರಡು ದಾಟು



ಸರ್.

–ಸೂರ್ಯ ಮುಳುಗೋದರೊಳಗೆ ಗಣೇಶನ್ನ ಬಿಡಬೇಕು ಅಂತೇನೋ ಹೇಳ್ತಿದ್ರಲ್ಲಾ. ?

–ಹೇಳ್ತಾರೆ. ಬರ್ಬೇಕಲ್ಲ ಸಾರ್, ಎಲ್ಲ ಕಡೆ ನಿಂತು ನಿಂತು.(ಹೆಚ್ಚು ಕಡಿಮೆ ಮೂರು ನಾಲಕ್ ಕಿಲೋ ಮೀಟರು.)

* * * * *

ಪತ್ರಿಕೆ–'ಪ್ರಜಾವಾಣಿ'. ಪುಟ 3ಬಿ..ರ ಪ್ರಕಾರ ಭದ್ರಾವತಿಯಲಿ ನಿನ್ನೆ 'ಧರೆಗಿಳಿಯಿತು ಗಂಧರ್ವ ಲೋಕ'. ಹೌದಂತೆ ಅಲ್ಲೂನೂ ಭರ್ಜರಿ 'ನಮೋ ಮೋದಿ' ಖದರು.

ರಿಬ್ಬನ್ ಪೇಟೆಯಲಿ 'ಭಾವೈಕ್ಯತೆಯ ಸಂಗಮ'. 'ಜಮ್ಮಾ ಮಸೀದಿ–ಮಕ್ಕಾ ಮಸೀದಿ' ಬಾಂಧವರು ಬಂದು ಹೂಹಾರ ಅರ್ಪಿಸಿದರು.

ಶಿಕಾರಿಪುರದಲ್ಲಿ 'ಓಂ ಗಣಪತಿ'ಯ ವಿಸರ್ಜನೆ. ಮೆರವಣಿಗೆಯಲಿ ಭವ್ಯ ಚಿತ್ರ ಅಣ್ಣ. ಅಯೋಧ್ಯಾ ಮಂದಿರ–ಎದೆ ಎತ್ತರಿಸಿ ನಿಂತ ರಾಮ ಬಿಡುವನು ಶತ್ರುವಿಗೆ ಬಾಣ. ಕಂಡಿರ, ನೀವು ಕಂಡಿರ ?

ತಾಜ್ ಮಹಲ್ ಕಟ್ಟಿದವರು ಯಾರು ? ಕಾರ್ಮಿಕರು, ಶ್ರಮಿಕರು, ಕೂಲಿ ಗುಲಾಮರು. ಕಟ್ಟುವುದಾದರೆ 'ರಾಮಮಂದಿರವ ಅಲ್ಲೇ'. ಕಲ್ಲು, ಮಣ್ಣು, ಇಟ್ಟಿಗೆ ಹೊರುವವರು ಯಾರು ? ಕಟ್ಟಡ ಕಾರ್ಮಿಕರು.

ಬನ್ನಿ. ಶಿವಮೊಗ್ಗದ ಈ ಭವ್ಯ ಕಟ್ಟಡ–ಮಹಲುಗಳ ಕಟ್ಟಿದ ನಮ್ಮ ಕೂಲಿ ಕಾರ್ಮಿಕರನ್ನು ಕೊಂಚ ಮಾತನಾಡಿಸೋಣ. ಆಕಸ್ಮಿಕವಾಗಿ ಸಿಕ್ಕರೇನಂತೆ ಕುಂತು ಮಾತನಾಡಲು.

* * * * *



'ನಮ್ಮ ಗುಂಡಿ–ಗೆ ತುಂಬಾ ಗಾಯಗಳು.. ..'

ಗುಂಡಪ್ಪ ಶೆಡ್ ಕಡೆಯಿಂದ ಅಯ್ಯಪ್ಪದೇವಸ್ಥಾನ ದಾಟಿದರೆ ಮುಖ್ಯರಸ್ತೆಯಲಿ ಅದೇ, ಬೆಕ್ಕಿನ ಬಲ್ಮಠದ ಪಕ್ಕ ಬಸ್ ನಿಲ್ಲುವ ಜಾಗ. ಕಟ್ಟಡದ ಮುಂದಲ ಮೆಟ್ಟಿಲ ಸಾಲುಗಳ ಮೇಲೆ ಕುಳಿತಿದ್ದಾರೆ. ನಿಂತಿದ್ದಾರೆ. ಚುಮುಚುಮು ಬಿಸಿಲು ಈಗ. 9.30 ರ ಹೊತ್ತು. ಗುಲ್ಬರ್ಗಾದ ಕಡೆಯುವರ ಹಾಗೇ ಕಾಣುತ್ತಾರಲ್ಲ. ಯಾವ ಊರಿನವರೋ ಕೇಳಿಯೇ ಬಿಡೋಣ ಪಕ್ಕ ಕುಂತು.

* * * * *

ನಿಮ್ಮ ಹೆಸರು. ರಾಜು, ಗೋವಿಂದರಾಜು. –ಏನು ಬಸ್ ಕಾಯುತ್ತಿದ್ದೀರ? ಇಲ್ಲ ಕೆಲಸಕ್ಕೆ ಕಾಯುತ್ತಿದ್ದೀವಿ. –ಏನು ಕೆಲಸಕ್ಕೆ? ಗಾರೆ ಕೆಲಸ, ಲಾರಿ ಕೆಲಸ ಹಿಂಗೆ. –ಎಲ್ಲಿ ಕೆಲಸ? –ಎಲ್ಲಾದರೂ ಸರಿ. ಇಲ್ಲಿ ಕಾಯ್ತಾ ಇರ್ತೀವಿ. ಜನ ಬೇಕಾದವರು ಬಂದು ಕರ–ಕೊಂಡೋಗ್ತಾರೆ. –ಕೂಲಿ ದಿನಕ್ಕೆ ಎಷ್ಟು ಸಿಗತ್ತೆ? –ಗಾರೆ ಕೆಲಸ ಸಿಕ್ಕರೆ 200–250 ದಿನಕ್ಕೆ. ಲಾರಿ ಕೆಲಸ ಸಿಕ್ಕರೆ ಸ್ವಲ್ಪ ಜಾಸ್ತಿ. –ಎಷ್ಟು ಗಂಟೆ ಕೆಲಸ? ಬೆಳಿಗ್ಗೆ 8 ರಿಂದ ಸಾಯಂಕಾಲ 7.30 ರವರೆಗೆ ಕೆಲಸ. ಊಟ ಕಾಫಿ, ಟೀ ಕೊಡ್ತಾರೆ. ಇವತ್ತು ಬೆಳಿಗ್ಗೆ 8.00 ಗಂಟೆಗೆ ಬಂದೆ. ಈಗ ನೋಡಿ 10 ಗಂಟೆ ಆಯ್ತು. ಇಲ್ಲಿವರ್‍ಗ್ಗೂ ಯಾರೂ ಕರ್‌ದಿಲ್ಲ. ಕೆಲವು 6 ಗಂಟೆಗೆ ಬಂದಿದಾರೆ. ಇಲ್ಲೇ ಅವ್ರೆ ನೋಡ್ರಿ, ಇದೆಲ್ಲಾ ಯಾಕ್ ಸಾರ್?

ಪೇಪರಲ್ಲಿ ಬರೆಯಕ್ಕೆ. ಶಿವಮೊಗ್ಗದಲ್ಲಿ ಕಟ್ಟಡ ಕಟ್ಟೋರು, ಕೂಲಿಕಾರರ ಕಷ್ಟ ಏನು ಅಂತ. ನೀವು ಪೇಪರ್‌ನೋರಾ? ಹಂಗರೆ, ಇವರ್‍ನ ಸ್ವಲ್ಪ ಮಾತಾಡ್ಸಿ ಸರ್.

ಎದೆ ನೋವು, ಪಕ್ಕೆ ನೋವು ಸಾರ್.

–ನಿಮ್ಮ ಹೆಸರು. –ದ್ಯಾಮಪ್ಪ. –ಊರು? ಬಿಳಿಚವಾಡು, ಶಿವಮೊಗ್ಗ ತಾಲ್ಲೂಕು. –ವಯಸ್ಸು. 35. –ಜಮೀನಿಲ್ವ? –5 ಎಕ–ರೆ ಹೊಲ ಐತೆ. ಅಣ್ಣ ತಮ್ಮಂದಿರು ಭಾಗ ಆಗಿಲ್ಲ. ಏನ್ ಕೆಲ್ಸ ಮಾಡ್ತಿರಾ? ಗಾರೆ ಕೆಲಸ ಮಾಡ್ತೀನಿ. ಹೆಲ್ಪರ್ ನಾನು. ದಿನಕ್ಕೆ 300–350 ಕೊಡ್ತರೆ. ಇವತ್ತು ಕೂಲಿ ಸಿಕ್ಕರೆ ನಾಳೆ ಇಲ್ಲ. ನಾಳೆ ಸಿಕ್ಕರೆ ನಾಳಿದ್ದು ಇಲ್ಲ. – ನಿಮ್ಮ ಊರಲ್ಲಿ ಉದ್ಯೋಗ ಖಾತ್ರಿ ಯೋಜನೆ ಕೆಲಸ ಸಿಗಲ್ವಾ? –ಹೆಣ್ಣು ಮಕ್ಕಳಿಗೆ 80–90 ರೂಪಾಯಿ ಕೂಲಿ. ಗಂಡಸರಿಗೆ 100–150 ಕೂಲಿ ಕೊಡ್ತಾರೆ. ಅದೂನೂ ಬೇಗ ಕೊಡಲ್ಲ. ಕೆಲಸ ಎಲ್ಲರ್‍ಗೂ ಕೊಡಲ್ಲ. ಚೇರ್ಮನ್ ಇದಾನಲ್ಲ, ಅವನ್ಗೆ ಯಾರಿಗೆ ಬೇಕೋ ಅವರಿಗೆ ಕೊಡ್ತನೆ. ಅವರ್ ಜಮೀನಲ್ಲಿ ಕೆಲಸ. (ಏಯ್, ಜಮೀನಲ್ ಎಲ್ ಕೆಲ್ಸ ಮಾಡಸ್ತರೋ ಅದರಲ್ಲಿ. –ಏ ಇಲ್ಲ, ಮಾಡಸ್ತರೆ ಇರೋ. ನಂಗೊತ್ತು.)

ಇಲ್ಲಿ ಕೆಲಸ ಸಿಗದೆ ಇದ್ದರೆ ..?

–ಏನ್ಮಾಡದು ಸಾರ್, ಬಸ್ ಸ್ಟಾಂಡಲ್ಲಿ ಮಕ್ಕಣದು. ಅಲ್ಲಿ ಇಲ್ಲಿ ಮಕ್ಕಣದು. ಪೋಲಿಸ್‌ನವರು ಓಡಿಸಲ್ವಾ? ಒಡ್ಸಕ್ಕೆ ಬರ್ತರೆ ಸರ್. ಅಂಗ್ ಸಾರ್ ಇಂಗ್ ಸಾರ್ ಅನ್ನದು. ಇಲ್ಲ ಎಲ್ಲಾದ್ರು ಲಾಡ್ಜಲ್ಲಿ ಹೋಗಿ ಮಕ್ಕಣದು.

ನನಗೇ ಎದೆ ನೋವು, ಪಕ್ಕೆ ನೋವು ಐತೆ ಸಾರ್. –ಯಾಕೆ? –ಒಂದ್ ಸಾರಿ ಸ್ವಲ್ಪ ಏಟು ಬಿದ್ದಿತ್ತು ಕೆಲಸ ಮಾಡೋವಾಗ. –ನೀವು ನೋವು ಬರುತ್ತೆ ಅಂತ ನಿಮ್ಮ ಮೇಸ್ತ್ರಿ, ಕಂಟ್ರಾಕ್ಟರ್ ಹತ್ರ ಏನೂ ಹೇಳಿಲ್ವಾ? –ಇಲ್ಲ ಸಾರ್. ಮತ್ತೆ, ಕೆಲಸ ಮಾಡಿ ಮಾಡಿ ನೋವು. ಅದನ್ನೇನು ಹೇಳದು ಸಾರ್. ಏನ್ಮಾಡ್ತರೆ ಸರ್, ಅವರು. ಮಾಡಿದ್ದೇ ಕೊಡದು ಕಷ್ಟ ಆಗ್ಯತೆ.

ಸಾರ್ ಅವನನ್ ಮಾತಾಡ್ಸಿ. ಏಯ್ ಈ ಕಡೆ ಬಾರೋ. ಇಲ್ ಕೂತ್ಕೋ.

'ಕೀವ್‌ಗೆ ಆಗ್ ಬಿಟ್ಟೈತೆ.'

(ಕ್ಷಮಿಸಿ ಕೋಮಲ್)

–ಹೆಸರು? –ರಮೇಶ್. ಕಾಲಲ್ಲಿ ಒಂದು ಗಾಯ ಐತೆ ಸಾರ್. ಎಲ್ಲಿ ತೋರಿಸಿ. ಅಯ್ಯೋ –ಏನ್ರಿ ಇದು. ಇಷ್ಟು ದೊಡ್ಡ ಗಾಯ. ಸುಮ್ಮನೆ ಬಿಟ್ಟಿದ್ದೀರಲ್ರಿ, 'ಕೀವು ಬೇರೆ ಆಗ್ ಬಿಟ್ಟೈತೆ'. ಹಿಂಗೇ ಬಿಟ್ಟರೆ ಕಾಲು ಕಳಕೋಬೇಕಾಗುತ್ತೆ. ಕಾಲ್ ಕತ್ತರಿಸ್ತರೆ ಆಮೇಲೆ. ಅಯ್ಯೋ ರಾಮ ರಾಮ. ಮೊದಲು ಹೋಗಿ ಆಸ್ಪತ್ರೆಗೆ ತೋರಿಸ್ರೀ.

–ಎಲ್ಲಿ ಇದಾಗಿದ್ದು? –ಎನ್ನಾಪುರ ಕೊಪ್ಪ ಅಂತ ಸಾರ್. ಶಿವಮೊಗ್ಗನೇ. ಮನೆ ಬಿಲ್ಡಿಂಗ್ ಸಾರ್. ದೊಡ್ಡದು. ಲಿಫ್ಟ್‌ಗೆ ರಾಡ್ ಫಿಟ್ ಮಾಡ್ತೀವಲ್ಲಾ. ನೈಟೆಲ್ಲಾ ಕೆಲಸ ಮಾಡ್ತೀವಿ. ಕತ್ಲೆ ಇರುತ್ತಲ್ಲಾ ಸಾರ್. ರಾಡ್ ಚುಚ್ ಕೊಂಡ್ ಅಂಗಾಗ್ಯತೆ. –ನಿಮ್ಮ ಕಾಂಟ್ರಾಕ್ಟರು, ಮೇಸ್ತ್ರಿ ಯಾರು ಆಸ್ಪತ್ರೆಗೆ ಕರ್‍ಕೊಂಡ್ ಹೋಗ್‌ಲಿಲ್ವಾ? –ಮೇಸ್ತ್ರಿ ಒಳ್ಳೇವು ಸಾರ್.. ಕರ್‍ಕೊಂಡೋಗಿ ಇಂಜಕ್ಷನ್ ಹಾಕ್‌ಸುದ್ರು. –ದುಡ್ಡು ಕಾಸು ಏನು ಕೊಡಲಿಲ್ಲವೇನ್ರಿ? –ಇಲ್ಲ ಸಾರ್. ಒಂದು ವಾರ ಮನೇಲಿರು ಅಂದರು. ಮಕ್ಕಳು ಮರಿ. ಹೊಟ್ಟೆ ಬಟ್ಟೆ ನಡೀಬೇಕಲ್ಲ ಸಾರ್. ನಾನೇ ಇಲ್ಲಿಲ್ಲ. –ಅಲ್ರೀ ಇಷ್ಟು ಏಟಾಗಿದೆ ನೀವು –.. ಅಯ್ಯೋ ಅಷ್ಟೇ ಅಲ್ಲ ಸಾರ್. ಇನ್ನು ಏಟಾಗ್ಯತೆ. ಬೆನ್ನು ನೋಡ್ರಿ, –ಅಯ್ಯಯ್ಯೋ !! ಇದು ಯಾವಾಗ ಆಗಿದ್ದು. –ಅವಾಗ್ಲೇ ಸಾರ್. ರಾಡ್ ಗೀರಿರದು. ಬೆನ್ನಲ್ಲಿ ಎರಡೂ ಕಡೆ. ನೀವು ಸರಿಯಾಗಿ ಕೇಳ್ ಬೇಕ್ರಿ, ಕೆಲಸ ಮಾಡ್‌ಸ್ಕೊಳ್ಳಲ್ಲವಾ? –ಎಲ್ಲ ಒಳ್ಳೆವ್ರೇ ಸಾರ್. ನಾವ್ ಹಣೆ ಬರ ಅಂಗಿದ್ರೆ ಅವರ್ ಏನ್ ಮಾಡ್ತರೆ ಸಾರ್ !!!







* * * * *

ಹೆಸರು ದತ್ತಿ. ಹೊಸನಗರ. ನಾವು ಒಟ್ಟು ನಾಲ್ಕು ಜನ ಮಕ್ಕಳು. 3 ಹೆಣ್ಣು 1 ಗಂಡು. ಒಂದೂವರೆ ಎಕರೆ ಜಮೀನೈತೆ. ಒಂದು ಹೆಣ್ಣು ಮಗು. ಚಾಂದನಿ ಅಂತ. ಹೆಂಡತಿ ಇಲ್ಲ. (ಇಲ್ಲ ಅಂದರೆ?) ಗಂಡನ್ನ ಬಿಟ್ಟಿದ್ದಾಳೆ. ಗಾರೆ–ಹೆಲ್ಪರ್. ತಿಂಗಳಿಗೆ 15 ದಿನ ಸಿಗಬಹುದು. ಕೆಲಸ ಸಿಗದೇ ಹೋದರೆ ರೂಮ್‌ಗೆ ವಾಪಸ್ ಹೋಗ್ತೀವಿ. (ಓ, ರೂಂ ಮಾಡಿದ್ದೀರಾ?) ದಿನಾ ಮನೆಗೆ ಹೋಗಕ್ಕಾಗಲ್ಲ. ಊರಿಗೆ ಒಂದು ಕಡೆ ಬಸ್ ಚಾರ್ಜು 75 ರೂಪಾಯಿ. ಅದಕ್ಕೆ ನಾಲ್ಕೈದು ಜನ ಸೇರ್‌ಕೊಂಡು ಶಿವಮೊಗ್ಗದಲ್ಲಿ ರೂಂ ಮಾಡ್ಕೋಂದೀವಿ.

* * * * *

ಹೆಸರು ಫೈರೋಜ್ ಅಂತ. ಸೂಳೆಬಾವಿ, ಶಿವಮೊಗ್ಗ. ಮೂರು ಮಕ್ಕಳು. ಮನೆ ಜಮೀನು ಏನೂ ಇಲ್ಲ. ಕೂಲಿ ಮಾಡದು...



ಒಂದ್ಕಡೆ ಚರಂಡಿಲಿ ಮರಳು ತಗಿ ಅಂದ್ರು, ತಗ್‌ದೆ. ಮೈಕೆಯೆಲ್ಲ ಗುಳ್ಳೆ ಆಗಿ ಕೆಲಸದಿಂದ ವಾಪಸ್ ಕಳ್ಸಿಬಿಟ್ರು ಸಾರ್.

–ಈಗ ಶಿವಮೊಗ್ಗ ತುಂಬಾ ಇಂಪ್ರೂವ್ ಆಗಿದೆ ಅಲ್ವಾ?

–ಅಯ್ಯೋ ಸಿಟಿ ಮಾತ್ರ ಇಂಪ್ರೂವ್ ಆಗಿದೆ ಸಾರ್. ಜನ ಎಲ್ ಇಂಪ್ರೂವ್ ಆಗಿದಾರೆ ಸಾರ್.? ಮನೆ ಬಾಡಿಗೆ 300–400 ಇದ್ದಿದ್ದು, ಈಗ 2,000 ಆಗಿದೆ. ಅಡ್ವಾನ್ಸ್ 20–30 ಸಾವಿರ ಅಂತರೆ.

* * * * * *

ರಾಜು ಅವರೇ ಯಾರನ್ನಾದರೂ ಹೆಂಗಸರನ್ನೂ ಮಾತಾಡಿಸಬೇಕು ರಿ.. ಬರೀ ಗಂಡಸರನ್ನ ಮಾತ್ರ ಮಾತಾಡಿಸಿದರೆ ಸರಿಯಾಗಲ್ಲ. –ಹೌದು ಸಾರ್, ಅಮ್ಮ ಇಲ್ಲಿ ಬಾರಮ್ಮ.

–ನಿಮ್ಮ ಹೆಸರು. –ಗೌರಮ್ಮ. ಊರು ಹರಿಗೆ ಅಂತ, ಇಲ್ಲಿಂದ 5 ರೂಪಾಯಿ ಚಾರ್ಜು. ಗಾರೆ ಹೆಲ್ಪರ್ ಕೆಲಸ ಸಾರ್. 200 ರೂಪಾಯಿ ಕೊಡ್ತರೆ. ಇಬ್ಬರು ಹೆಣ್ಣು ಮಕ್ಕಳು. 'ಅವರು' ತೀರ್ ಕೊಂಡರು. ಮನೆ ಇಲ್ಲ. ಈಗ ಇಲ್ಲೇ ಕನ್ನಡ ಸಂಘದ ಹತ್ರ ಬಾಡಿಗೆಗೆ



ಇದೀವಿ. ಬಾಡ್ಗೆ ತಿಂಗಳಿಗೆ 1,700 ರೂಪಾಯಿ. ಆಶ್ರಯ ಮನೆಗೆ ಬರೆದು ಹಾಕಿದ್ದೀವಿ. ಇನ್ನೂ ಸಿಕ್ಕಿಲ್ಲ ಸಾರ್. ನೀವ್ ಏನಾದ್ರೂ ಒಂದು ಮಾತು ಹೇಳಿಸ್ರೀ ಸಾರ್. ಇಲ್ಲಮ್ಮ ನೀವೆಲ್ಲ ಸಂಘ ಮಾಡ್ಕೊಂಡು ಕೇಳ್ಬೇಕಮ್ಮ. ಅದಕ್ಕೆ ಬೇಕಾದ್ರೆ ಸಹಾಯ ಮಾಡೋಣ. ಮತ್ತೆ ಹೀಗಂತ ಪೇಪರಲ್ಲಿ ಚೆನ್ನಾಗಿ ಬರೆ–ಯೋಣ.


ಕುಂದಾಪುರ: ತ್ರಾಸಿಯಲ್ಲಿ ನಿವೇಶನ ರಹಿತರ ಬೃಹತ್ ಸಮಾವೇಶ

ಕರ್ನಾಟಕ ಕೃಷಿಕೂಲಿಕಾರರ ಸಂಘ, ಕುಂದಾಪುರ ತಾಲೂಕು ಸಮಿತಿ ಮತ್ತು ತ್ರಾಸಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಡ ನಿವೇಶನ ರಹಿತರ ಹೋರಾಟ ಸಮಿತಿ ನೇತೃತ್ವದಲ್ಲಿ ಬಡ ನಿವೇಶನ ರಹಿತರಿಂದ ಪಂಚಾಯತ್ ವ್ಯಾಪ್ತಿಯ ಬಡ ನಿವೇಶನ ರಹಿತರು ನಿವೇಶನ ಸ್ಥಳ ಕೋರಿ ಸಲ್ಲಿಸಿದ ಅರ್ಜಿಗಳು ಕುಂದಾಪುರ ತಾಲೂಕು ಪಂಚಾಯತ್ ಮೂಲಕ ತಹಶಿಲ್ದಾರ್ ಕಛೇರಿಗೆ ಜನವರಿ 18, 2013ರಂದು ರವಾನಿಸಲಾಗಿದ್ದರೂ, ಸ್ವೀಕರಿಸಿದ ಒಟ್ಟು 564 ಅರ್ಜಿಗಳಿಗೆ ಕೂಡಲೇ – ನಿವೇಶನ ಸ್ಥಳ ಗುರುತಿಸಿ ಹಕ್ಕು ಪತ್ರ ಮಂಜೂರು ಮಾಡಲು ಒತ್ತಾಯಿಸಿ, ದಿನಾಂಕ 23 ಸೆಪ್ಟೆಂಬರ್ 2013ರಂದು ತ್ರಾಸಿಯ ಅಣ್ಣಪ್ಪಯ್ಯ ಸಭಾಭವನದಲ್ಲಿ ನಿವೇಶನ ರಹಿತ ಅರ್ಜಿದಾರರ ಬೃಹತ್ ಸಮಾವೇಶ ಯಶಸ್ವಿಯಾಗಿ ಜರಗಿತು.

ಕೂಲಿಕಾರರ ಸಂಘದ ತಾಲೂಕು ಅಧ್ಯಕ್ಷ ರಾಜೀವ ಪಡುಕೋಣೆ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಾ ತ್ರಾಸಿ ಗ್ರಾಮ ಈ ತನಕ ನಿವೇಶನ ಹಂಚಿಕೆಗೆ ಮುಂದಿನ ಕ್ರಮ ಕೈಗೊಳ್ಳದಿರುವ ಅಧಿಕಾರಿಗಳ ಅಸಡ್ಡೆ ವರ್ತನೆಯನ್ನು ಖಂಡಿಸಿದರು. ಆದ್ದರಿಂದ ತಾಲೂಕಿನಾದ್ಯಂತ ನಿವೇಶನ ರಹಿತ ಅರ್ಜಿದಾರರನ್ನು ಸಂಘಟಿಸಿ ಸೆಪ್ಟೆಂಬರ್ 30ರಂದು ಕುಂದಾಪುರ ತಹಶೀಲ್ದಾರ್ ಕಛೇರಿ ಎದುರು ಭೂಮಿ ಹಕ್ಕಿಗಾಗಿ ಅನಿರ್ದಿಷ್ಟಾವಧಿ ಹಗಲು – ರಾತ್ರಿ ಧರಣಿ ಮುಷ್ಕರ ಹೋರಾಟ ಹಮ್ಮಿಕೊಳ್ಳಲಾಗಿದೆ. ನಿವೇಶನ ಸ್ಥಳ ಮಂಜೂರಾತಿಗೆ ಒತ್ತಾಯಿಸಿ ಜರಗುವ ತೀವ್ರ ರೀತಿಯ ಈ ಹೋರಾಟಕ್ಕೆ ಬಡ ನಿವೇಶನ ರಹಿತರೆಲ್ಲರೂ ಭಾಗವಹಿಸಬೇಕೆಂದು ಕರೆ ಕೊಟ್ಟರು.

ಕೃಷಿ ಕೂಲಿಕಾರರ ಸಂಘದ ತಾಲೂಕು ಕಾರ್ಯದರ್ಶಿ ವೆಂಕಟೇಶ ಕೋಣಿ ಪ್ರಾಸ್ತಾವಿಕ ಭಾಷಣ ಮಾಡುತ್ತಾ ಬಡವರು ಭೂಮಿ ಹಕ್ಕಿಗಾಗಿ ಹೋರಾಡುತ್ತಾರೆ, ಆದರೆ ಸರಕಾರದ ಮಂತ್ರಿಗಳು ಭೂ ಕಬಳಿಕೆಯಲ್ಲಿ ತೊಡಗಿದ್ದಾರೆ. ಒತ್ತುವರಿ ಭೂಮಿಯನ್ನು ಕೂಡಲೇ ಸರಕಾರ ವಶಕ್ಕೆ ತೆಗೆದುಕೊಂಡು ಬಡವರಿಗೆ ಹಂಚಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ನಿವೇಶನ ರಹಿತರ ಹೋರಾಟ ಸಮಿತಿ ಸಂಚಾಲಕರಾದ ಕರಿಯ ದೇವಾಡಿಗ ಕೋಟೇಶ್ವರ, ಶ್ರೀನಿವಾಸ ಪೂಜಾರಿ ಗುಜ್ಜಾಡಿ, ಪ್ರಭಾಕರ ಮೊವ್ವಾಡಿ, ನಾಗರತ್ನ ನಾಡ, ಸಂತೋಷ ಹೆಮ್ಮಾಡಿ, ಪಂಚಾಯತ್ ಸದಸ್ಯೆ ಪ್ರೇಮಾ ಬಳೇಗಾರ ಉಪಸ್ಥಿತರಿದ್ದರು.



ತ್ರಾಸಿ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಹಾಗೂ ನಿವೇಶನ ರಹಿತರ ಹೋರಾಟ ಸಮಿತಿ ಸಂಚಾಲಕ ರೆನ್ಸಮ್ ಪಿರೇರಾ ಸಮಾವೇಶ ಅಧ್ಯಕ್ಷತೆ ವಹಿಸಿದ್ದರು. ವೆಂಕಟೇಶ ಕೋಣಿ ಕಾರ್ಯಕ್ರಮ ನಿರೂಪಿಸಿದರು. ●

ಈಗಲಾದರೂ ಪಾಠ.....

ಪುಟ 5 ರಿಂದ

ಜಾತ್ಯಾತೀತ ಜನತಾದಳವು ಈ ಎಲ್ಲಾ ಅನುಭವಗಳಿಂದ ಪಾಠ ಕಲಿಯಬೇಕಿದೆ. ಕಾಂಗ್ರೆಸ್ ಮತ್ತು ಬಿಜೆಪಿಗಳು ಒಂದೇ ರೀತಿಯ ನೀತಿಗಳ ಮೂಲಕವಾಗಿ, ಕಾರ್ಯವೆಸಗುತ್ತಿರುವಾಗ ಇದಕ್ಕೆ ಪರ್ಯಾಯ ಕಂಡುಕೊಳ್ಳಬೇಕಿರುವುದು ಅನಿವಾರ್ಯ, ಅತ್ಯಗತ್ಯ. ಇದನ್ನು ಕಠಿಣ ಪರಿಶ್ರಮದಿಂದಲೇ ಕಟ್ಟಬೇಕಿದೆ.

ಕಾಂಗ್ರೆಸ್ ಮತ್ತು ಬಿಜೆಪಿಗಳು ತಾವೇ ಒಬ್ಬರಿಗೊಬ್ಬರು ಪರ್ಯಾಯವೆಂದು, ಮತ ಕ್ರೋಢೀಕರಣ, ರಾಜಕೀಯ ಧೃವೀಕರಣ ಕಾರ್ಪೋರೇಟ್‌ಗಳ ನೆಚ್ಚಿನ ಎ ಮತ್ತು ಬಿ ಟೀಮುಗಳಾಗಿರುವ ತಮ್ಮಿಬ್ಬರ ನಡುವೆಯೇ ನಡೆಯಬೇಕೆಂದೂ ಬಯಸುತ್ತಿವೆ. ಬಹು ಪಕ್ಷಗಳ ಪದ್ಧತಿಗೆ ಬದಲಿಯಾಗಿ ಅಮೇರಿಕಾ ಮಾದರಿಯ ಎರಡು ಪಕ್ಷಗಳ ರಾಜಕೀಯ ವ್ಯವಸ್ಥೆಯನ್ನು ರೂಪಿಸಲು ಶತಾಯಗತಾಯ ಪ್ರಯತ್ನಿಸುತ್ತಿವೆ. ಇದಕ್ಕೆ ಸವಾಲಾಗಿರುವುದು ಎಡ ಶಕ್ತಿಗಳು, ಮತ್ತು ಕೆಲವು ಪ್ರಾದೇಶಿಕ ಪಕ್ಷಗಳು. ಈ ಪ್ರಾದೇಶಿಕ ಪಕ್ಷಗಳ ಹುಟ್ಟು, ಬೆಳವಣಿಗೆಯ ಪ್ರಧಾನ ಅಂಶವೆಂದರೆ ಕಾಂಗ್ರೆಸ್ ಸರ್ವಾಧಿಕಾರತ್ವದ ವಿರೋಧವಾಗಿ, ಕಾಲಕ್ರಮೇಣದಲ್ಲಿ ಕಾಂಗ್ರೆಸ್ ವಿರೋಧಿ ಸ್ಥಳವನ್ನು ಪಡೆಯಲು ಪ್ರಯತ್ನಿಸುವಾಗ ಸೆಕ್ಯುಲರ್ ನೆಲೆಗಳನ್ನು ಉಳಿಸಿಕೊಳ್ಳುವ ರಾಜಕೀಯ ಅನುಸರಿಸುವಾಗ ಬಿಜೆಪಿಗೂ ವಿರೋಧವಾಗಿ ಈ ಶಕ್ತಿಗಳಿಗೆ ಜನತೆ ಬೆಂಬಲಿಸಿರುವುದು ಕಾಣುತ್ತದೆ. ಎಲ್ಲೆಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಿಗೆ ಸಮರ್ಥವಾಗಿ ಪರ್ಯಾಯ ಒದಗಿಸಲು ಸೆಕ್ಯುಲರ್ ಶಕ್ತಿಗಳಿಗೆ ಸಾಧ್ಯವಾಗಿದೆಯೋ ಅಲ್ಲಿ ಅವುಗಳನ್ನೇ ಜನತೆ ಆರಿಸಿದೆ ಹಾಗೂ ಪರ್ಯಾಯವೆಂದು ಬೆಂಬಲಿಸಿದೆ. ಹೀಗಾಗಿಯೇ ಇವುಗಳನ್ನು ಅಪೋಶನ ಮಾಡಲು ಆ ಗುತ್ತೇದಾರಿ ಬಂಡವಾಳಗಾರರ ಪಕ್ಷಗಳು ಪ್ರಯತ್ನಿಸುತ್ತಲೇ ಇವೆ.


ಸ್ವಭಾವತಃ ವರ್ಗ ಗುಣದಲ್ಲಿ ಭೂಮಾಲೀಕ–ಬಂಡವಾಳಶಾಹೀ ವರ್ಗ ನೀತಿಗಳನ್ನು ಅನುಸರಿಸುವ ಈ ಬಹುತೇಕ ಪಕ್ಷಗಳು ತಮ್ಮ ಆಡಳಿತ ಸುಸೂತ್ರವಾಗಿ ನಡೆಯಲು ಕೇಂದ್ರದಲ್ಲಿ ಅಧಿಕಾರದಲ್ಲಿರುವ, ಅಧಿಕಾರಕ್ಕೆ ಬರಬಹುದಾದ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಹೋಗುವ ರಾಜೀ ಮನೋಭಾವವನ್ನು ತೋರುವುದು ಸಾಮಾನ್ಯವಾಗಿರುತ್ತದೆ. ಹೀಗೆ ಮೂರನೆಯ ಸೆಕ್ಯುಲರ್, ಪ್ರಾದೇಶಿಕ ಪಕ್ಷಗಳು ಇಂದಿನ ರಾಜಕೀಯ ಸನ್ನಿವೇಶದಲ್ಲಿ ಹಲವಾರು ಒತ್ತಡ, ಹೊಯ್ದಾಟಗಳನ್ನು, ಎದುರಿಸುತ್ತಲೇ ಇರುತ್ತವೆ, ಅಸ್ತಿತ್ವಕ್ಕಾಗಿ ಹೆಣಗುತ್ತಲೇ ಇರುತ್ತವೆ. ಇಂತಹ ಸಂದರ್ಭದಲ್ಲಿಯೇ ಅವು ತಮ್ಮ ನೆಲೆ ಮತ್ತು ಬಗ್ಗೆ ಧೃಡವಾಗಿಲ್ಲದೆ ದುರ್ಬಲವಾಗುವುದರತ್ತ ಜಾರುತ್ತವೆ. ಇಂತಹ ಚಂಚಲತೆ, ಸಂದರ್ಭಗಳ ಬಗ್ಗೆ ಎಡ ಪಕ್ಷಗಳಿಗೆ ಅರಿವು, ಸ್ಪಷ್ಟ ಕಣ್ಣೋಟವಿದೆ, ಇಂತಹ ಸ್ಥಿತಿಯಿಂದ ಪ್ರಾದೇಶಿಕ ಪಕ್ಷಗಳು ಹೊರಬರಬೇಕಾದರೆ ತಮ್ಮನ್ನು ಬೆಂಬಲಿಸಿದ ಜನತೆಯ ರಾಜಕೀಯ ಇಂಗಿತಕ್ಕೆ, ಸೆಕ್ಯುಲರಿಸಂ, ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬದ್ಧತೆ, ಎಡ ಸೂಚಿತ ರಾಜಕೀಯ ಪರ್ಯಾಯ ಧೋರಣೆ ಅನುಸರಣೆ ಅಗತ್ಯ. ಆರ್ಥಿಕ ಧೋರಣೆಗಳನ್ನು ರೂಪಿಸಿಕೊಳ್ಳುವಾಗಲೂ ಪರ್ಯಾಯ ಚಿಂತನೆ ಅವಶ್ಯಕ.

ಇದಕ್ಕಾಗಿಯೇ ರಾಷ್ಟ್ರ ಮಟ್ಟದಲ್ಲಿ ಎಡ ಪಕ್ಷಗಳು ಮುತುವರ್ಜಿ ವಹಿಸುತ್ತಿವೆ. ಇದು ಕಾರ್ಯಸಾಧುವೇ ಎಂಬ ಪ್ರಶ್ನೆಯನ್ನು ಕೆಲವರಲ್ಲಿ ಹುಟ್ಟಿಸಿದರೂ ರಾಜಕೀಯ ಹೋರಾಟ ಬಿರುಸು ಪಡೆಯುತ್ತಿರುವಂತೇ ಭವಿಷ್ಯದಲ್ಲಿ ಮೂರನೆಯ ಪರ್ಯಾಯ ಆಕಾರ ಪಡೆಯಬಲ್ಲುದು. ದೇಶದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ವಿರುದ್ಧ ಹೆಚ್ಚುತ್ತಿರುವ ಅತೃಪ್ತಿಯನ್ನು ಗಂಭೀರವಾಗಿ ಗಮನಿಸಬೇಕು. ಆದ್ದರಿಂದಲೇ ಇದನ್ನು ಅರಿತಿರುವ ಉದಾರೀಕರಣದ ಆರಾಧಕ ಶಕ್ತಿಗಳು, ಕಾರ್ಪೋರೇಟ್ ಕಂಪನಿಗಳು ಕಾಂಗ್ರೆಸ್ ವಿರುದ್ಧದಲ್ಲಿ ಮೂರನೆಯ ಪರ್ಯಾಯ ಶಕ್ತಿ ಮೇಲುಗೈ ಪಡೆಯದಂತಾಗಿಸಲು ಕಾಂಗ್ರೆಸ್ ವಿರುದ್ಧವೆಂದು ನರೇಂದ್ರ ಮೋದಿ (ನಮೋ ಬ್ರಿಗೇಡನ್ನು)ಗೆ ಗಾಳಿ ಊದಿ ಉಬ್ಬಿಸಿ ಆಕ್ರಮಣಕಾರಿಯಾಗಿ ಪ್ರದರ್ಶಿಸುತ್ತಿವೆ. ಆದಷ್ಟೇ ಇಂತಹ ಪ್ರಯತ್ನ ನಡೆದರೂ ವಾಸ್ತವ ಬೇರೆಯಾಗಿಯೇ ಇರುತ್ತದೆ ಎಂಬುದನ್ನು ಹಿಂದೆ ಹಲವಾರು ಸಂದರ್ಭಗಳಲ್ಲಿ ಕಂಡಿದ್ದೇವೆ. ಈ ಭಯವೇ 'ಕಾಂ–ಬಿ' ಗಳನ್ನು ಕಾಡುತ್ತಿದೆ.


ಹೊಸ ನಿರೀಕ್ಷೆಗಳು

ಇದೀಗ ಮೊನ್ನೆ (2013 ಬುಧವಾರ 18ರಂದು) ಮಂಗಳೂರಿನಲ್ಲಿ ಜೆಡಿ–ಎಸ್ ರಾಷ್ಟ್ರಾಧ್ಯಕ್ಷರಾದ ಹೆಚ್.ಡಿ. ದೇವೇಗೌಡರು ಕಾಂಗ್ರೆಸ್ ಮತ್ತು ಬಿಜೆಪಿಗಳಿಂದ ಸಮಾನವಾಗಿ ದೂರ ಉಳಿಯುವುದಾಗಿ ಹೇಳಿದ್ದಾರೆ. ಮತ್ತು ಎಡಪಕ್ಷಗಳು ಸಹಜ ಮಿತ್ರರು ಎಂದೂ ಅಭಿಪ್ರಾಯ ಮನರುಚ್ಚರಿಸಿದ್ದಾರೆ. ಮುಂದೆ ಗೊಂದಲಕ್ಕೆ ಅವಕಾಶವಿಲ್ಲದಂತೆ ಸಮಾಲೋಚಿಸುವುದಾಗಿಯೂ ಹೇಳಿದ್ದಾರೆ. ಜೆಡಿ–ಎಸ್ ಪಕ್ಷವು ತನ್ನ ತಪ್ಪುಗಳಿಂದ ನಿಜಕ್ಕೂ ಪಾಠ ಕಲಿಯುತ್ತದೆ ಎಂದು ಎಡಪಕ್ಷಗಳು ನಿರೀಕ್ಷಿಸುತ್ತವೆ. ಎಡಪಕ್ಷಗಳು ಜೆಡಿ–ಎಸ್‌ನ ಸಹಜ ಮಿತ್ರರು ಎನ್ನುವುದು ನಿಜವಾದರೆ ಎಡಪಕ್ಷಗಳು ಬಯಸುವುದು ಕೆಲವು ಸ್ಥಾನಗಳಿಗೆ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟು ಎಡಪಕ್ಷಗಳ ಅಭ್ಯರ್ಥಿಗಳಿಗೆ ಪೂರ್ಣ ಬೆಂಬಲ ನೀಡಲು ಜೆಡಿ–ಎಸ್ ಮುಂದಾಗಬೇಕು. ಇಂದಿನ ರಾಜಕೀಯ ಸನ್ನಿವೇಶದಲ್ಲಿ ಲಭ್ಯವಿರುವ ಅವಕಾಶಗಳನ್ನು ಗಮನಿಸುತ್ತಲೇ ಪರ್ಯಾಯ ನೀತಿಗಳ ಆಧಾರದ ಪರ್ಯಾಯ ರಾಜಕಾರಣಕ್ಕೆ ಪ್ರಯತ್ನಿಸುವಲ್ಲಿ ಎಡಪಕ್ಷಗಳು ಸ್ವತಂತ್ರ ರಾಜಕೀಯ ಮುತುವರ್ಜಿಯನ್ನು ವಹಿಸುತ್ತಿವೆ. ದುಡಿಯುವ ಜನಸಮುದಾಯ, ಒಟ್ಟಾರೆ ಭಾರತದ ಸಾರ್ವಭೌಮತ್ವ, ಮತನಿರಪೇಕ್ಷತೆ, ಪ್ರಜಾಪ್ರಭುತ್ವ, ಬಹುಸಂಸ್ಕೃತಿ ಉಳಿವು, ಬೆಳವಣಿಗೆ, ಜನತೆಯ ರಕ್ಷಣೆ ಒಟ್ಟಾರೆ ದೇಶದ ಹಿತ, ಭವಿಷ್ಯವೇ ಎಡಪಕ್ಷಗಳ ಪ್ರಮುಖ ಕಾಳಜಿ.

ಈ ಹಿನ್ನೆಲೆಯಲ್ಲಿ ಜನದ್ರೋಹಿ ಕಾಂಗ್ರೆಸ್‌ಗೆ ಮತ್ತು ಫ್ಯಾಸಿಸ್ಟ್ ಮನೋಭಾವದ ಕೋಮುವಾದೀ ಬಿಜೆಪಿ ಪಕ್ಷಗಳಿಗೆ ಪ್ರತಿರೋಧ ಒಡ್ಡುವುದು, ಆ ಮೂಲಕ ನೀತಿಗಳ ಆಧಾರದಲ್ಲಿ ಪರ್ಯಾಯವನ್ನು ಕಟ್ಟುವುದು ಎಡಶಕ್ತಿಗಳ ಆದ್ಯತೆಯಾಗಿದೆ. ಆದ್ದರಿಂದಲೇ ಕಾಂಗ್ರೇಸೇತರ ಹಲವಾರು ಸೆಕ್ಯುಲರ್ ಪಕ್ಷಗಳನ್ನು ಈ ನಿಟ್ಟಿನಲ್ಲಿ ಒಂದೆಡೆ ಅಣಿ ನೆರೆಸುವ ಗುರುತರ ಗುರಿಯನ್ನು ಎಡಪಕ್ಷಗಳು ಹೊಂದಿವೆ. ನೀತಿ, ರಾಜಕೀಯ ನಿಲುವುಗಳಲ್ಲಿ ಕೆಲ ಹೊಯ್ದಾಟ, ವ್ಯತ್ಯಾಸಗಳು ಇರಬಹುದಾದರೂ ಅಂತಹವುಗಳಿಂದ ಅವು ಹೊರ ಬರುವುದನ್ನು ಎಡಪಕ್ಷಗಳು ನಿರೀಕ್ಷಿಸುತ್ತವೆ, ಅದಕ್ಕಾಗಿ ಒತ್ತಾಯಿಸುತ್ತವೆ. ●



ಭಾರತ-ಅಮೆರಿಕಾ ಪರಮಾಣು ವ್ಯವಹಾರ ತಂದ 'ಪರಿವರ್ತನೆ'ಗೆ ಭಾರತದ ಸಂಸತ್ತು ಅಂಗೀಕರಿಸಿರುವ ಪರಮಾಣು ಬಾಧ್ಯತೆಯ ಕಾನೂನು ಒಂದು ದೊಡ್ಡ ಸವಾಲು, ಪ್ರಮುಖ ಅಡ್ಡಿ ಎಂದು ಅಮೆರಿಕಾದ ಪರಮಾಣು ವಿದ್ಯುತ್ ಕಂಪನಿಗಳ ಪರವಾಗಿ ಅಧ್ಯಕ್ಷ ಒಬಾಮ ದಕ್ಷಿಣ ಏಷ್ಯಾದಲ್ಲಿ ಒಂದು ಪ್ರಮುಖ ಹುದ್ದೆಗೆ ನೇಮಿಸಬೇಕೆಂದಿರುವ ಭಾರತೀಯ ಮೂಲದ ಅಮೆರಿಕನ್ ಹೇಳಿದ್ದಾರೆ ಎಂದು ಸೆಪ್ಟಂಬರ್ 13 ರಂದು ವರದಿಯಾಗಿತ್ತು. ಐದು ದಿನಗಳ ನಂತರ ಪ್ರಧಾನಿ ಮನಮೋಹನ್ ಸಿಂಗ್ ಅಮೆರಿಕನ್ ಕಂಪನಿಗಳಿಗೆ ಈ ಕಾನೂನನ್ನು ಸಡಿಲಗೊಳಿಸುವ ಉಡುಗೊರೆಯೊಂದಿಗೆ ಹೋಗುತ್ತಿದ್ದಾರೆ ಎಂಬ ಸುದ್ದಿ ಪ್ರಕಟವಾಗಿದೆ. ಹೀಗೆ ಮಾಡಿದರೆ ಅದು ಕಾನೂನುಬಾಹಿರ ಕ್ರಮವಾಗುತ್ತದೆ ಎಂದು ಸಿಪಿಐ(ಎಂ) ಎಚ್ಚರಿಸಿದೆ. ಯುಪಿಎ-2 ಸರಕಾರ ಮತ್ತೆ ಅಮೆರಿಕನ್ ಕಂಪನಿಗಳ ಹಿತ ಕಾಯುವ ಅಮೆರಿಕನ್ ಆಡಳಿತದ ಒತ್ತಡಕ್ಕೆ ಮಣಿಯಲು ಸಿದ್ಧವಾಗಿದೆ ಎಂದು ಮತ್ತೊಮ್ಮೆ ತೋರಿಸ ಹೊರಟಂತಿದೆ.



ಇನ್ನೊಂದೆಡೆ ಕಳೆದ ಬಾರಿ ಈ ಅಂಕಣದಲ್ಲಿ ಹೇಳಿದಂತೆ 'ನಾಪತ್ತೆ'ಯಾದ ಕಲ್ಲಿದ್ದಲು ಕಡತಗಳಲ್ಲಿ ಹಲವನ್ನು ಕಲ್ಲಿದ್ದಲು ಮಂತ್ರಾಲಯ ಸಿಬಿಐಗೆ ಕೊಟ್ಟಿರುವುದಾಗಿ ಹೇಳಿದರೂ, ಕೆಲವು ಪ್ರಮುಖ ಕಡತಗಳು– ಅನಿಲ್ ಅಂಬಾನಿ ಮಾಲಕತ್ವದ ರಿಲಯಂಸ್ ಪವರ್, ಟಾಟಾಗಳ ಟಾಟಾ ಅಯರ್ನ್ ಅಂಡ್ ಸ್ಟೋಂಜ್, ರತಿ ಸ್ಟೀಲ್ ಅಂಡ್ ಪವರ್ ಲಿಮಿಟೆಡ್ ಮುಂತಾದವರಿಗೆ ಸಂಬಂಧಪಟ್ಟ ಕಡತಗಳು ಇನ್ನೂ 'ನಾಪತ್ತೆ'ಯಾಗಿಯೇ ಉಳಿದಿವೆಯಂತೆ. ಆದರೂ 'ಕಲ್ಲಿದ್ದಲು ಮಂತ್ರಾಲಯ ಈ ಬಗ್ಗೆ ಎಫ್‌ಐಆರ್ ಅರ್ಜಿ ಹಾಕಲು ಕಾಲೆಳೆಯುತ್ತಿದೆಯಂತೆ. ಈ ಫೈಲುಗಳು ಪತ್ತೆಯಾಗದಿದ್ದರೆ ಸರಕಾರ ಒಂದು ಎಫ್‌ಐಆರ್ ಕೇಳಲಿದೆ, ಏಕೆಂದರೆ ಸರಕಾರಕ್ಕೆ 'ಮರೆಮಾಚುವಂತದ್ದು ಏನೂ ಇಲ್ಲೆಂದು ಪ್ರಧಾನಿಗಳು ಸಂಸತ್ತಿಗೆ ಹೇಳಿದ್ದರು. ಈಗ ಎಂದಿನಂತೆ ತನ್ನ ದೇಶದ ಹಿತದ ಪ್ರಶ್ನೆಯಲ್ಲಿ ಮೌನವಾಗಿದ್ದಾರೆ. ಮುಕೇಶ್ ಅಂಬಾನಿಯ ಆರ್‌ಐಎಲ್ ತಂತ್ರಗಳ ಬಗ್ಗೆಯೂ ಅದೇ ಮೌನ ,

ಈಡೇರಿದರೂ, ವ್ಯಾಪಕ ಟೀಕೆಯಿಂದಾಗಿ ಆರ್‌ಐಎಲ್ ಕರಾರಿನಂತೆ ಉತ್ಪಾದನೆ ಮಾಡುವ ವರೆಗೆ ದರ ಏರಿಕೆಇಲ್ಲ ಎಂಬ ಹಣಕಾಸು ಇಲಾಖೆಯ ಆಕ್ಷೇಪವನ್ನು ಬದಿಗೊತ್ತಲು ಈ ವಿಷಯವನ್ನು ಸಂಪುಟಕ್ಕೆ ಉತ್ಪಾದನೆ ಇಳಿಕೆಗೆ 'ತಾಂತ್ರಿಕ ಕಾರಣ ಇಲ್ಲವೆಂದಾದರೆ' ಎಂಬ 'ಶರತ್ತಿ'ನೊಂದಿಗೆ ಒಯ್ಯುವ ಮತ್ತೊಂದು ತಂತ್ರ– ಅಂತಹ ಕಾರಣ ಏನೂ ಇಲ್ಲ ಎಂಬ ವರದಿ ಆಗಲೇ ಇದ್ದರೂ ಕೂಡ.

ಅಂಬಾನಿ ಅನಿಲ: ಮತ್ತೆ ಸಿಎಜಿ ದೂರು, ಮತ್ತೆ ದೇಶದ ಖಜಾನೆಗೆ ನಷ್ಟದ ಬಾಬ್ತು

ಇತ್ತೀಚೆಗೆ ನೈಸರ್ಗಿಕ ಅನಿಲದ ಬೆಲೆಗಳನ್ನು ಹೆಚ್ಚಿಸಲು ಯುಪಿಎ–2 ಸರಕಾರ ನಿರ್ಧರಿಸಿದಾಗ ಇದು ರಿಲಯಂಸ್ ಇಂಡಸ್ಟ್ರೀಸ್ ಲಿಮಿಟೆಡ್(ಆರ್‌ಐಎಲ್)ನ ಮಾಲಕ ಅಂಬಾನಿಗಾಗಿ ಯುಪಿಎ–2 ಸರಕಾರ ಕೈಗೊಂಡ ನಿರ್ಧಾರ ಎಂಬ ಟೀಕೆ ಬಂದಿತ್ತು. ನಂತರದ ಬೆಳವಣಿಗೆಗಳು ಇದನ್ನು ಮತ್ತಷ್ಟು ಪುಷ್ಟಿಗೊಳಿಸಿವೆ.

ದೇಶದ ಮಹಾಲೆಕ್ಕ ಪರಿಶೋಧಕರ(ಸಿಎಜಿ) ಕಚೇರಿ ಆರ್‌ಐಎಲ್‌ನ ಕೆಜಿ–ಡಿ6 ನೈಸರ್ಗಿಕ ಅನಿಲ ಬಾವಿಗಳ ಕಾಂಟ್ರಾಕ್ಟಿನ ಲೆಕ್ಕ ಪರಿಶೋಧನೆ ನಡೆಸುವುದರಲ್ಲಿ ಆ ಕಂಪನಿ ಸಹಕರಿಸುತ್ತಿಲ್ಲ, ಕೇಳಿದ ದಾಖಲೆಗಳನ್ನು ಒದಗಿಸುತ್ತಿಲ್ಲ ಎಂದು ಮತ್ತೆ ಪೆಟ್ರೋಲಿಯಂ ಇಲಾಖೆಗೆ ದೂರು ನೀಡಿರುವುದಾಗಿ ವರದಿಯಾಗಿದೆ.

ವೇದರಾಜ ಎನ್.ಕೆ.

ಹಿಂದೆ ಸಿಎಜಿ ಇಂತಹ ದೂರು ನೀಡಿದ ನಂತರ, ಇವೆಲ್ಲ ಈಗ ಸರಿಯಾಗಿದೆ, ಏನೂ ಸಮಸ್ಯೆ ಈಗ ಉಳಿದಿಲ್ಲ, ಎಲ್ಲರಿಂದ ಸಹಕಾರ ಸಿಗುತ್ತಿದೆ, ಎಲ್ಲ ಸಾಂಗವಾಗಿ ಸಾಗುತ್ತಿದೆ ಎಂದು ಎರಡು ತಿಂಗಳ ಹಿಂದೆ ಸ್ವತಃ ಪೆಟ್ರೋಲಿಯಂ ಮಂತ್ರಿಗಳೇ ಹೇಳಿದರು. ಅಷ್ಟಕ್ಕೇ ನಿಲ್ಲದೆ "ನಾವು ಅವರನ್ನು ನಾಶ ಮಾಡಬಾರದು, ಆಗ ನೀವೇ ನಾಶವಾಗುತ್ತೀರಿ" ಎಂದೂ ಟಿಪ್ಪಣಿ ಮಾಡಿರುವುದಾಗಿ ವರದಿಯಾಗಿದೆ.

ಆದರೆ ಈ ವೇಳೆಗೆ ಆಗಲೇ ಸಿಎಜಿ ಮತ್ತೆ ಆರ್‌ಐಎಲ್‌ನ ಅಸಹಕಾರದ ಬಗ್ಗೆ ದೂರು ನೀಡಿತ್ತು, 2008–09ರಿಂದ 2011–12 ರ ವರೆಗಿನ ಲೆಕ್ಕ ಪರಿಶೋಧನೆಗೆ ಬೇಕಾದ ಹಣಕಾಸು ಮತ್ತು ಸಾಮಗ್ರಿ ನಿರ್ವಹಣೆಯೂ ಸೇರಿದಂತೆ ಬಹಳಷ್ಟು ದಾಖಲೆಗಳನ್ನು ಪರಿಶೀಲಿಸಲು ಅದಕ್ಕೆ ಅವಕಾಶ ನೀಡುತ್ತಿಲ್ಲ ಎಂದು ಈಗ ಬೆಳಕಿಗೆ ಬಂದಿದೆ. ಈ ಬಗ್ಗೆ ಸಿಪಿಐ(ಎಂ) ಸಂಸದ ತಪನ್ ಸೇನ್ ಹಾಗೂ ಸಿಪಿಐ ಸಂಸದ ಗುರುದಾಸ್ ದಾಸ್‌ಗುಪ್ತ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ತಪನ್ ಸೇನ್ 2007ರಿಂದಲೇ ಈ ಬಗ್ಗೆ ಪ್ರಧಾನಿಗಳ ಗಮನ ಸೆಳೆಯುತ್ತಾ ಬಂದಿದ್ದಾರೆ, ಅದೇ ರೀತಿ ಗುರುದಾಸ್ ದಾಸ್‌ಗುಪ್ತ ಕೂಡ. ಆದರೆ ಪ್ರಧಾನಿಗಳದ್ದು ಎಂದಿನಂತೆ ಬಹುಶಃ ಈಗಲೂ ಮೌನ.

ಈ ನಡುವೆ ಆರ್‌ಐಎಲ್ ಸರಕಾರದೊಂದಿಗೆ ಮಾಡಿಕೊಂಡ ಕಾಂಟ್ರಾಕ್ಟಿನಂತೆ ನಡೆದುಕೊಳ್ಳುತ್ತಿಲ್ಲ ಎಂದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ, ಜತೆಗೇ ಈ ಬಗ್ಗೆ ಕ್ರಮಕೈಗೊಳ್ಳಲು ಪೆಟ್ರೋಲಿಯಂ ಮಂತ್ರಿಗಳೇ ಅಡ್ಡಗಾಲು ಹಾಕುತ್ತಿದ್ದಾರೆ ಎಂಬ ಸಂದೇಹ ಬಲವಾಗುತ್ತಿದೆ.

ಪೆಟ್ರೋಲಿಯಂ ಇಲಾಖೆಯ ಅಧಿಕಾರಿಗಳು ಕ್ರಮ ಕೈಗೊಳ್ಳಲು ಮುಂದಾದಾಗ, ಈ ಪ್ರಕಾರ ಸರಕಾರದ ಖಜಾನೆಗೆ ಆರ್‌ಐಎಲ್‌ನಿಂದ 114 ಮಿಲಿಯ ಡಾಲರುಗಳು(ಸುಮಾರು [illegible]ಕೋಟಿ ರೂ.ಗಳು) ಬರಬೇಕಾಗಿರುವ ವಿಷಯವನ್ನು ಅನಗತ್ಯವಾಗಿ ಕಾನೂನು ಮಂತ್ರಾಲಯಕ್ಕೆ ಕಳಿಸಲಾಗಿದೆ ಎಂದು ಮಾಧ್ಯಮಗಳಲ್ಲಿ ಈ ವಾರ ವರದಿಯಾಗಿದೆ.

ಆರ್‌ಐಎಲ್ ಅನಿಲ ಉತ್ಪಾದನೆಯನ್ನು ಬೇಕೆಂದೇ ಕಡಿಮೆ ಮಾಡಿ, ಹೆಚ್ಚಿನ ಖರ್ಚು ತೋರಿಸಿ ದೇಶದ ಖಜಾನೆಗೆ ನಷ್ಟ ಉಂಟು ಮಾಡುತ್ತಿದೆ ಎಂಬ ಆರೋಪ ಒಂದೆಡೆಯಾದ-ರೆ, ಉತ್ಪಾದನೆ ಕಡಿಮೆಯಾಗಲು ತಾಂತ್ರಿಕ, ಭೌಗೋಳಿಕ ಕಾರಣಗಳಿವೆಯೇ ಎಂದು ಪರಿಶೀಲಿಸಿ ಆಮೇಲೆ ಕ್ರಮ ಕೈಗೊಳ್ಳಬಹುದು ಎಂದು ಪೆಟ್ರೋಲಿಯಂ ಮಂತ್ರಿಗಳು ಹೇಳಿದ್ದರು. ಆದರೆ ಇಲ್ಲಿಯೂ ಬಹಳ ಸಂಗತಿಗಳನ್ನು ಮುಚ್ಚಿಡಲಾಗಿದೆ ಎಂಬುದೀಗ ಬೆಳಕಿಗೆ ಬಂದಿದೆ.

ನೈಸರ್ಗಿಕ ಅನಿಲ ಶೋಧನೆಯ ಉಸ್ತುವಾರಿ ನಡೆಸುವ ಡೈರೆಕ್ಟೊರೇಟ್ ಆಫ್ ಹೈಡ್ರೋಕಾರ್ಬನ್ಸ್(ಡಿಜಿಹೆಚ್- ಜಲ-ಇಂಗಾಲಗಳ ನಿರ್ದೇಶನಾಲಯ) ಈ ಕುರಿತು ಒಂದು ಅಧ್ಯಯನ ನಡೆಸಲು ಅಂತರ್ರಾಷ್ಟ್ರೀಯ ಖ್ಯಾತಿಯ ತಜ್ಞ ಡಾ.ಪಿ.ಗೋಪಾಲಕೃಷ್ಣನ್ ನೇತೃತ್ವದ ಸಮಿತಿಯೊಂದನ್ನು ರಚಿಸಿತ್ತು. ಅದು 2011ರಲ್ಲೇ ವರದಿ ಒಪ್ಪಿಸಿತ್ತು. ಅದು ಪೆಟ್ರೋಲಿಯಂ ಇಲಾಖೆಯ ಬಳಿ ಆಗಲೇ ಇದೆ. ಕೆಜಿ6 ಯೋಜನೆಯಲ್ಲಿ ಉತ್ಪಾದನೆ ಕಾಂಟ್ರಾಕ್ಟಿಗಿಂತ ಬಹಳ ಕಡಿಮೆ ಇರಲು ಆರ್‌ಐಎಲ್ 'ಮಂಜೂರಾದ ಅಭಿವೃದ್ಧಿ ಯೋಜನೆ'(ಎಡಿಪಿ) ಪ್ರಕಾರ ಅನಿಲ ಬಾವಿಗಳನ್ನು ಕೊರೆಯದಿರುವುದೇ ಕಾರಣ, ಉತ್ಪಾದನೆ ಕಡಿಮೆಯಾಗಲು ಭೂಗರ್ಭಶಾಸ್ತ್ರೀಯ ಅಡ್ಡಿಗಳು ಏನೂ ಇಲ್ಲ ಎಂದು ಆ ವರದಿ ಸ್ಪಷ್ಟವಾಗಿ ಹೇಳಿತ್ತು ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಈ ವರದಿಯನ್ನು ಡಿಜಿಹೆಚ್ ಕೂಡ ಒಪ್ಪಿಕೊಂಡು ಸೂಕ್ತ ಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಿದೆ ಎಂದೂ ತಿಳಿದು ಬಂದಿದೆ. ಹಿಂದಿನ ಪೆಟ್ರೋಲಿಯಂ ಮಂತ್ರಿಗಳು ಈ ಆಧಾರದಲ್ಲಿ ಆರ್‌ಐಎಲ್ ತೋರಿಸಿದ 2011–12 ರ ವರೆಗಿನ ಖರ್ಚುಗಳಲ್ಲಿ 1.5 ಬಿಲಿಯ ಡಾಲರುಗಳಷ್ಟು ಮೊತ್ತವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಕಳೆದ ಮೇ ತಿಂಗಳಲ್ಲಿ ಹೇಳಿದ್ದರು. ಅವರನ್ನು ಈ ಕಾರಣಕ್ಕಾಗಿಯೇ ಆ ಖಾತೆಯಿಂದ ಎತ್ತಂಗಡಿ ಮಾಡಲಾಗಿತ್ತು ಎಂಬ ಊಹಾಪೋಹ ಆಗ ಉಂಟಾಗಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆರ್‌ಐಎಲ್ ಈ ತಜ್ಞರು ತಜ್ಞರೇ ಅಲ್ಲ ಎಂದೂ ಹೇಳುತ್ತಿದೆಯಂತೆ!

ಇತ್ತೀಚಿನ ಈ ಎಲ್ಲ ಬೆಳವಣಿಗೆಗಳು ಒಟ್ಟು ಚಿತ್ರವನ್ನು ಸ್ಪಷ್ಟಗೊಳಿಸುತ್ತಿವೆ:

* ಈ ಯೋಜನೆಯಲ್ಲಿ ದೇಶದ ಖಜಾನೆಗೆ ಸಲ್ಲಬೇಕಾದ ಮೊತ್ತವನ್ನು ಇಳಿಸಲು ಒಂದೆಡೆ ಖರ್ಚುಗಳನ್ನು ಹಿಗ್ಗಿಸಿ ತೋರಿಸುವ (ಗೋಲ್ಡ್‌ಪ್ಲೇಟಿಂಗ್ ಅಥವ ಚಿನ್ನದ ಲೇಪನ ಎಂದು ಇದನ್ನು ವರ್ಣಿಸಲಾಗಿದೆ), ಆಮೂಲಕ ಸರಕಾರದ ಲಾಬಾಂಶವನ್ನು ಇಳಿಸಿ ಬೊಕ್ಕಸಕ್ಕೆ ವಂಚನೆ ಮಾಡುವ, ಇನ್ನೊಂದೆಡೆ ತಾಂತ್ರಿಕ ಕಾರಣಗಳ ನೆವ ಹೂಡಿ ಉತ್ಪಾದನೆಯನ್ನು ಇಳಿಸಿ ಸರಕಾರದಿಂದ ಹೆಚ್ಚಿನ ದರ ಕೀಳುವ ತಂತ್ರ.
* ಮುಂದಿನ ಹೆಜ್ಜೆ –ಇದಕ್ಕೆ ಅಡ್ಡಿಯಾದ ಲೆಕ್ಕ ಪರಿಶೋಧನೆಗೇ ಅಡ್ಡಿ, ಮಂತ್ರಿಗಳ ಎತ್ತಂಗಡಿ, ಅನುಕೂಲವಾಗಿ ಇರುವವರ ನೇಮಕ,
* ನೈಸರ್ಗಿಕ ಅನಿಲದ ದರ ಹೆಚ್ಚಿಸಿಕೊಳ್ಳುವ ತಂತ್ರ

ಈ ಹಿನ್ನೆಲೆಯಲ್ಲಿ, ಕಳೆದ ವರ್ಷ ಯುಪಿಎ–2 ಸರಕಾರವೇ ಆರ್‌ಐಎಲ್‌ಗೆ 1 ಬಿಲಿಯ ಡಾಲರುಗಳ ದಂಡ ವಿಧಿಸಿತ್ತು, 2012–13ಕ್ಕೆ ಇದು 1.8 ಬಿಲಿಯ ಆಗುತ್ತದೆ ಎಂದು ಸ್ವತಃ ಜಲ–ಇಂಗಾಲಗಳ ನಿರ್ದೇಶನಾಲಯ ಲೆಕ್ಕ ಹಾಕಿದೆ. ಉತ್ಪಾದನೆಯಲ್ಲಿ ಕಡಿತ ಮುಂದುವರೆಯುತ್ತಲೇ ಇರುವುದರಿಂದ ಪ್ರಸಕ್ತ ವರ್ಷಕ್ಕೆ ಇದು 2.4 ಬಿಲಿಯ ಡಾಲರುಗಳಾಗುತ್ತದೆ, ಈ ಬಗ್ಗೆ ಪೆಟ್ರೋಲಿಯಂ ಇಲಾಖೆ ಆರ್‌ಐಎಲ್‌ಗೆ ನೋಟೀಸ್ ಕಳಿಸುವಂತೆ ಆದೇಶಿಸಬೇಕು ಎಂದು ಸಿಪಿಐ ಸಂಸದ ಗುರುದಾಸ್ ದಾಸ್‌ಗುಪ್ತ ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಆಗ್ರಹಿಸಿದ್ದಾರೆ.

ನೈಸರ್ಗಿಕ ಅನಿಲ ನಿಕ್ಷೇಪಗಳು ಒಂದು ರಾಷ್ಟ್ರೀಯ ಆಸ್ತಿ, ಸರಕಾರ ಮತ್ತು ಒಬ್ಬ ಗುತ್ತಿಗೆದಾರ (ಆರ್‌ಐಎಲ್)ನ ನಡುವೆ ಆಗಿರುವ ಒಂದು ಮಂಜೂರಾದ ಕ್ಷೇತ್ರ ಅಭಿವೃದ್ಧಿ ಯೋಜನೆ ಮತ್ತು ಲಾಭ ಹಂಚಿಕೆ ಯೋಜನೆಯ ಪ್ರಕಾರ ಗುತ್ತಿಗೆದಾರ ಕೆಲಸ ಮಾಡಬೇಕು. ಹಾಗಾಗದಿದ್ದಾಗ, ಪ್ರಧಾನ ಮಂತ್ರಿಗಳು ಈ ವಿಷಯದಲ್ಲಿ ಮಧ್ಯಪ್ರವೇಶಿಸಿ ಸಂಬಂಧಪಟ್ಟ ಗುತ್ತಿಗೆದಾರನನ್ನು ಶಿಸ್ತಿಗೆ ಒಳಪಡಿಸಿ ಈ ಕರಾರುಗಳಂತೆ ಕೆಲಸ ಮಾಡುವಂತೆ ಮಾಡಬೇಕು, ತನ್ನ ವಿಫಲತೆಗಳಿಗೆ ಬೆಲೆ ತೆರುವಂತೆ, ಮತ್ತು ಸಿಎಜಿ ಪರಿಶೋಧನೆಗೆ ತನ್ನನ್ನು ಒಪ್ಪಿಸಿಕೊಳ್ಳುವಂತೆ ಮಾಡಬೇಕು; ಇಲ್ಲವಾದರೆ ಆತನಿಗೆ ವಹಿಸಿಕೊಟ್ಟ ರಾಷ್ಟ್ರೀಯ ಆಸ್ತಿಯನ್ನು ಹಿಂದಕ್ಕೆ ಪಡೆದು ಸರಕಾರೀ ಒಡೆತನದ ಕಂಪನಿಯ ನೇರವಾದ ಹತೋಟಿಯಲ್ಲಿ ಅದನ್ನು ಅಭಿವೃದ್ಧಿ ಪಡಿಸಬೇಕು. ಇದಲ್ಲದೆ ಬೇರೆ ಆಯ್ಕೆಯಿಲ್ಲ ಎಂದು ಸಿಪಿಐ(ಎಂ) ಸಂಸದ ತಪನ್ ಸೇನ್ ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ. ದೇಶಪ್ರೇಮಿಗಳೆಲ್ಲರೂ ಇದನ್ನು ಒಪ್ಪುತ್ತಾರೆ. ಆದರೆ ಯುಪಿಎ–2 ಪ್ರಧಾನ ಮಂತ್ರಿಗಳು?

ಈ ಸಂದರ್ಭದಲ್ಲಿ ಈ ಹಿಂದೆ ಭಾರತ ಸರಕಾರಕ್ಕೆ ವಿದ್ಯುತ್ ಮತ್ತು ಇಂಧನಮೂಲಗಳ ವಿಷಯದಲ್ಲಿ ಮುಖ್ಯ ಸಲಹೆಗಾರರಾಗಿದ್ದ, ಈಗ ಈ ಕ್ಷೇತ್ರದಲ್ಲಿ ಅಧ್ಯಯನ-ಅಧ್ಯಾಪನದಲ್ಲಿ ತೊಡಗಿರುವ ಸೂರ್ಯ ಪಿ.ಸೇಥಿಯವರ ಇತ್ತೀಚಿನ ಒಂದು ಟಿಪ್ಪಣಿ ಗಮನಾರ್ಹ.

ಯುಪಿಎ–2 ಸರಕಾರ ನೈಸರ್ಗಿಕ ಅನಿಲದ ದರಗಳನ್ನು ಏರಿಸಿದಾಗ ಅದನ್ನು ವಿರೋಧಿಸಿ ಸೇಥಿಯವರು 'ಹಿಂದೂ' ದೈನಿಕದಲ್ಲಿ ನಾಲ್ಕು ಲೇಖನಗಳನ್ನು ಬರೆದರು. ಈ ಬಗ್ಗೆ ಮತ್ತೆ ಕಳೆದ ವಾರ ಬರೆದ ಇನ್ನೊಂದು ಲೇಖನದಲ್ಲಿ ಅವರು ಹೀಗೆ ಬರೆದಿದ್ದಾರೆ:

"ಡಾ.ರಂಗರಾಜನ್ ಪ್ರಸ್ತಾವಿಸಿದ ನೈಸರ್ಗಿಕ ಅನಿಲ ಬೆಲೆ ನಿಗದಿಸೂತ್ರದ ಪರವಾದ ತರ್ಕಗಳನ್ನು ಯಾರೂ ಒಪ್ಪದಿರುವುದರಿಂದ ಅಧಿಕಾರಸ್ಥರು ತಮ್ಮ ಬತ್ತಳಿಕೆಯಲ್ಲಿನ ಅತೀ ಮಾರಕ ಅಸ್ತ್ರವನ್ನೇ ಹೊರತೆಗೆದರು–ಸ್ವತಃ ಮಾನ್ಯ ಮಂತ್ರಿಗಳೇ ನನ್ನಂತಹ ಅಪನಂಬಿಕೆಯವರನ್ನು ಮುಗಿಸಿ ಬಿಡಲು ಲೇಖಣಿ ಹಿಡಿದರು. ದುರದೃಷ್ಟವಶಾತ್, ಆಗಸ್ಟ್ 7, 2013ರಂದು ಟೈಂಸ್ ಆಫ್ ಇಂಡಿಯಾದಲ್ಲಿ ಪ್ರಕಟವಾದ ಅವರ ಲೇಖನದ ಕೆಲವು ಹೇಳಿಕೆಗಳು ನೇರವಾಗಿ ರಿಲಯಂಸ್ ಕಂಪನಿಯ ಇತ್ತೀಚಿನ ವರದಿಯಿಂದ ಬಂದವುಗಳು"!

ಜಗದಗಲ

ಶರತ್‌ಚಂದ್ರ

ಬ್ರೆಜಿಲಿಗೂ ಇಂಡಿಯಾಕ್ಕೂ ಏನು ವ್ಯತ್ಯಾಸ ?!

ಬ್ರೆಜಿಲಿಗೂ ಇಂಡಿಯಾಕ್ಕೂ ಸಾಮ್ಯಗಳೇ ಹೆಚ್ಚು. ಅಭಿವೃದ್ಧಿ ಹೊಂದುತ್ತಿರುವ ತಮ್ಮ ಖಂಡದ ಅತಿ ದೊಡ್ಡ ದೇಶಗಳು. ಆರ್ಥಿಕ, ವಿಜ್ಞಾನ-ತಂತ್ರಜ್ಞಾನ, ಕೈಗಾರಿಕೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಿರುವ ಮೂರನೇ ಜಗತ್ತಿನ ದೇಶಗಳು. ಅಂತರ‍್ರಾಷ್ಟ್ರೀಯ ರಂಗದಲ್ಲಿ ಬಹುಧ್ರುವೀಯ ವ್ಯವಸ್ಥೆಗೆ ಕಟಿಬದ್ಧವಾಗಿರುವ 'ಬ್ರಿಕ್ಸ್' ಎಂಬ ಕೂಟದ ಸದಸ್ಯ ದೇಶ ಇತ್ಯಾದಿ ಪಟ್ಟಿ ಮಾಡುತ್ತಾ ಹೋಗಬಹುದು. ಆದರೆ ವ್ಯತ್ಯಾಸ ಏನು ಎಂದು ಹುಡುಕುವುದು ಕಷ್ಟ ಎನ್ನಬಹುದು ಯಾರಾದರೂ. ಆದರೆ ಇತ್ತೀಚೆಗೆ ಬ್ರೆಜಿಲ್ ಅಧ್ಯಕ್ಷೆ ದಿಲ್ಮಾ ರೂಸೆಫ್ ಮತ್ತು ಮನಮೋಹನ್ ಸಿಂಗ್ ಏನು ವ್ಯತ್ಯಾಸ ಎಂದು ಯಾರಿಗೂ ಸಂಶಯ ಇಲ್ಲದಂತೆ ಮನದಟ್ಟು ಮಾಡಿದ್ದಾರೆ.

ಮಿತ್ರದೇಶಗಳೂ ಸೇರಿದಂತೆ ಜಗತ್ತಿನ ಹಲವು ಸರ್ಕಾರಗಳ ರಾಯಭಾರ ಕಚೇರಿ, ಸರ್ಕಾರಿ ಅಧಿಕಾರಿಗಳು ಮತ್ತು ನಾಯಕರ ಮೇಲೂ ಅಮೆರಿಕ ಗೂಢಚರ್ಯೆ ನಡೆಸುತ್ತಿತ್ತು. ಇದಕ್ಕೂ ಭಯೋತ್ಪಾದನೆಗೂ ಏನೂ ಸಂಬಂಧವಿರಲಿಲ್ಲ. ಇದು ರಾಜಕೀಯ, ಕಮರ್ಶಿಯಲ್ ಕಾರಣಗಳಿಗೆ ಆಗಿತ್ತು ಎಂಬುದನ್ನು ಇತ್ತೀಚೆಗೆ ಪುರಾವೆ ಸಮೇತ ಸ್ನೋಡೆನ್ ಬಹಿರಂಗ ಪಡಿಸಿದ.



ಸ್ನೋಡೆನ್ ಒದಗಿಸಿದ ಮಾಹಿತಿಗೆ ಎರಡೂ ದೇಶಗಳ ಪ್ರತಿಕ್ರಿಯೆಯೇ ಈ ದೊಡ್ಡ ವ್ಯತ್ಯಾಸ. ಬ್ರೆಜಿಲ್ ಅಧ್ಯಕ್ಷೆ ದಿಲ್ಮಾ ರೂಸೆಫ್ ಈ ಸುದ್ದಿ ಗೊತ್ತಾಗುತ್ತಿದ್ದಂತೆ ರಾಯಭಾರಿ ಮೂಲಕ ಮಾತ್ರವಲ್ಲ ಸಾರ್ವಜನಿಕವಾಗಿಯೂ ಇದಕ್ಕೆ ತೀಕ್ಷ್ಣ ಪ್ರತಿಭಟನೆ ಸಲ್ಲಿಸಿ ಇದನ್ನು ತಕ್ಷಣ ನಿಲ್ಲಿಸಬೇಕೆಂದು ಒತ್ತಾಯ ಮಾಡಿದ್ದಾರೆ. ಮಾತ್ರವಲ್ಲ ತೀವ್ರ ಪ್ರತಿಭಟನೆಯ ಪ್ರತೀಕವಾಗಿ ಸೆಪ್ಟೆಂಬರ್‌ನಲ್ಲಿ ಅಮೆರಿಕದ ಭೇಟಿ ಮತ್ತು ಅಧ್ಯಕ್ಷ ಒಬಾಮ ಜತೆ ನಡೆಯಬೇಕಾಗಿದ್ದ ಸಭೆಯನ್ನು ಮುಂದಕ್ಕೆ ಹಾಕಿದ್ದಾರೆ. ಇಷ್ಟು ಮಾತ್ರವಲ್ಲ. ಬ್ರೆಜಿಲಿನ ಸರ್ಕಾರದ ಸಾರ್ವಜನಿಕ ಮತ್ತು ಪ್ರಮುಖ ಕಂಪನಿಗಳ ಇಲೆಕ್ಟ್ರಾನಿಕ್ ಸಂಪರ್ಕ ಮಾಹಿತಿ ಇರುವ ಕಂಪ್ಯೂಟರ್ ಸರ್ವರುಗಳನ್ನು ಅಮೆರಿಕದಿಂದ(ಅಥವಾ ಅಮೆರಿಕನ್ ಕಂಪನಿಗಳಿಂದ) ಬಿಡಿಸಿ ಬ್ರೆಜಿಲಿಗೆ (ಅಥವಾ ಬ್ರೆಜಿಲಿನ ಕಂಪನಿಗಳಿಗೆ) ವರ್ಗಾಯಿಸಲು ಕ್ರಮಕೈಗೊಂಡಿದ್ದಾರೆ. ಅಧ್ಯಕ್ಷ ಒಬಾಮ 'ಸಾರಿ' ಎಂದಾದರೂ ಹೇಳಬೇಕಾಯಿತು.

ಇಂಡಿಯಾದ ಪ್ರತಿಕ್ರಿಯೆ ಏನಾಗಿತ್ತು ? ಮೊದಮೊದಲಿಗೆ ದಿವ್ಯ ಮೌನವಾಗಿತ್ತು. ಆದರೆ ಮಾಧ್ಯಮಗಳ ಸತತ ಪ್ರಶ್ನೆಗೆ ಉತ್ತರವಾಗಿ ವಿದೇಶ ಮಂತ್ರಿ ಇವೆಲ್ಲಾ ಮಾಮೂಲಿ ಎಲ್ಲಾರೂ ಮಾಡುವ ವಿದೇಶೀ ಗೂಢಚರ್ಯೆ. ನಮ್ಮ ರಾಯಭಾರ ಕಚೇರಿಗಳೂ, ಸರ್ಕಾರಿ ಮಾಹಿತಿಗಳು ಭದ್ರವಾಗಿವೆ ಎಂದು ಹೇಳಿ ಜಾರಿಕೊಂಡರು. ಪ್ರಧಾನಿ ಎಂದಿನಂತೆ ತುಟಿ ಬಿಚ್ಚಲಿಲ್ಲ. ಅಮೆರಿಕದ ಭೇಟಿ ಮತ್ತು ಅಧ್ಯಕ್ಷ ಒಬಾಮ ಜತೆ ಸಭೆ ರದ್ದು ಮಾಡುವುದು ಒತ್ತಟ್ಟಿಗಿರಲಿ. ಈ ಭೇಟಿಗೆ ಮೊದಲು ಒಬಾಮ ಕೊಟ್ಟಿದ್ದ 'ಹೋಂ ವರ್ಕ್' ಮಾಡಲು ಅತ್ಯಂತ ಹೇಸಿಗೆಯ ತರಾತುರಿ ತೋರಿದರು. ಭಾರತದ ಕಾನೂನು ನಿಯಮಗಳನ್ನು ಗಾಳಿಗೆ ತೂರಿ ಅಮೆರಿಕದ ಕಂಪನಿ ವೆಸ್ಟಿಂಗ್‌ಹೌಸ್‌ಗೆ ಅಣು ವಿದ್ಯುತ್ ರಿಯಾಕ್ಟರುಗಳ ಆರ್ಡರು ಕೊಡಿಸುವುದು ಒಬಾಮ 'ಹೋಂ ವರ್ಕ್'.

ಈಗ ಮಾತ್ರವಲ್ಲ ಹಿಂದೆನೂ ಅಮೆರಿಕದ 'ದೊಡ್ಡಣ್ಣ ನೀತಿ' ವಿರುದ್ಧ ಸತತವಾಗಿ ಪ್ರತಿ-ರೋಧ ಒಡ್ಡಿದೆ. ಲ್ಯಾಟಿನ್ ಅಮೆರಿಕದ ದೇಶಗಳ ಕೂಟ ಕಟ್ಟಿ ಅದರ ನಾಯಕನಾಗಿ ಮಾತ್ರವಲ್ಲ, ಒಂದು ದೇಶವಾಗಿ ಕೂಡಾ. ಮೂರನೇ ಜಗತ್ತಿನ ಕೆಲವು ದೇಶಗಳ (ಇಂಡಿಯಾ, ಬ್ರೆಜಿಲ್ ಸೇರಿದಂತೆ) ನಾಗರಿಕರು ಅಮೆರಿಕ ಪ್ರವೇಶಿಸುವಾಗ ಬೆರಳಚ್ಚು ಕೊಡುವುದನ್ನು ಅಮೆರಿಕ ಕೆಲವು ವರ್ಷಗಳ ಹಿಂದೆ ಕಡ್ಡಾಯ ಮಾಡಿತ್ತು. ಪ್ರತಿಭಟನೆಯಾಗಿ ಅಮೆರಿಕದ ನಾಗರಿಕರಿಗೆ ತಮ್ಮ ದೇಶ ಪ್ರವೇಶಿಸುವಾಗ ಬೆರಳಚ್ಚು ಕೊಡುವುದನ್ನು ಕಡ್ಡಾಯ ಮಾಡಿದ ಒಂದೇ ದೇಶ ಬಹುಶಃ ಬ್ರೆಜಿಲ್.

ಮಹಿಳೆಯರ ಅಭಿವೃದ್ಧಿ....

ಪುಟ 9 ರಿಂದ

ನನ್ನ ಗಂಡ ಅಥವ ಮಗನನ್ನಲ್ಲ. ಸಭೆ ಆರಂಭಿಸಿ' ಎಂದು ಹೇಳಿ ಎಲ್ಲರ ಬಾಯಿ ಮುಚ್ಚಿಸಿದ ದಿಟ್ಟೆ ಶೋಭಾ ರಾಣಿ. ಗುಲ್ಬರ್ಗಾ ವಿಶ್ವದ್ಯಾಲಯದಲ್ಲಿ ಎಂಎಸ್‌ಡಬ್ಲ್ಯು ಕೋರ್ಸಿಗೆ ಪ್ರವೇಶ ಕೇಳಿ ಹೋದಾಗ ಎರಡು ಆರೆ ಪೋಲಿಯೋ ಪೀಡಿತ ಕಾಲು-ಕೈಗಳನ್ನು ನೋಡಿದ ವಿಭಾಗದ ಮುಖ್ಯಸ್ಥರು ನಿರಾಕರಿಸಿದ ಸಂದರ್ಭದಲ್ಲಿ ಅಂಗವಿಕಲರ ಒಕ್ಕೂಟದ ಸಹಾಯದಿಂದ ಪ್ರವೇಶ ಪಡೆದು, ಕೊಪ್ಪಳ ಜಿಲ್ಲೆಯ 775 ಹಳ್ಳಿಗಳನ್ನು ಸುತ್ತಾಡಿ ಕ್ಷೇತ್ರಕಾರ್ಯ ಅಧ್ಯಯನವನ್ನು ಯಶಸ್ವಿಯಾಗಿ ಮಾಡಿ ಸೋಷಿಯಲ್ ವರ್ಕ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದು, ಪ್ರಸ್ತುತ ಬೆಂಗಳೂರಿನ ಮಹಿಳಾ ಅಭಿವೃದ್ಧಿ ನಿಗಮದಲ್ಲಿ ಉದ್ಯೋಗಿಯಾಗಿ ಮಾದರಿ ಜೀವನ ನಡೆಸುತ್ತಿರುವವರು ಪೂರ್ಣಿಮಾ.

ಮಳವಳ್ಳಿ ತಾಲ್ಲೂಕಿನ ಬೂಗತಹಳ್ಳಿಯ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಊರಿನ ಹಿರಿಯರ ಅಭಿಪ್ರಾಯದ ವಿರುದ್ಧ ಸ್ಪರ್ಧಿಸಿದ್ದನ್ನು ಹಾಗು ತನ್ನೂರಿನ ಮಹಿಳೆಯರಿಗೆ ಉದ್ಯೋಗ ಖಾತ್ರಿ ಯೋಜನೆ ಕೆಲಸವನ್ನು ಕೊಡಿಸಿದ್ದನ್ನು ಸಹಿಸದ ಊರಿನ ಸ್ವಜಾತಿ ಮುಖಂಡರು ಜನವಾದಿಯ ಮಳವಳ್ಳಿ ತಾಲ್ಲೂಕಿನ ಕಾರ್ಯದರ್ಶಿ ಸುಶೀಲಾರಿಗೆ ಕಿರುಕುಳಗಳನ್ನು ನೀಡಿ ಜಾತಿ ಬಹಿಷ್ಕಾರ ಹಾಕಿದಾಗ ಊರ ಹಬ್ಬದಲ್ಲಿ ಭಾಗವಹಿಸಲು ಅವರ ಗಂಡನಿಂದ ತಪ್ಪೊಪ್ಪಿಗೆ ಹೇಳಿಕೆ ಮತ್ತು 201 ರೂ.ಗಳ ದಂಡ ಪಡೆದು-ಕೊಂಡಾಗ ಸ್ಥಳೀಯ ಪೋಲೀಸ್ ಠಾಣೆಯಲ್ಲಿ ದೂರು ನೀಡಿ ದಂಡದ ಹಣ ವಾಪಸ್ ಮಾಡುವಂತೆ ಮತ್ತು ಊರಿನ ಹಿರಿಯರು ಕ್ಷಮೆ ಕೋರುವಂತೆ ಮಾಡಿದವರು ಸುಶೀಲ.

ಈ ಮೂವರು ಹೋರಾಟಗಾರ್ತಿಯರನ್ನು ಸಮ್ಮೇಳನದ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ನೂತನ ಸಮಿತಿ:

ಅಧ್ಯಕ್ಷೆ: ಗೀತಾ. ವಿ.

ಉಪಾಧ್ಯಕ್ಷರುಗಳು:
- ಗೌರಮ್ಮ
- ಕೆ. ನೀಲಾ
- ಕೆ.ಎಸ್. ವಿಮಲ
- ಮೀನಾಕ್ಷಿ ಬಾಳಿ
- ಸುರೇಖಾ ರಜಪೂತ್

ಪ್ರಧಾನ ಕಾರ್ಯದರ್ಶಿ:
- ಕೆ.ಎಸ್. ಲಕ್ಷ್ಮಿ


ಸಹ ಕಾರ್ಯದರ್ಶಿಗಳು
- ಶಾರದಾ ಕೆ.ಎಸ್.
- ದೇವಿ
- ಸುಜಾತ
- ಮೀನಾ ಬೊರಾಳ್‌ಕರ್
- ಕಿರಣ ಪ್ರಭ

ಖಜಾಂಜಿ: ಸುನಂದ

ಜಮ್ಮು-ಕಾಶ್ಮೀರದಲ್ಲಿ ಭಯೋತ್ಪಾದನಾ ಧಾಳಿ ಹತ್ತು ಜೀವಗಳ ಬಲಿ- ಸಿಪಿಐ(ಎಂ) ತೀವ್ರ ಖಂಡನೆ

ಜಮ್ಮು ಕಾಶ್ಮೀರದಲ್ಲಿ ಹತ್ತು ಜೀವಗಳನ್ನು ಬಲಿತೆಗೆದುಕೊಂಡ ಭೀಕರವಾದ ಭಯೋತ್ಪಾದನಾ ಧಾಳಿ ನಡೆದಿದೆ. ಭಾರೀ ಶಸ್ತ್ರಸಜ್ಜಿತರಾದ ಮೂವರು ಭಯೋತ್ಪಾದಕರು ರಕ್ಷಣಾ ಬೇಲಿಯ ಭದ್ರಕೋಟೆಯನ್ನು ಬಹಳ ಸುಲಭವಾಗಿ ದಾಟಿ ಪೋಲಿಸ್ ಠಾಣೆಯ ಮೇಲೆ ಮನಸ್ಸಿಗೆ ತೋಚಿದಂತೆ ಗುಂಡುಹಾರಿಸಿದ್ದಾರೆ. ಅವರು ಮತ್ತೂ ಮುಂದುವರಿದು ಭೂಸೇನೆಯ ನೆಲೆಯೊಂದರ ಮೇಲೆ ಧಾಳಿ ನಡೆಸಿದ್ದಾರೆ. ಈ ರೀತಿಯಾಗಿ ಭಯೋತ್ಪಾದಕ ದಾಳಿ ನಡೆಸಲು ಸಾಧ್ಯವಾಗಿರುವುದು ನಮ್ಮ ಭದ್ರತಾ ವ್ಯವಸ್ಥೆಯಲ್ಲಿನ ಗಂಭೀರವಾದ ಲೋಪವನ್ನು ಎತ್ತಿತೋರಿಸುತ್ತದೆ. ಈ ಧಾಳಿಯನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ.

ಪ್ರಧಾನಿ ಮನಮೋಹನ್ ಸಿಂಗ್ ಅವರು ಮುಂಬರುವ 'ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ'ಯಲ್ಲಿ ಪಾಕಿಸ್ತಾನದ ಪ್ರಧಾನಿ ಪರ್ವೆಜ್ ಮುಶ್ರಫ್ ರೊಂದಿಗೆ ಈ ವಿಷಯವನ್ನು ಒತ್ತಾಯ ಪೂರ್ವಕವಾಗಿಯಾದರೂ ಪ್ರಸ್ತಾಪಿಸಬೇಕಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಒತ್ತಾಯಿಸಿದೆ.



ಮನೆ ನಿರ್ಮಿಸಿಕೊಳ್ಳುವ ಜನಸಾಮಾನ್ಯರನ್ನು ಸುಲಿಯುವ 'ಮರಳು ನೀತಿ'

ರಾಜ್ಯದಲ್ಲಿ ಹಿಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದು, ಈಗಿನ ಕಾಂಗ್ರೆಸ್ ಸರ್ಕಾರವು ಮುಂದುವರಿಸುತ್ತಿರುವ 'ನೂತನ ಮರಳು ನೀತಿ'ಯು ಮನೆ ನಿರ್ಮಿಸಿಕೊಳ್ಳುವ ಜನಸಾಮಾನ್ಯರ ಹಿತ ಕಾಯುವಲ್ಲಿ ವಿಫಲವಾಗಿದೆ. ಬದಲಾಗಿ ಮರಳು ಮಾಫಿಯಾಗಳಿಗೆ ಸಹಕಾರಿಯಾಗಿದ್ದು ಜನರನ್ನು ಸುಲಿಯಲಾಗುತ್ತಿದೆ ಎಂದು ಸಿಪಿಐ(ಎಂ) ಗಜೇಂದ್ರಗಡ ನಗರ ಶಾಖೆ ಗಂಭೀರವಾಗಿ ಟೀಕಿಸಿದೆ.

ನೂತನ ಮರಳು ನೀತಿಯ ಪ್ರಕಾರ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಗುರುತಿಸಿ ಅನುಮೋದಿಸಿದ ಜಾಗೆಯಲ್ಲಿ ಲೋಕೋಪಯೋಗಿ ಇಲಾಖೆಯವರು ಗಣಿಗಾರಿಕೆಗೆ ಟೆಂಡರ್ ಕರೆದು ಗುತ್ತಿಗೆದಾರರಿಗೆ ಮರಳು ಗಣಿಗಾರಿಕೆಗೆ ಅವಕಾಶ ನೀಡಲಾಗುತ್ತಿದೆ. ಅದರಂತೆ ರೋಣ ತಾಲೂಕಿನಲ್ಲಿ ತಳ್ಳಿಹಾಳ, ಹೊನ್ನಿಗನೂರ, ಗುಳುಗುಳಿ, ಎರೆಕುರುಬನಾಳ ಗ್ರಾಮಗಳ ವ್ಯಾಪ್ತಿಯಲ್ಲಿ ಮಲಪ್ರಭ ನದಿಯ ಬಾಗದಲ್ಲಿ ಒಟ್ಟು 50 ಮರಳಿನ ಬ್ಲಾಕ್‌ಗಳನ್ನು ಮಾಡಿದ್ದು, ಹೊನ್ನಿಗನೂರ ಮತ್ತು ಗುಳುಗಳಿಯ ಗ್ರಾಮದ ಹತ್ತಿರ ಮರಳಿನ ಸ್ಟಾಕ್‌ಯಾರ್ಡ್ ನಿರ್ಮಿಸಲಾಗಿದೆ.

ಮರಳಿನ ಮೇಲೆ ಸರ್ಕಾರ ವಿಧಿಸಿದ ರಾಜಸ್ವ ನಿಧಿ ಅನ್ಯಾಯದಿಂದ ಕೂಡಿದೆ. ಒಂದು ಕ್ಯೂಬಿಕ್ ಮೀಟರ್ ಮರಳಿಗೆ 300/ರೂಗಳನ್ನು ನಿಗದಿಪಡಿಸಲಾಗಿದೆ. ಸಾಮಾನ್ಯವಾಗಿ ಒಂದು ಟ್ರ್ಯಾಕ್ಟರ್ ಮೂರು ಕ್ಯೂಬಿಕ್ ಮೀಟರ್ ಮರಳನ್ನು ಸಾಗಿಸುತ್ತದೆ. ಅಂದರೆ ಒಂದು ಟ್ರ್ಯಾಕ್ಟರ್ ಮರಳಿಗೆ 900/ರೂಗಳನ್ನು ಲೋಕೋಪಯೋಗಿ ಇಲಾಖೆಯವರು ನಿಗದಿಪಡಿಸಿರುತ್ತಾರೆ. ಅದು ದೂರದ ಸಂಗ್ರಹಾಸ್ಥಳದಿಂದ ಗಜೇಂದ್ರಗಡದಂತಹ ನಗರಕ್ಕೆ ಬಂದು ಇಳಿಯಲು 1500/-ರೂಗಳಿಂದ 2000/ ಸಾವಿರ ರೂ.ಗಳ ಖರ್ಚು ತಗುಲುತ್ತದೆ. ಇದರಿಂದ ಮರಳು ಗಣಿಗಾರಿ- ಕೆ ಮಾಡುವವರಿಗೆ ಹೆಚ್ಚಿನ ಲಾಭವಿದೆಯೇ ಹೊರತು ಮನೆ ನಿರ್ಮಿಸಿಕೊಳ್ಳುವವರು ಸುಲಿಗೆಗೆ ಒಳಗಾಗುತ್ತಿದ್ದಾರೆ ಎಂದು ತೀವ್ರ ಅಸಮಾದಾನ ವ್ಯಕ್ತಪಡಿಸಿದೆ.

ಲಕ್ಷಾಂತರ ಬೆಲೆಬಾಳುವ ಒಂದು ಟನ್ ಮ್ಯಾಂಗನೀಸ್ ಅದಿರಿಗೆ ಸರ್ಕಾರ ರಾಜಸ್ವ ನಿಧಿಯಾಗಿ ಕೇವಲ 500/- ರೂ.ಗಳನ್ನು ಮಾತ್ರ ವಸೂಲಿ ಮಾಡುತ್ತದೆ. ಈ ಮೊದಲೆ ಮನೆ ನಿರ್ಮಾಣಕ್ಕೆ ಬೇಕಾದ ಕಬ್ಬಿಣ, ಸಿಮೆಂಟ್ ಮತ್ತು ಇಟ್ಟಂಗಿಯಂತ ಕಚ್ಚಾ ವಸ್ತುಗಳ ಬೆಲೆ ತೀವ್ರವಾಗಿ ಏರಿಕೆಯಾಗಿದೆ. ಇಂತಹ ಸ್ಥಿತಿಯಲ್ಲಿ ಮರಳಿನ ಬೆಲೆ ಹೆಚ್ಚಿಸಿರುವುದು ಅವೈಜಾನಿಕವಾಗಿದ್ದು, ಜನತೆಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಎಂದು ಪಕ್ಷ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಇದನ್ನೇ ನೆಪವಾಗಿ ಇಟ್ಟುಕೊಂಡು ಕೆಲವು ಗುತ್ತಿಗೆದಾರರು ಸ್ವಂತಕ್ಕೆ ಟ್ರ್ಯಾಕ್ಟರ್ ಹೊಂದಿ ನಗರದ ಸುತ್ತಮುತ್ತಲಿನ ಹಳ್ಳಗಳಲ್ಲಿ ದೊರೆಯುವ ಮರಳನ್ನು ಕಾನೂನಿನ ಕಣ್ಣು ತಪ್ಪಿಸಿ ರಾತ್ರೋರಾತ್ರಿ ಮರಳು ಹೇರಿ ಬಾರಿ ದುಬಾರಿ ಬೆಲೆಗೆ ಮಾರಿಕೊಳ್ಳುತ್ತಿದ್ದಾರೆ. ಇಂತವರನ್ನು ಹಿಡಿದು ಶಿಕ್ಷಿಸಬೇಕಾದ ನಗರದ ಪೋಲಿಸರು ಲಂಚವನ್ನು ಪಡೆದು ಸುಮ್ಮನೆ ಬಿಡುತ್ತಿದ್ದಾರೆ. ಮರಳು ಕಳ್ಳ ಸಾಗಣೆಯಿಂದ ಹೆಚ್ಚಿನ ಲಾಭ ಇದೆ ಎಂದು ತಿಳಿದ ಪೋಲೀಸರು ಅತಿ ಹೆಚ್ಚಿನ ಲಂಚಕ್ಕೆ ಪೀಡಿಸುತ್ತಿದ್ದಾರೆ. ಇದರಿಂದ ಕೆರಳಿರುವ ಮರಳು ಕಳ್ಳ ಸಾಗಣಿಕೆದಾರರು ಪೋಲಿಸರನ್ನು ಗುರಿಯಾಗಿಟ್ಟುಕೊಂಡು ಮಾಜಿ ಸಚಿವರ ನೇತೃತ್ವದಲ್ಲಿ ಪ್ರತಿಭಟನೆಗೆ ಮುಂದಾಗುತ್ತಿರುವುದು ವಿಪರ್ಯಾಸವೆಂದು ಪಕ್ಷ ಭಾವಿಸಿದೆ. ಇಂತಹ ಪ್ರತಿಭಟನೆಯಿಂದ ಮರಳು ಮಾಫಿಯಾದ ಹಿತಕಾಯಬಹುದೇ ವಿನಹ ಸಾಮಾನ್ಯ ಜನರದ್ದಲ್ಲ ಎಂದು ಅದು ಅಭಿಪ್ರಾಯಪಟ್ಟಿದೆ.

ಗಜೇಂದ್ರಗಡ ನಗರದಲ್ಲಿ ಕಟ್ಟಡ ಕಾಮಗಾರಿಗಳು ಹೆಚ್ಚು ಪ್ರಗತಿಯಲ್ಲಿ ಇದ್ದು, ಕಾರಣ ನಗರದಲ್ಲಿಯೇ ಮರಳು ಸ್ಟಾಕ್‌ಯಾರ್ಡ್ ತೆರೆಯಬೇಕು, 1 ಕ್ಯೂಬಿಕ್ ಮೀಟರ್ ಮರಳಿನ ಬೆಲೆಯನ್ನು 300 ರೂಗಳ ಬದಲಿಗೆ 100 ರೂ.ಗಳಿಗೆ ಮಾತ್ರ ಸೀಮಿತಗೊಳಿಸಬೇಕು. ನಗರದ ಸುತ್ತಮುತ್ತಲಿನ ಹಳ್ಳಗಳ ಮರಳು ಪರಿ- ಕ್ಷೆ ನಡೆಯಿಸಿ ಮರಳು ಬ್ಲಾಕ್ ಸ್ಥಾಪಿಸಬೇಕು. ಮರಳು ಸಾಗಣೆ ದಂಧೆಯಲ್ಲಿ ತೊಡಗಿರುವ ವಾಹನಗಳಿಗೆ ಲೈಸೆನ್ಸ್ ಕಡ್ಡಾಯಗೊಳಿಸಬೇಕು. ಮರಳು ನೀತಿಯ ಕುರಿತು ತಹಶೀಲ್ದಾರ ನೇತೃತ್ವದಲ್ಲಿ ನಾಗರಿಕರು, ಸಂಘಸಂಸ್ಥೆಗಳು ಮತ್ತು ಸಂಬಂಧಿಸಿದ ಇಲಾಖಾ ಮುಖ್ಯಸ್ಥರನ್ನೊಳಗೊಂಡ ಸಭೆ ನಡೆಯಿಸಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಒಟ್ಟಿನಲ್ಲಿ ಮನೆ ನಿರ್ಮಿಸಿಕೊಳ್ಳುವ ಸಾಮಾನ್ಯ ಜನರ ಹಿತಕಾಯಲು ಬೇಕಾದ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಪಕ್ಷದ ಶಾಖಾ ಕಾರ್ಯದರ್ಶಿ ಮಾರುತಿ ಚಿಟಗಿ, ಪುರಸಭೆ ಸದಸ್ಯ ಎಂ.ಎಸ್.ಹಡಪದ, ಸದಸ್ಯರುಗಳಾದ ಬಾಲು ರಾಠೋಡ, ಬಸವರಾಜ ಶೀಲವಂತರ, ಫೀರು ರಾಠೋಡ, ಮೈಬು ಹವಾಲ್ದಾರ, ರಜಾಕ ಗೋಡೇಕಾರ ಶಿವು ಚವ್ಹಾಣ ಒತ್ತಾಯಿಸಿದ್ದಾರೆ.



'ವ್ಯಕ್ತಿಗಳು ಬದಲಾದ್ರೆ ಪರಿಸ್ಥಿತಿ ಬದಲಾಗೊಲ್ಲ, ಧೋರಣೆಗಳು ಬದಲಾದ್ರೆ ಮಾತ್ರ ......' – ನಿತ್ಯಾನಂದಸ್ವಾಮಿ

ಇಂದು ಕಾಂಗ್ರೆಸ್ ರಾಹುಲ್ ಗಾಂಧಿಯನ್ನು ಬಿಜೆಪಿ ನರೇಂದ್ರ ಮೋದಿಯನ್ನು ಪ್ರಧಾನಿ ಪಟ್ಟಕ್ಕೆ ತಮ್ಮ ಅಭ್ಯರ್ಥಿಗಳೆಂದು ಬಿಂಬಿಸುತ್ತಿವೆ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದಾಗಿನಿಂದಲೂ ಸರಕಾರದ ಆಡಳಿತ ಚುಕ್ಕಾಣಿ ಹಿಡಿದ ನೆಹರೂ ಅವರಿಂದ ಇಲ್ಲಿಯವರೆಗೂ ವ್ಯಕ್ತಿಗಳು ಹಾಗೂ ಪಕ್ಷಗಳು ಬದಲಾಗಿವೆ. ಆದರೆ ಇದರಿಂದ ದೇಶದ ಪರಿಸ್ಥಿತಿ ಉತ್ತಮಗೊಳ್ಳಲಿಲ್ಲ. ಹೀಗಾಗಿ ಆರ್ಥಿಕ ಧೋರಣೆಗಳು ಬದಲಾಗದ ದೇಶ ಪ್ರಗತಿಯೆಡೆ ಸಾಗಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ನಿತ್ಯಾನಂದಸ್ವಾಮಿ ಹೇಳಿದರು.

ಹಾವೇರಿ ನಗರದ ಮುರುಘರಾಜೇಂದ್ರ ಮಠದಲ್ಲಿ ಏರ್ಪಡಿಸಿದ್ದ "ಪರ್ಯಾಯ ಧೋರಣೆಗಳಿಗಾಗಿ ಎಡಪಕ್ಷಗಳ ರಾಜಕೀಯ ಸಮಾವೇಶ"ವನ್ನು ಉದ್ಘಾಟಿಸಿ ಮಾತನಾಡಿದರು.



ದೇಶದಲ್ಲಿ ಇದುವರೆಗೂ ಬಹುಕಾಲ ಆಳ್ವಿಕೆ ಮಾಡಿದ ಕಾಂಗ್ರೆಸ್ ಹಾಗೂ ಬಿಜೆಪಿ ನೇತೃತ್ವದ ಸರಕಾರಗಳ ಆರ್ಥಿಕ ಧೋರಣೆಗಳು ಬೇರೆ ಬೇರೆಯಿಲ್ಲ. ಆ ಪಕ್ಷಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದರು. 90ರ ಅವಧಿಯಲ್ಲಿ ಕಾಂಗ್ರೆಸ್ ಸರಕಾರ ಜಾರಿಗೆ ತಂದ ಉದಾರೀಕರಣ ನೀತಿಗಳನ್ನು ನಂತರ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಹಾಗೇ ಮುಂದುವರೆಸಿಕೊಂಡು ಬಂದಿತು. ಈ ಎರಡೂ ಪಕ್ಷಗಳ ಈ ಉದಾರೀಕರಣ ನೀತಿಗಳ ಫಲವಾಗಿಯೇ ದೇಶದಲ್ಲಿ 20 ವರ್ಷಗಳಲ್ಲಿ ಮೂರು ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು ರೈತರ ಆತ್ಮಹತ್ಯೆಯಲ್ಲ ಸರಕಾರಗಳು ಮಾಡಿದ ರೈತರ ಕೊಲೆ ಎಂದು ಕಿಡಿಕಾರಿದರು.

ಭಾರತದಲ್ಲಿ ಬಂಡವಾಳಗಾರರ ಆಸ್ತಿ 50 ವರ್ಷಗಳಲ್ಲಿ 500 ರಷ್ಟು ಜಾಸ್ತಿಯಾಗಿದೆ. ಸರಕಾರ ಜನಸಾಮಾನ್ಯರ ತೆರಿಗೆ ಹಣ ಬಳಸಿಕೊಂಡು ಬಂಡವಾಳಗಾರರನ್ನು ಬೆಳೆಸಿದೆ. ಬ್ಯಾಂಕ್‌ನಲ್ಲಿಟ್ಟ ಹಣವನ್ನು ಬಂಡವಾಳಶಾಹಿಗಳಿಗೆ ನೀಡಿ ಅದನ್ನು ಮುಳುಗಿಸಿದ್ದಾರೆ. ಅದೇ ಜನಸಾಮಾನ್ಯರು ಮರಳಿ ಬ್ಯಾಂಕ್ ಸಾಲ ಕಟ್ಟದಿದ್ರೆ ಅವರಿಂದ ಜಪ್ತಿ ಮಾಡ್ತಾರೆ. ಅಷ್ಟೇ ಅಲ್ಲದೆ ಶ್ರೀಮಂತರ ತೆರಿಗೆಯನ್ನು ವಸೂಲಿ ಮಾಡಬೇಕಾದ ಸರಕಾರಗಳು ವಸೂಲಿ ಮಾಡದೇ ಪ್ರತಿ ಬಜೆಟನಲ್ಲಿ ಕೋಟಿ ರೂಪಾಯಿಗಳಷ್ಟು ಹಣವನ್ನು ಬಂಡವಾಳಿಗರಿಗೆ ತೆ- ರಿಗೆ ರಿಯಾಯಿತಿ ನೀಡುವ ಸರಕಾರಗಳು ಬಡವರಿಗೆ ಪರೋಕ್ಷ ತೆರಿಗೆ ಜಾಸ್ತಿ ಮಾಡಿ ಸಾಮಾನ್ಯಜನರಿಗೆದ್ರೋಹವೆಸಗುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ಇದುವರೆಗೂ ದೇಶವನ್ನು ಹಿಂಡಿ ಹಿಪ್ಪೆ ಮಾಡಿದ ಬಂಡವಾಳಗಾರರು ಈಗ ಹೊರದೇಶಗಳಲ್ಲಿ ಕೊಳ್ಳೆ ಹೊಡೆಯಲು ಮುಂದಾಗಿದ್ದಾರೆ. ಭಾರತದಲ್ಲಿ 2003 ರಲ್ಲಿ 5000 ಕೋಟಿ ರೂಪಾಯಿಗಳ ಆಸ್ತಿ ಇದ್ದವರ ಸಂಖ್ಯೆ 13 ಆದರೆ 2011 ರಲ್ಲಿ ಅವರ ಸಂಖ್ಯೆ 55ಕ್ಕೇರಿದೆ. ಇದರ ಅರ್ಥವೇನು ಎಂದು ಪ್ರಶ್ನಿಸಿದ ಅವರು ಶ್ರೀಮಂತರು ದಶ, ಶತ ಹಾಗೂ ಸಹಸ್ರ ಕೋಟಿಗಳ ಒಡೆಯರಾದರೆ ಬಡ ಕೂಲಿಕಾರ, ರೈತ ಕಾರ್ಮಿಕರು ಬೀದಿಪಾಲಾಗುತ್ತಿದ್ದಾರೆ. ಅವರು ದೇಶದ ಸಂಪತ್ತನ್ನು ಲೂಟಿ ಹೊಡೆದು ಶ್ರೀಮಂತರಾಗಿದ್ದಾರೆ. ಅದಕ್ಕೆ ಪೂರಕವಾದ ಅವಕಾಶಗಳನ್ನು ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಅನುಸರಿಸಿರುವ ಆರ್ಥಿಕ ನೀತಿಗಳು ಒದಗಿಸಿ ಕೊಟ್ಟಿವೆ. ಸಿಪಿಐ(ಎಂ) ಹಾಗೂ ಎಡಪಕ್ಷಗಳು ಈ ಗಂಭೀರ ಅಪಾಯಗಳ ಕುರಿತು ಹಾಗೂ ಕಾಂಗ್ರೆಸ್ ಹಾಗೂ ಬಿಜೆಪಿಗೆ ಬದಲಿಗೆ ಪರ್ಯಾಯ ಧೋರಣೆಗಳನ್ನು ಜನ ಸಾಮಾನ್ಯರಿಗೆ ತಿಳಿಸುವ ನಿಟ್ಟಿನಲ್ಲಿ ವ್ಯಾಪಕ ಪ್ರಚಾರಾಂದೋಲನ ಹಾಗೂ ಸಮಾವೇಶಗಳನ್ನು ಹಮ್ಮಿಕೊಂಡಿವೆ. ಇದರ ಮುಂದುವರೆದ ಭಾಗವಾಗಿ ಅಕ್ಟೋಬರ್ 08 ರಂದು ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಬೃಹತ್ ರ್‍ಯಾಲಿಯನ್ನು ನಡೆಸಲು ಈಗಾಗಲೇ ಎಡಪಕ್ಷಗಳು ತಯಾರಿ ನಡೆಸಿವೆ ಎಂದರು.

ಸಮಾವೇಶದಲ್ಲಿ ಮುಖ್ಯ ಅಥಿತಿಗಳಾಗಿ ಭಾಗವಹಿಸಿದ್ದ ಜಿಲ್ಲಾ ಸಂಘಟನಾ ಸಮಿತಿಯ ಕಾರ್ಯದರ್ಶಿ ಬಿ.ಎಸ್.ಸೊಪ್ಪಿನ ಹಾಗೂ ಪಕ್ಷದ ಹಿರಿಯ ಮುಖಂಡರಾದ ಕಾಂ: ರುದ್ರಪ್ಪ ಜಾಬೀನ ಹಾಗೂ ಅಧ್ಯಕ್ಷತೆ ವಹಿಸಿದ ಕಾಂ: ಫಕ್ಕೀರಪ್ಪ ಹೋತನಹಳ್ಳಿ ಮಾತನಾಡಿದರು. ಪ್ರಾಸ್ತಾವಿಕವಾಗಿ ಜಿ.ಸಂ.ಸಮಿತಿ ಸದಸ್ಯ ನಾರಾಯಣ ಕಾಳೆ ಮಾತನಾಡಿದರು. ಬಸವರಾಜ ಪೂಜಾರ ನಿರೂಪಿಸಿದರೆ, ಅಣ್ಣಪ್ಪ ಚಿಕ್ಕಣ್ಣವರ ಸ್ವಾಗತಿಸಿ, ವಿನಾಯಕ ಕುರುಬರ ವಂದಿಸಿದರು.


ಇದೇ ರೀತಿ ಸೆಪ್ಟೆಂಬರ್ 22 ರಂದು ಗದಗ್ ನಗರದಲ್ಲಿ ಏರ್ಪಡಿಸಲಾಗಿದ್ದ ಎಡಪಕ್ಷಗಳ ಜಿಲ್ಲಾಮಟ್ಟದ ಸಮಾವೇಶವನ್ನು ನಿತ್ಯಾನಂದ ಸ್ವಾಮಿ ಉದ್ಘಾಟಿಸಿದ್ದರು. ಬಿ.ಎಸ್. ಸೊಪ್ಪಿನ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗಜೇಂದ್ರಗಡ ಪುರಸಭೆಯ ಸಿಪಿಐ(ಎಂ) ಸದಸ್ಯ ಎಂ.ಎಸ್. ಹಡಪದ ಭಾಗವಹಿಸಿದ್ದರು. ಮಹಾಗುಂಡಪ್ಪ ಅಂಗಡಿ ಸ್ವಾಗತಿಸಿದರು. ಬಸವರಾಜ ಮಂತೂರ ವಂದಿಸಿದರು. ಮಹೇಶ್ ಹಿರೇಮಠ್ ನಿರೂಪಿಸಿದರು. ವೇದಿಕೆಯ ಮೇಲೆ ಜಿಲ್ಲಾ ಸಮಿತಿ ಸದಸ್ಯ ಪೀರು ರಾಠೋಡ್ ಉಪಸ್ಥಿತರಿದ್ದರು.

ಸೆ. 24 ರಂದು ಹುಬ್ಬಳ್ಳಿಯಲ್ಲಿ ನಡೆದ ಧಾರವಾಡ ಜಿಲ್ಲಾ ಸಮಾವೇಶವನ್ನು ಸಿಪಿಐ ರಾಷ್ಟ್ರೀಯ ಮಂಡಳಿಯ ಸದಸ್ಯ ಡಾ. ಸಿದ್ದನ ಗೌಡ ಪಾಟೀಲ್ ಉದ್ಘಾಟಿಸಿದರು. ಸಿಪಿಐ(ಎಂ)ನ ನಿತ್ಯಾನಂದ ಸ್ವಾಮಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಸಿಪಿಐನ ಬಾಲಚಂದ್ರ ಗಂಗೂರ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಮಹೇಶ್ ಪತ್ತಾರ್ ಎಲ್ಲರನ್ನು ಸ್ವಾಗತಿಸಿದರು. ಬಿ.ಎಸ್. ಸೊಪ್ಪಿನ್ ಪ್ರಾಸ್ತಾವಿಕ ಮತುಗಳನ್ನು ಆಡಿದರು. ಕೊನೆಯಲ್ಲಿ ಎನ್.ಎ. ಖಾಜಿ ವಂದಿಸಿದರು.

– ಬಸವರಾಜ ಪೂಜಾರ

JANASHAKTHI KANNADA VARA PATRIKE OCT 6, 2013 Price : Rs. 10/- RNI No. KARKAN /2006/17926 Posted on every
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WP

'ಲೂಸಿಯಾ' ಎಂಬ ಅಫೀಮಿನಲ್ಲಿ ಸಮಾಜ



–ಎಸ್. ಶಂಕರ್, ಬೆಂಗಳೂರು


ಒಂದು ಹಳ್ಳಿಯಿಂದ ಬೆಂಗಳೂರಿಗೆ ಬಂದು ಸಿನಿಮಾ ಮಂದಿರದಲ್ಲಿ ಅಸಂಘಟಿತ ಕಾರ್ಮಿಕನಾಗಿ ದುಡಿಯುತ್ತಿರುವ ಒಬ್ಬ ಯುವಕ ಮಧ್ಯರಾತ್ರಿ ನಿದ್ದೆಬಾರದೆ ಮನೆಯಿಂದ ಹೊರಗೆ ಬಂದಾಗ ಕೆಲವು ಘಟನೆಗಳು ನಡೆದು ಅವನಿಗೆ ನಿದ್ದೆ ಮಾಡಲು ಮಾದಕ ಔಷಧಿಯ ಮಾತ್ರೆಗಳು ದೊರೆಯುತ್ತದೆ. ಅದರ ಹೆಸರು "ಲೂಸಿಯಾ". ಈ ಮಾತ್ರೆಗಳನ್ನು ದಿನ ತಿಂ-ದರೆ ನಿದ್ರೆಯಲ್ಲಿ ಆ ವ್ಯಕ್ತಿಯ ಆಸೆಗೆ ತಕ್ಕಂತೆ ಕನಸುಗಳು ಬೀಳುತ್ತದೆ. ಈ ಮಾತ್ರೆಗಳನ್ನು ತೆಗೆದು ಕೊಳ್ಳುತ್ತಲೆ ಇರಬೇಕು. ನಿಲ್ಲಿಸುವಂತೆ ಇಲ್ಲ. ವ್ಯಕ್ತಿಗೆ ಬೀಳುವ ಕನಸುಗಳು ಅವನ ನಿಜ ಜೀವನದಲ್ಲಿನ ವಿರೋಧ ಅಂಶಗಳಂತೆ. ನಿಜ ಜೀವನದಲ್ಲಿ ಆತ ಸಾಧಾರಣ ಕಾರ್ಮಿಕ. ಕನಸಿನಲ್ಲಿ ಆತನೆ ಏಕಮಾತ್ರ ಸೂಪರ್ ಸ್ಟಾರ್ –ಸಿನಿಮಾ ನಾಯಕ. ನಿಜ ಜೀವನದಲ್ಲಿ ಅವನ ಕೈಗೆ ಸಿಗದ್ದು, ಕನಸಿನಲ್ಲಿ ಎಲ್ಲವೂ ಅವನದ್ದೇ. ಹೀಗೆ ಕೊನೆಗೆ ಕನಸು ನಿಜವೋ, ನಿಜ ಜೀವನವೇ ಕನಸೋ ಎನ್ನುವ ಸ್ಥಿತಿ. ಆತ್ಮಹತ್ಯೆಗೆ ಯತ್ನಿಸಿ ಕೋಮಾ ಸ್ಥಿತಿಗೆ ಬರುತ್ತಾನೆ. ವೈದ್ಯರ ಚಿಕಿತ್ಸೆಯಿಂದ ಗುಣ ಮುಖನಾಗುತ್ತಾನೆ. ಇದು ಲೂಸಿಯ ಸಿನಿಮಾ ಕಥೆ.

ಕೆಲವು ಮಾದಕ ವಸ್ತುಗಳು ವ್ಯಕ್ತಿಯ ಮನಸ್ಸನ್ನು ವಾಸ್ತವದಿಂದ ದೂರಮಾಡಿ ಭ್ರಾಮಕ ಸ್ಥಿತಿಯನ್ನು ನಿರ್ಮಿಸಿ ಸ್ವಲ್ಪ ಸ್ವಲ್ಪವಾಗಿ ವ್ಯಕ್ತಿಯನ್ನು ಸಾಮಾಜಿಕವಾಗಿ ನಿರುಪಯೋಗಿಯನ್ನಾಗಿ ಮಾಡುತ್ತದೆ. 90 ರ ದಶಕದ ನಂತರ ದೇಶದಲ್ಲಿ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳನ್ನು ತೀವ್ರವಾಗಿ ಜಾರಿಗೆ ತರಲಾಗಿದೆ. ಜಾಗತೀಕರಣ ಯುಗದಲ್ಲಿ ಪತ್ರಿಕೆ, ಟಿವಿ, ಎಫ್‌ಎಂ ರೇಡಿಯೋ, ಧಾರಾವಾಹಿಗಳು, ಸಿನಿಮಾ, ಅಂತರ ಜಾಲ ಮುಂತಾದ ಮಾಧ್ಯಮಗಳ ಮೂಲಕ ವ್ಯಕ್ತಿ ಮತ್ತು ಸಮಾಜದ ಮನೋಭಾವವನ್ನು ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿಗೆ ತಕ್ಕಂತೆ ರೂಪಿಸುವುದು. ಇದಕ್ಕೆ ಕಂಪನಿಗಳು ಬಳಸುವ ವಿಧಾನ ಸುಳ್ಳನ್ನು ಸುಂದರವಾಗಿ ಹೇಳುವ ಜಾಹಿರಾತುಗಳು. ವ್ಯಕ್ತಿಯನ್ನು ಮನುಷ್ಯನನ್ನಾಗಿ ನೋಡದೆ, ಗಿರಾಕಿಯಾಗಿ ಮಾಡಲು ಜಾಗತೀಕರಣ ಇಂದು ನಿರ್ಮಾಣ ಮಾಡುತ್ತಿರುವ ಹುನ್ನಾರಗಳ ನಡುವೆ ವ್ಯಕ್ತಿ ತನಗೆ ತಿಳಿಯದೇ ಬಿರುಗಾಳಿಗೆ ಸಿಕ್ಕ ತರಗೆಲೆಯಂತಾಗಿದ್ದಾನೆ.

ಉತ್ತಮ ವೇತನ ಶ್ರಮಕ್ಕೆ ತಕ್ಕ ಪ್ರತಿಫಲ



ನೀಡಿ ವ್ಯಕ್ತಿ ಬಯಸುವ ವಸ್ತುಗಳನ್ನು ಕೊಳ್ಳಲು ಬೇಕಾದ ಆದಾಯದ ಮೂಲಗಳನ್ನು ಹೆಚ್ಚಿಸುವ ಯಾವುದೇ ಸುಧಾರಣೆಗಳನ್ನು ತರಲು ಆಳುವವರಿಗೆ ಮನಸ್ಸಿಲ್ಲ. ಆದರೆ ಆಸೆಯ ಮಾದಕ ವಸ್ತುವನ್ನು ಮಾತ್ರ ಜಾಗತೀಕರಣ



ನಿರಂತರವಾಗಿ ವ್ಯಕ್ತಿಗೆ ಮತ್ತು ಸಮಾಜಕ್ಕೆ ನೀಡುತ್ತಲೇ ಬರುತ್ತಿದೆ. ವ್ಯಕ್ತಿಗೆ, ಸಮಾಜಕ್ಕೆ ಕನಸುಗಳು ಬೀಳುತ್ತಲೇ ಇದೆ. ವಾಸ್ತವದ ಬದುಕಿನಲ್ಲಿ ಅವುಗಳು ಸಿಗದೆ ನಿರಾಶರಾಗಿ ಕೌಟುಂಬಿಕ, ಸಮಾಜಿಕ ಜವಾಬ್ದಾರಿಗಳನ್ನು ಬಿಡುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೆ ಇದೆ. ಇಂದು 'ಕನಸು ಮುಖ್ಯವೋ– ವಾಸ್ತವ ಬದುಕು ನಿಜವೋ ಎಂಬ ಪರಿಸ್ಥಿತಿಯ ಸಮಾಜದಲ್ಲಿದೆ.

ಜಾಗತೀಕರಣ ತಾನು ಸೃಷ್ಟಿಸಿದ ಮರುಭೂಮಿಯಲ್ಲಿ ಹಸಿರು ತರಲು ತನ್ನಿಂದ ಮಾತ್ರ ಸಾಧ್ಯ ಎಂದು ಹೇಳುತ್ತದೆ. ಒಂದು ಭ್ರಮೆಯಿಂದ ಇನ್ನೊಂದು ಭ್ರಮೆಗೆ ತಂದಿರುವ ಜಾಗತೀಕರಣದ 'ಲೂಸಿಯಾ'ವನ್ನು ಮಾತ್ರ. ಜನ ಸಮುದಾಯವನ್ನು ನಿರಂತರವಾಗಿ ನಿಷ್ಕ್ರಿಯರನ್ನಾಗಿಸುತ್ತಿದೆ. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಸತತ ಹೋರಾಟಗಳಿದ್ದರೂ, ಆಳುವವರು ನಿರಂತರವಾಗಿ ನೀಡುತ್ತಿರುವ ಆರ್ಥಿಕ ಸುಧಾ ರಣೆಯ 'ಲೂಸಿಯಾ' ಗುಳಿಗೆಗಳು, ವಿಶಾಲ ಜನ ಸಮುದಾಯವನ್ನು ದಟ್ಟದರಿದ್ರರನ್ನಾಗಿಸಿ, ಬೆರಳೆಣಿಕೆಯ ಬಂಡವಾಳಗಾರರನ್ನು ಹೊಳೆಯುವಂತೆ ಮಾಡಿದೆ. ಭ್ರಮೆ ಸೃಷ್ಟಿಸುವ ಉದ್ಯಮಗಳು. (ಷೇರುಪೇಟೆ, ರಿಯಲ್ ಎಸ್ಟೇಟ್, ಫಲಜ್ಯೋತಿಷ್ಯ, ಮಾದಕ ವಸ್ತು, Be-fore-Aftore) ಬೆಳೆಯುತ್ತಿರುವುದು, ಮಾಲಿಕ ಶಂಕರಣ್ಣನ ಥೇಟರ್ ನಷ್ಟದಲ್ಲಿ ನಡೆಯುವುದು, ದೇಶಿಯ ಸಣ್ಣ ಕೈಗಾರಿಕೆಗಳನ್ನು ಸಂಕೇತಿಕವಾಗಿ ಸೂಚಿಸುತ್ತದೆ. ಜಾಗತೀಕರಣವು ದುಡಿಯುವ ಸಮುದಾಯವನ್ನು ಯಾವುದೇ ಕಾರ್ಮಿಕ ಹಕ್ಕುಗಳಿಲ್ಲದೆ, ಸಾಮಾಜಿಕ ಭದ್ರತೆಗಳಿಲ್ಲದಂತೆ ಅತಂತ್ರರನ್ನಾಗಿ ಮಾಡಿರುವುದರಿಂದ. ಅಂದು ದುಡಿದು ಅಂದೇ ತಿನ್ನುವ ಬೀಡಿ ಕಾರ್ಮಿಕನ ಅಸಹಾಯಕ ಸ್ಥಿತಿಯನ್ನು ಚಿತ್ರದ ನಾಯಕ "ನಿಕ್ಕಿ" ಮೂಲಕ ಲೂಸಿಯ ಸಿನಿಮಾ ತೆರೆದಿದೆ.

ಪ್ರತಿಯೊಬ್ಬ ಅಸಂಘಟಿತ ಕಾರ್ಮಿಕನ ಜೀವಂತ ಪ್ರತಿನಿಧಿ ನಾಯಕ "ನಿಕ್ಕಿ" ಮೂರು ಸಾವಿರ ಸಂಬಳದ ಸಿನಿಮಾ ಮಂದಿರದ ಕೆಲಸ ಬಿಟ್ಟು ಬೇರೇನೂ ಮಾಡಲಾಗದ ಅಸಹಾಯಕ. ಮಾಡುವುದಿದ್ದರೂ, ಬೇರೊಂದು ಅಸಂಘಟಿತ ಕ್ಷೇತ್ರದ ಕೆಲಸವಾದ ತರಕಾರಿ ಮಾರುವುದು, ಹೋಟಲ್ ಕೆಲಸ, ಸೆಕ್ಯೂರಿಟಿ ಗಾರ್ಡ್ ಇತ್ಯಾದಿ ಈ ಕೆಲಸಗಳಿಂದ ಅತನ ಆದಾಯ ಹೆಚ್ಚುವ ಸಾಧ್ಯತೆಗಳೇ ಇಲ್ಲ. ಇನ್ನು ಜಾಗತೀಕರಣದಿಂದ ಬಂದಿರುವ ಉದ್ಯೋಗಗಳನ್ನು ಮಾಡಲು ಇಂಗ್ಲಿ ಜ್ಞಾನ ಅತ್ಯವಶ್ಯಕ, ಅದು ಆತನ ತ ಹೋಗದು, ಇಂಗ್ಲೀಷ್ ಕಲಿತರು . ಮಲ್ಟಿಪ್ಲೆಕ್ಸ್ ಸಿನಿಮಾ ಮಂದಿರದಲ್ಲಿ ಅಷ್ಟೇ? ಇನ್ನು ಅವನು ಏನನ್ನಾದರು ಸಾಧಿಸುವುದಿದ್ದರೆ 15 ವರ್ಷಗಳಿಂದ ಕೊಳೆಯುತ್ತಿರುವ ಸಿನಿಮಾವನ್ನು ತೆ-ರೆಗೆ ತರಲು ಹೋಗುವುದು. 30 ರು ಟಿಕೇಟು ಕೊಂಡು ಯಾರು ನೋಡ ಬರದ ಪರಿಸ್ಥಿತಿ. ಇತನ ಅಸಹಾಯ ಕಂಡೂ ಕೆಲವು ಗೆಳೆಯರು ಸಹಾಯ ಬರುತ್ತಾರೆ, ಅಷ್ಟೇ? ಇಂದು ಕಡಿಮೆ ಆದಾಯದ ಕೆಲಸಗಳಲ್ಲಿ ದುಡಿಯುತ್ತ ಯುವಕರಿಗೆ ಮದುವೆಗೆ ಹೆಣ್ಣು ಸಿಗ ಇರುವುದು, ಹೀಗೆ ಜಾಗತೀಕರಣದ ಪರಿಣಾಮಗಳನ್ನು "ಲೂಸಿಯಾ" ಸಿ ಸ್ಪಷ್ಟವಾಗಿ ತೆರೆದಿದ್ದೆ.

ಕನ್ನಡದಲ್ಲಿ ಇಂತಹ ಸಿನಿಮಾ ನಿ ನಿರ್ದೇಶಕ ಪವನ್‌ಕುಮಾರರವರನ್ನು ಅಭಿನಂದಿಸಬೇಕು. ನಾಯಕ ನಟ, ರ್ ಮಾಲಿಕ ಶಂಕರಣ್ಣ ಪಾತ್ರದ ನಟ ತುಂಬ ಸೊಗಸಾಗಿದೆ. ಕನಸನ್ನು ತೋ ಕಪ್ಪು–ಬಿಳುಪು ಅಳವಡಿಸಿರುವುದು ಅರ್ಥಪೂರ್ಣವಾಗಿದೆ. ಉತ್ತಮ ಸಂಗೀತ, ಮತ್ತೆ ಮತ್ತೆ ಕೇಳ ಬೇಕೆನಿ ಹಾಡುಗಳು ಇದ್ದರೂ ಬೆಂಗಳೂರಿನ ಹಲವು ಸಿನಿಮಾ ಥಿಯೇಟರ್‌ಗಲ್ಲಿ ಸಿನಿಮಾ ಇಲ್ಲದೇ ಇರುವುದು, ಅಂ-ದರೆ ಎತ್ತಂಗಡಿ ಮಾಡಿಸಿರುವುದು ಲೂಸಿಯಾ(ಜಾಗತೀಕರಣ) ಅಫೀಮ ಸಮಾಜಕ್ಕೆ ನಿರಂತರವಾಗಿಸುವ ಕುತಂತ್ರವೇ?

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI